ಗುರುವಾರ, ಮಾರ್ಚ್ 4, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 63 | ಪುಟ 18

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ

ಸ್ಪರ್ಧಾತ್ಮಕ ಪರೀಕ್ಷೆಗೆ ಓದಬೇಕೆಂದು ನಿರ್ಧರಿಸಿದ್ದರೆ ಅದಕ್ಕಾಗಿ ಕೆಲವು ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಇದು ಯಶಸ್ಸಿಗೆ ಮುನ್ನುಡಿ ಇದ್ದಂತೆ.



ಆಳ-ಅಗಲ: ಕಾಂಗ್ರೆಸ್ ಒಳಜಗಳದ ಕೋಲಾಹಲ

ಮ್ಯಾನ್ಮಾರ್: 33 ಮಂದಿ ಪ್ರತಿಭಟನಕಾರರ ಹತ್ಯೆ 15

ಸೀಟು ಹಂಚಿಕೆ: ಡಿಎಂಕೆಗೆ ತಲೆನೋವು 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
51,444 ▲	15,246 ▲	₹46,550 (ಬೆಂಗಳೂರು)	₹69,600 (ಬೆಂಗಳೂರು)	72.72 ▲

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ.. ಪುಟ-5

ವೇತನ ಹೆಚ್ಚಳಕ್ಕೆ ಬಿಸಿಯೂಟ ನೌಕರರ ಪಟ್ಟು 4

ಇಂದಿನ ಪಾಡ್‌ಕಾಸ್ಟ್ ವಿಶೇಷ

ಆಟ-ನೋಟ
ವನಿತಾ ಧ್ವನಿ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬಿಕ್ಕಟ್ಟು ಇತ್ಯರ್ಥಕ್ಕೆ ವರದಿ ಪಡೆಯಲು ಸಂಪುಟ ಸಭೆಯಲ್ಲಿ ನಿರ್ಧಾರ

ಮೀಸಲಾತಿ: ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಸಮುದಾಯಗಳು ಮೀಸಲಾತಿಯಲ್ಲಿ ಹೆಚ್ಚಿನ ಪಾಲು ಪಡೆಯಲು, ಪ್ರವರ್ಗಗಳಲ್ಲಿ ಬದಲಾವಣೆ ಮತ್ತು ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಇಟ್ಟಿರುವ ಬೇಡಿಕೆಗಳ ಕುರಿತು ಪರಿಶೀಲನೆ ನಡೆಸಲು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ತ್ರಿಸದಸ್ಯ ಸಮಿತಿ ರಚಿಸಲು ಬುಧವಾರ ನಡೆದ ಸಂಪುಟ ಸಭೆ ತೀರ್ಮಾನಿಸಿದೆ.

ತಮ್ಮನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವಂತೆ ಕುರುಬ ಸಮುದಾಯ ಪಟ್ಟು ಹಿಡಿದಿತ್ತು. ಪಂಚಮಸಾಲಿ ಸಮುದಾಯಕ್ಕೆ ಪ್ರವರ್ಗ '2ಎ' ಅಡಿಯಲ್ಲಿ ಮೀಸಲಾತಿ ನೀಡಲು ಕೂಡಲ ಸಂಗಮದ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಗುರುವಾರದ (ಮಾರ್ಚ್ 4) ಗಡುವು ನೀಡಿದ್ದರು.

ಎಸ್‌.ಟಿ ಸಮುದಾಯಗಳಿಗೆ ನೀಡಿರುವ ಮೀಸಲಾತಿ ಪ್ರಮಾಣವನ್ನು ಶೇ 7ಕ್ಕೆ ಹೆಚ್ಚಿಸುವಂತೆ ವಾಲ್ಮೀಕಿ ಸಮುದಾಯವೂ ಹೋರಾಟ ನಡೆಸುತ್ತಿದೆ. ವೀರಶೈವ ಮತ್ತು ಲಿಂಗಾಯತ ಸಮುದಾಯಗಳ ಹಲವು ಉಪ ಪಂಗಡಗಳು ತಮ್ಮನ್ನು ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸುವಂತೆ ಬೇಡಿಕೆ ಇಟ್ಟಿವೆ. ಒಕ್ಕಲಿಗ ಸಮುದಾಯ ಕೂಡ ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ಹೋರಾಟಕ್ಕೆ ಸಜ್ಜಾಗುತ್ತಿದೆ.

ಮೀಸಲಾತಿಗಾಗಿ ಹಲವು ಸಮುದಾಯಗಳು ಏಕಕಾಲಕ್ಕೆ ಹೋರಾಟಕ್ಕೆ ಇಳಿದಿರುವುದರಿಂದ ರಾಜ್ಯ ಸರ್ಕಾರ ಇಕ್ಕಟ್ಟಿಗೆ ಸಿಲುಕಿದೆ. ಪಂಚಮಸಾಲಿ ಸಮುದಾಯದ ಹೋರಾಟ ದಿನ ಕಳೆದಂತೆ ರಾಜಕೀಯವಾಗಿಯೂ ಸರ್ಕಾರಕ್ಕೆ ಇರಿಸು–ಮುರಿಸು ಉಂಟು ಮಾಡುತ್ತಿದೆ. ಮೀಸಲಾತಿಗಾಗಿ ಹೋರಾಟಕ್ಕೆ ಇಳಿದಿರುವ ಎಲ್ಲ ಸಮುದಾಯಗಳನ್ನೂ ಸಮಾಧಾನಪಡಿಸಲು ಸರ್ಕಾರ ಮುಂದಾಗಿದೆ.

ಸಂಪುಟ ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ, 'ಮೀಸಲಾತಿ ಬೇಡಿಕೆಗಳ ವಿಚಾರದಲ್ಲಿ ಸಂವಿಧಾನ ಮತ್ತು ಕಾನೂನಿಗೆ ಸಂಬಂಧಿಸಿದ ಪ್ರಶ್ನೆಗಳೂ ಅಡಕವಾಗಿವೆ. ಈ ಎಲ್ಲ ಅಂಶಗಳನ್ನೂ ಪರಿಶೀಲಿಸಲು ತ್ರಿಸದಸ್ಯ ಸಮಿತಿ ರಚಿಸುವ ನಿರ್ಧಾರ ಕೈಗೊಳ್ಳಲಾಗಿದೆ' ಎಂದರು.

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಸಮಿತಿಯ ನೇತೃತ್ವ ವಹಿಸಲಿದ್ದಾರೆ. ಅವರೊಂದಿಗೆ ಒಬ್ಬ ನಿವೃತ್ತ ಅಧಿಕಾರಿ ಮತ್ತು ಒಬ್ಬ ಸಮಾಜಶಾಸ್ತ್ರಜ್ಞ ಸಮಿತಿ ಸದಸ್ಯರಾಗಿರುತ್ತಾರೆ. ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರ ನೇಮಕಾತಿಯ ಅಧಿಕಾರವನ್ನು ಮುಖ್ಯಮಂತ್ರಿಯವರ ವಿವೇಚನೆಗೆ ಬಿಡುವ ನಿರ್ಧಾರವನ್ನು ಸಂಪುಟ ಕೈಗೊಂಡಿದೆ ಎಂದು ತಿಳಿಸಿದರು.

ಸಮಿತಿ ಮಾರ್ಗದರ್ಶನದಲ್ಲಿ ನಿರ್ಧಾರ: ಪಂಚಮಸಾಲಿ ಸಮುದಾಯದ ಬೇಡಿಕೆ ಕುರಿತು ಪರಿಶೀಲಿಸಿ, ವರದಿ ನೀಡುವಂತೆ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಸೂಚಿಸಲಾಗಿದೆ. ಕುರುಬ ಸಮುದಾಯವನ್ನು ಎಸ್‌.ಟಿ ಪಟ್ಟಿಗೆ ಸೇರಿಸುವ ಬೇಡಿಕೆ ಕುರಿತು ಮೈಸೂರಿನ ಬುಡಕಟ್ಟುಗಳ ಅಧ್ಯಯನ ಸಂಸ್ಥೆಯ ಮೂಲಕ ಅಧ್ಯಯನ ನಡೆಯುತ್ತಿದೆ. ಎಸ್‌.ಟಿ ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನದಾಸ್ ನೇತೃತ್ವದ ಸಮಿತಿ ವರದಿ ನೀಡಿದೆ. ಈ ಎಲ್ಲವನ್ನೂ ಪರಿಶೀಲಿಸಿ, ಮಾರ್ಗದರ್ಶನ ನೀಡುವ ಅಧಿಕಾರವನ್ನು ತ್ರಿಸದಸ್ಯ ಸಮಿತಿಗೆ ನೀಡಲಾಗುವುದು ಎಂದು ಸಚಿವರು ಹೇಳಿದರು.

ಶೇ 50ರ ಮಿತಿಯ ಕುರಿತು ಸಲಹೆ



ಬಸವರಾಜ ಬೊಮ್ಮಾಯಿ

ಶಿಕ್ಷಣ ಮತ್ತು ಉದ್ಯೋಗದಲ್ಲಿನ ಮೀಸಲಾತಿಯ ಪ್ರಮಾಣ ಶೇಕಡ 50ಕ್ಕೆ ಮೀರುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಸಂವಿಧಾನ ಪೀಠ ಇಂದಿರಾ ಸಾಹ್ನಿ ಪ್ರಕರಣದಲ್ಲಿ ತೀರ್ಪು ನೀಡಿದೆ. ಕೆಲವು ರಾಜ್ಯಗಳು ಶೇ 50ಕ್ಕಿಂತ ಹೆಚ್ಚಿನ ಮೀಸಲಾತಿ ನೀಡುವ ನಿರ್ಧಾರ ಕೈಗೊಂಡಾಗ ಸುಪ್ರೀಂಕೋರ್ಟ್ ತಡೆ ನೀಡಿರುವ, ತೀರ್ಮಾನ ರದ್ದು ಮಾಡಿರುವ ಉದಾಹರಣೆಗಳಿವೆ ಎಂದು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ಶೇ 50ರ ಮಿತಿಗೆ ಸಂಬಂಧಿಸಿದಂತೆಯೂ ಸರ್ಕಾರ ತ್ರಿಸದಸ್ಯ ಸಮಿತಿಯ ಸಲಹೆಯನ್ನು ಪಡೆಯಲಿದೆ. ಹಿಂದುಳಿದ ವರ್ಗಗಳ ಆಯೋಗದ ವರದಿ, ಕುಲಶಾಸ್ತ್ರೀಯ ಅಧ್ಯಯನ ವರದಿಗಳನ್ನೂ ಪರಿಶೀಲಿಸಿ ಸಲಹೆ ನೀಡುವಂತೆ ಕೋರಲಾಗುವುದು ಎಂದರು.

ರಮೇಶ ಜಾರಕಿಹೊಳಿ ರಾಜೀನಾಮೆ

ಬಿಜೆಪಿ ವರಿಷ್ಠರ ತಾಕೀತಿನ ಬಳಿಕ ಸಚಿವರ ಪದತ್ಯಾಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರಿ ಕೊಡಿಸುವ ಆಮಿಷವೊಡ್ಡಿ ಯುವತಿಯೊಬ್ಬರನ್ನು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಂಡಿರುವ ಆರೋಪಕ್ಕೆ ಸಿಲುಕಿರುವ ಜಲ ಸಂಪನ್ಮೂಲ ಸಚಿವ ರಮೇಶ ಜಾರಕಿಹೊಳಿ ಬುಧವಾರ ರಾಜೀನಾಮೆ ಸಲ್ಲಿಸಿದ್ದಾರೆ. ರಾಜ್ಯಪಾಲರು ರಾಜೀನಾಮೆಯನ್ನು ಅಂಗೀಕರಿಸಿದ್ದಾರೆ.

ಸಚಿವರು ಯುವತಿಯೊಂದಿಗೆ ಏಕಾಂತದಲ್ಲಿರುವ ವಿಡಿಯೊ ತುಣುಕುಗಳು ಮತ್ತು ಅವರೊಂದಿಗೆ ನಡೆಸಿದ ದೂರವಾಣಿ ಸಂಭಾಷಣೆಯ ಆಡಿಯೊ ತುಣುಕುಗಳೊಂದಿಗೆ ನಾಗರಿಕ ಹಕ್ಕುಗಳ ಹೋರಾಟ ಸಮಿತಿ ಅಧ್ಯಕ್ಷ ದಿನೇಶ್ ಕಲ್ಲಹಳ್ಳಿ ಮಂಗಳವಾರ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಆರೋಪ ನಿರಾಕರಿಸಿದ್ದ ರಮೇಶ ಜಾರಕಿಹೊಳಿ, ರಾಜೀನಾಮೆ ನೀಡಲು ನಿರಾಕರಿಸಿದ್ದರು.

ಮೈಸೂರು ಪ್ರವಾಸ ಮೊಟಕುಗೊಳಿಸಿ ಮಂಗಳವಾರ ರಾತ್ರಿಯೇ ಬೆಂಗಳೂರಿಗೆ ದೌಡಾಯಿಸಿದ್ದ ಸಚಿವರು, ಬುಧವಾರ ಬೆಳಿಗ್ಗೆ ಮುಖ್ಯಮಂತ್ರಿ ಬಿ.ಎಸ್‌. ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ತಮ್ಮ ವಿರುದ್ಧದ ಆರೋಪಗಳಲ್ಲಿ ಹುರುಳಿಲ್ಲ ಎಂದು ಮನವರಿಕೆ ಮಾಡಿಕೊಡಲು ಸಿದ್ಧತೆ ನಡೆಸಿದ್ದರು. ದೆಹಲಿಗೆ ತೆರಳಿ ಬಿಜೆಪಿ ವರಿಷ್ಠರಿಗೂ ಸಮಜಾಯಿಷಿ ನೀಡಲು ಮುಂದಾಗಿದ್ದರು.

ಆದರೆ, ಬುಧವಾರ ಬೆಳಿಗ್ಗೆ ಮುಖ್ಯಮಂತ್ರಿಯವರ ಭೇಟಿ ಸಾಧ್ಯವಾಗಲಿಲ್ಲ. ಅವರ ಪರವಾಗಿ ಬಿಜೆಪಿ ಶಾಸಕರೂ ಆಗಿರುವ ತಮ್ಮ ಬಾಲಚಂದ್ರ ಜಾರಕಿಹೊಳಿ ಅವರು ಯಡಿಯೂರಪ್ಪ ಅವರನ್ನು ಭೇಟಿಮಾಡಿ, ರಮೇಶ ತಪ್ಪೆಸಗಿಲ್ಲ ಎಂದು ಮನವರಿಕೆ ಮಾಡಲು ಯತ್ನಿಸಿದರು. 'ರಮೇಶ ಅವರನ್ನು ಪ್ರಕರಣದಲ್ಲಿ ಸಿಲುಕಿಸುವ ಷಡ್ಯಂತ್ರ ನಡೆದಿದೆ. ಸಿಐಡಿ ಅಥವಾ ಸಿಬಿಐ ತನಿಖೆಗೆ ಆದೇಶಿಸಿ' ಎಂದೂ ಒತ್ತಾಯಿಸಿದರು.

ಮುಖ್ಯಮಂತ್ರಿ ಭೇಟಿ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಬಾಲಚಂದ್ರ, 'ರಮೇಶ ರಾಜೀನಾಮೆಯ ಅಗತ್ಯವಿಲ್ಲ. ಸಿ.ಡಿ ಬಿಡುಗಡೆ ಹಿಂದೆ ಪ್ರಭಾವಿಗಳ ಕೈವಾಡವಿದೆ. ವಿದೇಶದಿಂದ ಯುಟ್ಯೂಬ್‌ನಲ್ಲಿ ವಿಡಿಯೊ ಅಪ್‌ಲೋಡ್ ಮಾಡಲಾಗಿದೆ. ಸಿ.ಡಿ ಬಿಡುಗಡೆ ಮಾಡಿರುವ ವ್ಯಕ್ತಿ ವಿರುದ್ಧ ₹100 ಕೋಟಿ ಮೊತ್ತದ ಮಾನನಷ್ಟ ಮೊಕದ್ದಮೆ ಹೂಡಲಾಗುವುದು' ಎಂದು ಹೇಳಿಕೆ ನೀಡಿದ್ದರು.

ವರಿಷ್ಠರಿಂದ ಖಡಕ್ ಸೂಚನೆ: ಈ ಎಲ್ಲ ಬೆಳವಣಿಗೆಗಳ ನಡುವೆಯೇ ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಮತ್ತು ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್‌. ಸಂತೋಷ್ ಬುಧವಾರ ಬೆಳಿಗ್ಗೆ ದೆಹಲಿಯಲ್ಲಿ ತುರ್ತು ಸಭೆ ನಡೆಸಿ ಪ್ರಕರಣದ ಕುರಿತು ಚರ್ಚಿಸಿದರು. ತಕ್ಷಣ ರಾಜೀನಾಮೆ ನೀಡುವಂತೆ ರಮೇಶ ಜಾರಕಿಹೊಳಿ ಅವರಿಗೆ ಸಂದೇಶ ರವಾನಿಸಿದರು.

7ನೇ ಪುಟ ನೋಡಿ

ಶೀಘ್ರ ತನಿಖೆಗೆ ಆಗ್ರಹ



'ನನ್ನ ಮೇಲೆ ಬಂದಿರುವ ಆರೋಪಗಳು ಸತ್ಯಕ್ಕೆ ದೂರವಾಗಿವೆ. ಈ ಬಗ್ಗೆ ಶೀಘ್ರದಲ್ಲಿ ತನಿಖೆ ಆಗಬೇಕು. ನಿರ್ದೋಷಿಯಾಗುವ ವಿಶ್ವಾಸವಿದ್ದರೂ, ನೈತಿಕ ಹೊಣೆ ಹೊತ್ತು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುತ್ತೇನೆ' ಎಂದು ರಮೇಶ ಜಾರಕಿಹೊಳಿ ಅವರು ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ.

ಯುಜಿಸಿ ನಿಯಮದಂತೆ ಬಡ್ತಿಗೆ ಆಯ್ಕೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಮತ್ತು ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕರು, ಗ್ರಂಥಪಾಲಕರು ಮತ್ತು ದೈಹಿಕ ಶಿಕ್ಷಣ ಬೋಧಕರಿಗೆ 2016ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿ ಹಾಗೂ ಯುಜಿಸಿ 2018 ರಲ್ಲಿ ಹೊರಡಿಸಿದ ನಿಯಮದಂತೆ ಬಡ್ತಿ ನೀಡಲು ರಾಜ್ಯ ಸರ್ಕಾರ ಆಯ್ಕೆ ಸಮಿತಿ ರಚಿಸಿದೆ.

ಈ ಸಮಿತಿ, ಪದೋನ್ನತಿ ನೀಡುವ ಸಂಬಂಧ ನಿಯಮಗಳಲ್ಲಿರುವ ಅಂಶಗಳ ಪ್ರಕಾರ ಸಮಗ್ರ ಮಾರ್ಗಸೂಚಿಯನ್ನು ರೂಪಿಸಿ, ಅರ್ಹರಿಗೆ ಪದೋನ್ನತಿ ನೀಡಲು ಪರಿಶೀಲಿಸುವಂತೆ ಸೂಚಿಸಲಿದೆ. ಪದೋನ್ನತಿ ನೀಡುವ ಸಂಬಂಧ ಕಾಲೇಜು ಶಿಕ್ಷಣ ಇಲಾಖೆ ಸಲ್ಲಿಸಿದ್ದ ಪ್ರಸ್ತಾವನೆಗೆ ಆರ್ಥಿಕ ಇಲಾಖೆ ಸಹಮತಿ ನೀಡಿದೆ.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣದ ಆಯುಕ್ತರ ಅಧ್ಯಕ್ಷತೆಯ ಈ ಸಮಿತಿಗೆ ಕಾಲೇಜು ಶಿಕ್ಷಣ ಇಲಾಖೆಯ ಮುಖ್ಯ ಆಡಳಿತಾಧಿಕಾರಿ ಸಂಚಾಲಕರಾಗಿದ್ದಾರೆ. ಉಳಿದಂತೆ, ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕ, ಹೆಚ್ಚುವರಿ ನಿರ್ದೇಶಕ, ಅಧ್ಯಕ್ಷರು ನಾಮನಿರ್ದೇಶನ ಮಾಡುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಇಬ್ಬರು ಪ್ರಾಂಶುಪಾಲರು ಮತ್ತು ಸರ್ಕಾರ ನಾಮನಿರ್ದೇಶನ ಮಾಡಲಿರುವ ವಿಶ್ವವಿದ್ಯಾಲಯ ಪ್ರೊಫೆಸರ್ ಶ್ರೇಣಿಯ ಇಬ್ಬರು ಪ್ರತಿನಿಧಿಗಳು, ಅಧ್ಯಕ್ಷರು ನಾಮ ನಿರ್ದೇಶನ ಮಾಡುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಇಬ್ಬರು ವಿಷಯ ತಜ್ಞರು, ಎಸ್‌ಸಿ, ಎಸ್‌ಟಿ, ಒಬಿಸಿ, ಅಲ್ಪಸಂಖ್ಯಾತ, ಮಹಿಳಾ ಪ್ರತಿನಿಧಿಗಳು ಸದಸ್ಯರು.

ಹೊಸ ಸಂಸ್ಥೆ ಆರಂಭಿಸುವ ಪ್ರಸ್ತಾವಕ್ಕೆ ಸಂಪುಟದ ಒಪ್ಪಿಗೆ

ಬಿಬಿಎಂಪಿ: ಕಸ ವಿಲೇವಾರಿಗೆ ಕಂಪನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಕಸ ಸಂಗ್ರಹ ಮತ್ತು ವಿಲೇವಾರಿಗೆ ರಾಜ್ಯ ಸರ್ಕಾರ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪಾಲುದಾರಿಕೆಯಲ್ಲಿ 'ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತ' (ಬಿಎಸ್‌ಡಬ್ಲ್ಯುಎಂಎಲ್) ಎಂಬ ಕಂಪನಿಯನ್ನು ಪ್ರಾರಂಭಿಸುವ ಪ್ರಸ್ತಾವಕ್ಕೆ ಬುಧವಾರ ನಡೆದ ಸಂಪುಟ ಸಭೆ ಒಪ್ಪಿಗೆ ನೀಡಿದೆ.



ಸಂಪುಟ ಸಭೆಯ ಬಳಿಕ ಈ ಬಗ್ಗೆ ವಿವರ ನೀಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ, 'ಬಿಬಿಎಂಪಿಯನ್ನು ಕಸ ವಿಲೇವಾರಿ ಕೆಲಸದಿಂದ ಮುಕ್ತಗೊಳಿಸುವ ಉದ್ದೇಶದಿಂದ ನೂತನ ಕಂಪನಿಯನ್ನು ಅಸ್ತಿತ್ವಕ್ಕೆ ತರಲಾಗುತ್ತಿದೆ. ಬಿಬಿಎಂಪಿಯ ಶೇ 51ರಷ್ಟು ಮತ್ತು ರಾಜ್ಯ ಸರ್ಕಾರದ ಶೇ 49ರಷ್ಟು ಪಾಲುದಾರಿಕೆಯೊಂದಿಗೆ ಕಂಪನಿ ಆರಂಭವಾಗಲಿದೆ' ಎಂದರು.

ಬಿಎಸ್‌ಡಬ್ಲ್ಯುಎಂಎಲ್ ಅಧ್ಯಕ್ಷರಾಗಿ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಸಹ ಅಧ್ಯಕ್ಷರಾಗಿ ಬಿಬಿಎಂಪಿ ಆಯುಕ್ತರು ಕಾರ್ಯನಿರ್ವಹಿಸುತ್ತಾರೆ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹುದ್ದೆಗೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರ ಹುದ್ದೆಗೆ ಸಮನಾದ ಅರ್ಹತೆಯುಳ್ಳ ವ್ಯಕ್ತಿಯನ್ನು ಆಡಳಿತ ಮಂಡಳಿಯು ನೇಮಕ ಮಾಡುತ್ತದೆ.

4ನೇ ಪುಟ ನೋಡಿ

ರಾಷ್ಟ್ರೀಯ ಸುರಕ್ಷತಾ ದಿನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಜಾಲಹಳ್ಳಿಯ ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರದಲ್ಲಿ ಮಾ.4ರಂದು ರಾಷ್ಟ್ರೀಯ ಸುರಕ್ಷತಾ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ, ರಾಜ್ಯಮಟ್ಟದ ಸುರಕ್ಷತಾ ಪ್ರಶಸ್ತಿಗಳನ್ನು ಅವರು ಪ್ರದಾನ ಮಾಡಲಿದ್ದಾರೆ.

ರಾಷ್ಟ್ರೀಯ ಸುರಕ್ಷತಾ ಪರಿಷತ್‌ನ ಕರ್ನಾಟಕ ಶಾಖೆಯ ಗೌರವ ಕಾರ್ಯದರ್ಶಿ ಪಿ.ಸಿ. ವೆಂಕಟೇಶ್ವರಲು ಧ್ವಜಾರೋಹಣ ನೆರವೇರಿಸಲಿದ್ದಾರೆ. 'ವಿಪತ್ತಿನಿಂದ ಕಲಿಯಿರಿ ಮತ್ತು ಸುರಕ್ಷಿತ ಭವಿಷ್ಯಕ್ಕಾಗಿ ತಯಾರಿ ನಡೆಸಿರಿ' ಎಂಬ ವಿಷಯವಾಕ್ಯದೊಂದಿಗೆ ಈ ಬಾರಿ ಸುರಕ್ಷತಾ ದಿನವನ್ನು ಆಚರಿಸಲಾಗುತ್ತಿದೆ.

ಪ್ರಶಸ್ತಿ: ಅತ್ಯುತ್ತಮ ಸುರಕ್ಷತಾ ಅಭ್ಯಾಸಗಳನ್ನು ಮತ್ತು ಬಾಯ್ಲರುಗಳ ಉತ್ತಮ ನಿರ್ವಹಣಾ ಪದ್ಧತಿಗಳನ್ನು ಅನುಸರಿಸುತ್ತಿರುವ ಕೈಗಾರಿಕೆಗಳನ್ನು ಇಲಾಖೆಯು ಗುರುತಿಸಿ ಪ್ರಶಸ್ತಿಗಳನ್ನು ನೀಡಲಿದೆ. ಸುರಕ್ಷತಾ ಕ್ಷೇತ್ರದಲ್ಲಿ ಉತ್ತಮ ಸಾಧನೆಯನ್ನು ಮಾಡಿದ ಕಾರ್ಮಿಕರಿಗೂ ಪ್ರಶಸ್ತಿ ನೀಡಲಾಗುತ್ತದೆ. ಸುರಕ್ಷತಾ ರಸಪ್ರಶ್ನೆ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಇದೇ ಸಂದರ್ಭದಲ್ಲಿ ಬಹುಮಾನಗಳನ್ನು ವಿತರಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಕೇಂದ್ರ ಕಾರ್ಮಿಕ ಸಚಿವಾಲಯವು 1966ರ ಮಾರ್ಚ್ 4ರಂದು ರಾಷ್ಟ್ರೀಯ ಸುರಕ್ಷತಾ ಪರಿಷತ್ ಸ್ಥಾಪಿಸಿತು. ಸ್ವಾಯತ್ತ ಸಂಸ್ಥೆಯಾಗಿರುವ ಇದು, ಎಲ್ಲ ಹಂತಗಳಲ್ಲಿ ಸುರಕ್ಷತೆ ಮತ್ತು ಆರೋಗ್ಯದ ಮೇಲಿನ ಸುಸ್ಥಿರತೆಯನ್ನು ವೃದ್ಧಿಸುವುದು, ಉತ್ತೇಜಿಸುವುದು ಮತ್ತು ನಿರ್ವಹಿಸುವ ಕೆಲಸ ಮಾಡುತ್ತದೆ.

ಸಾರ್ವಜನಿಕ ಸ್ಥಳಗಳಲ್ಲಿ 2009ಕ್ಕೆ ಮುನ್ನ ನಿರ್ಮಾಣ

240 ಧಾರ್ಮಿಕ ಕಟ್ಟಡಗಳ ತೆರವು?

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿ 2009ರ ಸೆ.29ಕ್ಕೆ ಮುನ್ನ ನಿರ್ಮಾಣವಾಗಿರುವ 240 ಧಾರ್ಮಿಕ ಕಟ್ಟಡಗಳನ್ನು ತೆರವುಗೊಳಿಸುವಂತೆ ಸರ್ಕಾರಕ್ಕೆ ಬಿಬಿಎಂಪಿ ಶಿಫಾರಸು ಮಾಡಿದೆ.

ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತವಾಗಿ ಧಾರ್ಮಿಕ ಕಟ್ಟಡಗಳನ್ನು ನಿರ್ಮಿಸಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ದಾವೆಯನ್ನು ಸುಪ್ರೀಂ ಕೋರ್ಟ್ 2009ರಲ್ಲಿ ವಿಚಾರಣೆ ನಡೆಸಿತ್ತು. ಸಾರ್ವಜನಿಕ ಸ್ಥಳಗಳಲ್ಲಿರುವ ಧಾರ್ಮಿಕ ಕಟ್ಟಡಗಳ ಸಮೀಕ್ಷೆ ನಡೆಸಿ ಅವುಗಳನ್ನು ತೆರವುಗೊಳಿಸುವ ಬಗ್ಗೆ ರಾಜ್ಯ ಸರ್ಕಾರ ನಿರ್ಧಾರ ಕೈಗೊಳ್ಳಬೇಕು ಎಂದು ಆದೇಶ ಮಾಡಿತ್ತು. ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ರೀತಿಯ ಧಾರ್ಮಿಕ ಕಟ್ಟಡಗಳನ್ನು ನಿರ್ಮಿಸಲು ಇನ್ನು ಅವಕಾಶ ನೀಡಬಾರದು ಎಂದೂ ಸೂಚಿಸಿತ್ತು.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಸಮೀಕ್ಷೆ ನಡೆಸಿದಾಗ ಸಾರ್ವಜನಿಕ ಸ್ಥಳಗಳಲ್ಲಿ 2009ರ ಸೆ. 29ಕ್ಕೆ ಮುನ್ನ 1,893 ಧಾರ್ಮಿಕ ಕಟ್ಟಡಗಳನ್ನು ನಿರ್ಮಿಸಿರುವುದು ಗಮನಕ್ಕೆ ಬಂದಿದೆ. ಈ ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ತೆರವುಗೊಳಿಸಲು, ಸ್ಥಳಾಂತರಿಸಲು ಅಥವಾ ಸಕ್ರಮಗೊಳಿಸಲು ಅವಕಾಶವಿದೆ' ಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ತಿಳಿಸಿದರು.

'ಬಿಬಿಎಂಪಿ ವ್ಯಾಪ್ತಿಯ 1,893 ಧಾರ್ಮಿಕ ಕಟ್ಟಡಗಳಲ್ಲಿ 1,548 ಧಾರ್ಮಿಕ ಕಟ್ಟಡ ಸಕ್ರಮಗೊಳಿಸಬಹುದು ಎಂದು ಸರ್ಕಾರಕ್ಕೆ ಶಿಫಾರಸು ಮಾಡಿದ್ದೇವೆ. 105 ಧಾರ್ಮಿಕ ಕಟ್ಟಡಗಳನ್ನು ಸ್ಥಳಾಂತರ ಮಾಡಬಹುದು ಹಾಗೂ 240 ಕಟ್ಟಡಗಳನ್ನು ತೆರವುಗೊಳಿಸಬೇಕು ಎಂದು ಸರ್ಕಾರಕ್ಕೆ ಶಿಫಾರಸು ಮಾಡಿದ್ದೇವೆ' ಎಂದರು.

'2009ರ ಸೆ. 29ರ ನಂತರ ಒಟ್ಟು 277 ಧಾರ್ಮಿಕ ಕಟ್ಟಡಗಳನ್ನು ಬಿಬಿಎಂಪಿ ವ್ಯಾಪ್ತಿಯಲ್ಲಿ ನಿರ್ಮಿಸಲಾಗಿದೆ. ಸರ್ಕಾರಿ ಜಾಗ ಒತ್ತುವರಿ ಮಾಡಿ ನಿರ್ಮಿಸಲಾಗಿದೆ ಎಂಬ ಬಗ್ಗೆಯೂ ಅಧಿಕಾರಿಗಳು ದಾಖಲೆ ಸಂಗ್ರಹಿಸಿದ್ದಾರೆ. ಅವುಗಳನ್ನು ತೆರವುಗೊಳಿಸುವುದು ಅನಿವಾರ್ಯ. ಅವುಗಳನ್ನು ನಿರ್ಮಿಸಿದವರೇ ತೆರವುಗೊಳಿಸಲು ಅವಕಾಶ ನೀಡುತ್ತೇವೆ. ಅವರು ತೆರವುಗೊಳಿಸದೇ ಹೋದರೆ ಬಿಬಿಎಂಪಿ ವತಿಯಿಂದಲೇ ತೆರವುಗೊಳಿಸುತ್ತೇವೆ. ಈ ಬಗ್ಗೆ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ಗಳ ಅನುಮತಿಯ ಅಗತ್ಯವಿಲ್ಲ. ಅವರ ವರದಿಯನ್ನೂ ಸಲ್ಲಿಸಬೇಕಿದೆ' ಎಂದರು.

ಸುದ್ದಿ 2 ನಿಮಿಷ

ಪ್ರವಾಸೋದ್ಯಮ: ಪಂಕಜ್ ಕುಮಾರ್ ಪಾಂಡೆ ಕಾರ್ಯದರ್ಶಿ

ಬೆಂಗಳೂರು: ಸ್ಥಳ ನಿರೀಕ್ಷೆಯಲ್ಲಿದ್ದ ಐಎಎಸ್ ಅಧಿಕಾರಿ ಪಂಕಜ್‌ಕುಮಾರ್ ಪಾಂಡೆ ಅವರನ್ನು ಪ್ರವಾಸೋದ್ಯಮ ಇಲಾಖೆಯ ಕಾರ್ಯದರ್ಶಿಯಾಗಿ ನಿಯೋಜಿಸಲಾಗಿದೆ.

ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ಟಿ.ಕೆ. ಅನಿಲ್ ಕುಮಾರ್ ಅವರು ಹೆಚ್ಚುವರಿಯಾಗಿ ಪ್ರವಾಸೋದ್ಯಮ ಇಲಾಖೆಯನ್ನು ನಿಭಾಯಿಸುತ್ತಿದ್ದರು.

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಆಯುಕ್ತರಾದ ಎನ್. ಮಂಜುಶ್ರೀ ಅವರನ್ನು ರಾಷ್ಟ್ರೀಯ ಜೀವನೋಪಾಯ ಮಿಷನ್ ನಿರ್ದೇಶಕರಾಗಿ ವರ್ಗಾವಣೆ ಮಾಡಲಾಗಿದೆ. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿವಿಯ ಕುಲಸಚಿವ ಶಿವಾನಂದ ಕಾಪಸಿ ಅವರನ್ನು ಕರ್ನಾಟಕ ರಾಜ್ಯ ವಿದ್ಯುತ್ ಕಾರ್ಪೊರೇಷನ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾಗಿ ವರ್ಗಾವಣೆ ಮಾಡಲಾಗಿದೆ.

ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ವ್ಯವಸ್ಥಾಪಕ ನಿರ್ದೇಶಕ ಕುಮಾರ್ ಪುಷ್ಕರ್ ಅವರಿಗೆ ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ನವೋದ್ಯಮಕ್ಕೆ ಸಹಕಾರ: ಜಯರಾಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವೋದ್ಯಮದ ಆಲೋಚನೆ ಇರುವವರು, ಅದಕ್ಕಾಗಿ ಧನಸಹಾಯ ನಿರೀಕ್ಷೆ ಮಾಡುತ್ತಿರುವವರಿಗೆ ಮಾರ್ಗದರ್ಶನ ಮತ್ತು ಆರ್ಥಿಕ ಸಹಾಯ ನೀಡಲು ರಾಮಯ್ಯ ಸಮೂಹ ಸಂಸ್ಥೆ 'ರಾಮಯ್ಯ ವಿಕಸನ' ಎಂಬ ಹೊಸ ಕೇಂದ್ರ ಸ್ಥಾಪಿಸಿದೆ.

ಈ ಕೇಂದ್ರದಲ್ಲಿ ನವೋದ್ಯಮ ಆರಂಭಿಸಿ ಯಶಸ್ವಿಯಾಗಿರುವವರು ಹೊಸ ಪ್ರತಿಭೆಗಳಿಗೆ ಮಾರ್ಗದರ್ಶನ ನೀಡಲಿದ್ದಾರೆ. ಈ ವಿಕಸನ ಕೇಂದ್ರಕ್ಕೆ ಗೋಕುಲ ಎಜುಕೇಷನ್ ಫೌಂಡೇಷನ್‌ನ ಅಧ್ಯಕ್ಷ ಡಾ.ಎಂ.ಆರ್.ಜಯರಾಂ, ಉಪಾಧ್ಯಕ್ಷ ಎಂ.ಆರ್.ಸೀತಾರಾಂ ಬುಧವಾರ ಚಾಲನೆ ನೀಡಿದರು.



ರಾಮಯ್ಯ ವಿಕಸನ ಕೇಂದ್ರಕ್ಕೆ ಸಂಸ್ಥೆಯ ಅಧ್ಯಕ್ಷ ಎಂ.ಆರ್.ಜಯರಾಂ ಮತ್ತು ಉಪಾಧ್ಯಕ್ಷ ಎಂ.ಆರ್.ಸೀತಾರಾಂ ಚಾಲನೆ ನೀಡಿದರು

ಬಳಿಕ ಮಾತನಾಡಿದ ಜಯರಾಂ, 'ಇದು ನವೋದ್ಯಮಿಗಳಿಗೆ ಉತ್ತಮವಾದ ವೇದಿಕೆಯಾಗಿದೆ. ಅವರಲ್ಲಿನ ಆಲೋಚನೆಗಳಿಗೆ ಮೂರ್ತ ರೂಪ ನೀಡುವ ಕೆಲಸವನ್ನು ಈ ವಿಕಸನ ಮಾಡಲಿದೆ. ಈ ಕೇಂದ್ರದ ಮಾರ್ಗದರ್ಶಕರು ಈ ಹಿಂದೆ ಹಲವು ನವೋದ್ಯಮಗಳನ್ನು ಆರಂಭಿಸಿ ಯಶಸ್ವಿಯಾಗಿ ನಡೆಸಿದ್ದಾರೆ. ಅವರು ಈ ಕ್ಷೇತ್ರದಲ್ಲಿ ಹೆಚ್ಚು ಅನುಭವ ಹೊಂದಿದ್ದಾರೆ. ಎಲ್ಲರೂ ಇದರ ಉಪಯೋಗ ಪಡೆದುಕೊಳ್ಳಬೇಕು' ಎಂದು ಮನವಿ ಮಾಡಿದರು.

'ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಮಾತ್ರವಲ್ಲದೆ, ಹೊರಗಿನವರು ಕೂಡ ಭಾಗವಹಿಸಬಹುದು. ಅವರಿಗೆ ಮಾರ್ಗದರ್ಶನದ ಜತೆಗೆ ₹50 ಲಕ್ಷದ ತನಕ ಸಹಾಯ ಮಾಡಲಾಗುವುದು' ಎಂದರು.

'ನಮ್ಮ ದೇಶದ ಜಿಡಿಪಿ ಬೆಳವಣಿಗೆ ಸಾಧಿಸಬೇಕಾದರೆ ತಂತ್ರಜ್ಞಾನದಲ್ಲಿ ಹೆಚ್ಚು ಪರಿಣತಿ ಪಡೆಯಬೇಕು. ನವೋದ್ಯಮಗಳಿಗೆ ಪ್ರೋತ್ಸಾಹ ನೀಡಬೇಕು' ಎಂದು ಸಂಸ್ಥೆಯ ಉಪಾಧ್ಯಕ್ಷ ಎಂ.ಆರ್. ಸೀತಾರಾಂ ಹೇಳಿದರು.

ತುಳಸಿಮುನಿರಾಜುಗೆ ಬಿ ಫಾರಂ



ಬೆಂಗಳೂರು: ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ಒಂದು ಸ್ಥಾನಕ್ಕೆ ನಡೆಯುವ ಚುನಾವಣೆಗೆ ಬಿಜೆಪಿ ಅಭ್ಯರ್ಥಿ ತುಳಸಿ ಮುನಿರಾಜುಗೌಡ ಅವರಿಗೆ ಪಕ್ಷದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಬಿ ಫಾರಂ ವಿತರಿಸಿದರು.

ತುಳಸಿ ಮುನಿರಾಜುಗೌಡ ಅವರು ಗುರುವಾರ ಬೆಳಿಗ್ಗೆ ನಾಮಪತ್ರ ಸಲ್ಲಿಸಲಿದ್ದಾರೆ. ಇದೇ 15 ರಂದು ಚುನಾವಣೆ ನಡೆಯಲಿದೆ. ಉಪಸಭಾಪತಿಯಾಗಿದ್ದ ಎಲ್.ಧರ್ಮೇಗೌಡ ನಿಧನದಿಂದ ಈ ಸ್ಥಾನ ತೆರವಾಗಿತ್ತು. ಈ ಸ್ಥಾನದಿಂದ ಸ್ಪರ್ಧಿಸಲು ಅವಕಾಶ ನೀಡಬೇಕು ಎಂದು ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಅವರು ಯಡಿಯೂರಪ್ಪ ಅವರಿಗೆ ಮನವಿ ಮಾಡಿದ್ದರು. ಅಲ್ಲದೆ, ಸಾಕಷ್ಟು ಆಕಾಂಕ್ಷಿಗಳು ಟಿಕೆಟ್‌ಗಾಗಿ ಪ್ರಯತ್ನ ನಡೆಸಿದ್ದರು.

ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದಲ್ಲಿ ಮುನಿರತ್ನ ವಿರುದ್ಧ ಮುನಿರಾಜುಗೌಡ ಹೋರಾಟ ನಡೆಸುತ್ತಾ ಬಂದಿದ್ದರು. ಮುನಿರತ್ನ ಬಿಜೆಪಿ ಸೇರಿದ್ದರಿಂದ, ತುಳಸಿ ಅವರು ಅಸಮಾಧಾನಗೊಂಡಿದ್ದರು, ಪಕ್ಷದ ಶಿಸ್ತು ಮೀರಿರಲಿಲ್ಲ. ಈ ಕಾರಣಕ್ಕಾಗಿ ಅವರಿಗೆ ಟಿಕೆಟ್ ನೀಡಲಾಗಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಮಂತ್ರಿ ಮಾಲ್‌ನಿಂದ ಬಿಬಿಎಂಪಿಗೆ ₹ 30 ಕೋಟಿ ತೆರಿಗೆ ಬಾಕಿ

ಪಾವತಿಗೆ ಮಾರ್ಚ್ ಅಂತ್ಯದವರೆಗೆ ಕಾಲಾವಕಾಶ

ಬೆಂಗಳೂರು: ಬಾಕಿ ಉಳಿಸಿಕೊಂಡಿರುವ ₹ 30 ಕೋಟಿ ಆಸ್ತಿ ತೆರಿಗೆಯನ್ನು ಪಾವತಿ ಮಾಡಲು ಮಂತ್ರಿ ಮಾಲ್ ಮಾಲೀಕರಿಗೆ ಬಿಬಿಎಂಪಿ ಈ ತಿಂಗಳ ಅಂತ್ಯದ ವರೆಗೆ ಕಾಲಾವಕಾಶ ನೀಡಲಿದೆ.

ಬಾಕಿ ಉಳಿಸಿಕೊಂಡಿರುವ ಆಸ್ತಿ ತೆರಿಗೆಯನ್ನು ಪಾವತಿ ಮಾಡದಿದ್ದರೆ ಮಂತ್ರಿ ಮಾಲ್‌ಗೆ ಬೀಗ ಹಾಕುವುದಾಗಿ ಬಿಬಿಎಂಪಿ ಇತ್ತೀಚೆಗೆ ಎಚ್ಚರಿಕೆ ನೀಡಿತ್ತು. ಮಾಲ್‌ನ ಮಾಲೀಕರಿಗೆ ಹಾಗೂ ಮಾಲ್‌ನಲ್ಲಿರುವ ಮಳಿಗೆಗಳ ಮಾಲೀಕರಿಗೂ ಈ ಬಗ್ಗೆ ನೋಟಿಸ್ ಜಾರಿ ಮಾಡಿತ್ತು.

'ಮಂತ್ರಿ ಮಾಲ್ ₹ 20 ಕೋಟಿ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದು, ದಂಡನಾ ಬಡ್ಡಿ ಸೇರಿ ಈ ಮೊತ್ತ ₹ 30 ಕೋಟಿ ಆಗಿದೆ. ಬಾಕಿ ಮೊತ್ತವನ್ನು ಪಾವತಿಸಲು ಮಾರ್ಚ್ ಅಂತ್ಯದವರೆಗೆ ಕಾಲಾವಕಾಶ ನೀಡಿದ್ದೇವೆ. ಅಷ್ಟರೊಳಗೆ ಪಾವತಿ ಮಾಡದೇ ಹೋದರೆ ಅದರ ವಸೂಲಿಗೆ ಕ್ರಮ ಕೈಗೊಳ್ಳುತ್ತೇವೆ' ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ತಿಳಿಸಿದರು.


'ಇತ್ತೀಚಿನವರೆಗೆ, ತೆರಿಗೆ ಬಾಕಿ ಉಳಿಸಿಕೊಂಡವರ ಚರಾಸ್ತಿಗಳನ್ನು ಮಾತ್ರ ಜಪ್ತಿ ಮಾಡಲು ಅವಕಾಶವಿತ್ತು. ಈಗ ಕಾನೂನು ತಿದ್ದುಪಡಿಯಾಗಿದ್ದು, ಸುಸ್ತಿದಾರರ ಸ್ಥಿರಾಸ್ತಿಯನ್ನೂ ಜಪ್ತಿ ಮಾಡಬಹುದು. ಅಗತ್ಯ ಬಿದ್ದರೆ ಸ್ಥಿರಾಸ್ತಿಯನ್ನು ಹರಾಜು ಹಾಕುವುದಕ್ಕೂ ಅವಕಾಶ ಇದೆ' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಗರದಲ್ಲಿ ಇಂದು

ಅಂತರರಾಷ್ಟ್ರೀಯ ಮಟ್ಟದ ಜಲ ಉತ್ಸವ ಮೇಳ: ಆಯೋಜನೆ–ವಾಟರ್ ಇಂಡಿಯಾ ಕಂಪನಿ, ಸ್ಥಳ–ಮ್ಯಾನ್ ಫೋ ಕನ್ವೆಂಷನ್ ಸೆಂಟರ್, ನಾಗವಾರ ರಿಂಗ್ ರಸ್ತೆ, ಮಾನ್ಯತಾ ಟೆಕ್ ಪಾರ್ಕ್ ಹತ್ತಿರ, ಹೆಬ್ಬಾಳ, ಮಧ್ಯಾಹ್ನ 12

50ನೇ ರಾಷ್ಟ್ರೀಯ ಸುರಕ್ಷತಾ ದಿನಾಚರಣೆ: ಉದ್ಘಾಟನೆ–ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್, ಅಧ್ಯಕ್ಷತೆ–ಕಾರ್ಮಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜ್‌ಕುಮಾರ್ ಖತ್ರಿ, ಆಯೋಜನೆ–ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಸ್ಥಳ–ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಬಿಇಎಲ್ ಕ್ಯಾಂಪಸ್, ಜಾಲಹಳ್ಳಿ, ಮಧ್ಯಾಹ್ನ 3

'ಮೀಟ್ ದ ಆಥರ್' ಸರಣಿ ಉದ್ಘಾಟನೆ ಹಾಗೂ ಪುಸ್ತಕ ಪ್ರಿಯರೊಂದಿಗೆ ಚರ್ಚೆ–ಹಿರಿಯ ಪತ್ರಕರ್ತ ಪಿ.ಸಾಯಿನಾಥ್, ಆಯೋಜನೆ ಮತ್ತು ಸ್ಥಳ–ಬಹುರೂಪಿ ಬುಕ್ ಹಬ್, ಉಡುಪಿ ಗಾರ್ಡನ್ ಹತ್ತಿರ, ಸಂಜಯನಗರ ಮುಖ್ಯರಸ್ತೆ, ಸಂಜೆ 6



ಪಿ.ಸಾಯಿನಾಥ್

'ದೊರೆ ಈಡಿಪಸ್' ಪ್ರದರ್ಶನ 8ಕ್ಕೆ

ಬೆಂಗಳೂರು: ಹಿರಿಯ ಪತ್ರಕರ್ತ ಪಿ. ಲಂಕೇಶ್ 85ನೇ ಜನ್ಮದಿನದ ಅಂಗವಾಗಿ ಇದೇ 8ರಂದು ಸಂಜೆ 6ಕ್ಕೆ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ 'ದೊರೆ ಈಡಿಪಸ್' ನಾಟಕ ಪ್ರದರ್ಶನ ಆಯೋಜಿಸಲಾಗಿದೆ.

ಚಿತ್ರಾವಳಿ



ನಗರದಲ್ಲಿ ಬುಧವಾರ ಕರ್ನಾಟಕ ಸವಿತಾ ಸಮಾಜ ನಿಗಮದ ನೂತನ ಕಚೇರಿ ಉದ್ಘಾಟನೆ ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ (ಮಧ್ಯ) ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮದ ನೂತನ ಅಧ್ಯಕ್ಷ ಎಸ್‌.ನರೇಶ್ ಕುಮಾರ್ (ಬಲಗಡೆಯವರು) ಅವರನ್ನು ಅಭಿನಂದಿಸಿದರು. ಹಿಂದುಳಿದ ವರ್ಗದ ಕಲ್ಯಾಣ ಇಲಾಖೆಯ ಆಯುಕ್ತ ಪಿ. ವಸಂತರಾಜು (ಎಡಗಡೆಯವರು) ಇದ್ದರು ಪ್ರಜಾವಾಣಿ ಚಿತ್ರ



ಸರ್ಕಾರಿ ರಾಂನಾರಾಯಣ್ ಚೆಲ್ಲಾರಾಂ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರತಿಭಾನ್ವೇಷಣೆ ಕಾರ್ಯಕ್ರಮವನ್ನು ಶಾಸಕ ರಿಜ್ವಾನ್ ಅರ್ಷದ್ ಉದ್ಘಾಟಿಸಿದರು. ಕಾಲೇಜು ಶಿಕ್ಷಣ ಇಲಾಖೆಯ ಹೆಚ್ಚುವರಿ ನಿರ್ದೇಶಕ ಡಾ.ಕೆ. ಪ್ರಸಾದ್, ಕಲಾವಿದರಾದ ಚಂದುಗೌಡ, ಅನಿತಾ ಭಟ್ ಇದ್ದರು

ನಿವೇಶನ ವಂಚಿತರಿಂದ ಜಂಟಿ ಆಯುಕ್ತರ ಕಚೇರಿಗೆ ಮುತ್ತಿಗೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ರಾಜರಾಜೇಶ್ವರಿನಗರ ಕ್ಷೇತ್ರದ ಪಂತರಪಾಳ್ಯ ಸರ್ವೆ ನಂ 59 ರಲ್ಲಿ ನಿವೇಶನರಹಿತ ಎಲ್ಲ ಜಾತಿಯ ಕಡುಬಡವರಿಗೆ ನಿವೇಶನ ನೀಡಬೇಕೆಂದು ಹೈಕೋರ್ಟ್ ಆದೇಶ ನೀಡಿದೆ. ಆದರೂ ಬಿಬಿಎಂಪಿ ಅಧಿಕಾರಿಗಳು ಉಳ್ಳವರಿಗೆ ನಿವೇಶನ ನೀಡಿದ್ದಾರೆ ಎಂದು ಆರೋಪಿಸಿ ಕರ್ನಾಟಕ ದಲಿತ ಹಿಂದುಳಿದವರ ಸಮಗ್ರ ಅಭಿವೃದ್ಧಿ ಸಂಘ, ಕರ್ನಾಟಕ ಜನಾಂದೋಲನ ಸಂಘಟನೆಯ ಕಾರ್ಯಕರ್ತರು ಮತ್ತು ನಿವೇಶನ ವಂಚಿತರು ಬಿಬಿಎಂಪಿ ಜಂಟಿ ಆಯುಕ್ತರ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.



ಬಿಬಿಎಂಪಿ ಜಂಟಿ ಆಯುಕ್ತ ಡಾ.ಎಸ್‌.ನಾಗರಾಜ್ ಮನವಿ ಸ್ವೀಕರಿಸಿದರು.

ಪಂತರಪಾಳ್ಯ ಸರ್ವೆ ನಂ 23 ರಲ್ಲಿ ತೆರವುಗೊಂಡ 200 ಗುಡಿಸಲು ವಾಸಿಗಳಿಗೆ ಸರ್ವೆ ನಂ 59ಕ್ಕೆ ಸೇರಿದ ಪ್ರಮೋದ್ ಬಡಾವಣೆಯಲ್ಲಿ ನಿವೇಶನಗಳನ್ನು ನೀಡುವಂತೆ ಹೈಕೋರ್ಟ್ ಆದೇಶಿಸಿದೆ. ಆದರೆ, ಬಿಬಿಎಂಪಿ ಅಧಿಕಾರಿಗಳು ಹಣಬಲ ಅಧಿಕಾರ ಬಲ ಇರುವವರಿಗೆ ನಿವೇಶನ ಹಕ್ಕು ಪತ್ರ ನೀಡಿ ನಿಜವಾದ ಕಡುಬಡವರಿಗೆ ಅನ್ಯಾಯ ಮಾಡಿದ್ದಾರೆ ಎಂದು ಪ್ರತಿಭಟನಕಾರರು ದೂರಿದರು.

ದಲಿತ ಹಿಂದುಳಿದವರ ಸಮಗ್ರ ಅಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಸಂಪತ್ ಮಾತನಾಡಿ, '15 ದಿವಸದೊಳಗಾಗಿ ನ್ಯಾಯ ಸಿಗದಿದ್ದರೆ ಮುಖ್ಯಮಂತ್ರಿಗಳ ಕಚೇರಿ ಮುಂದೆ ಉಪವಾಸ ನಡೆಸಲಾಗುವುದು' ಎಂದು ಎಚ್ಚರಿಸಿದರು.

ಬಿಬಿಎಂಪಿ ಸಿದ್ಧತೆ– ಲಸಿಕಾ ಕೇಂದ್ರಗಳ ಪರಿಶೀಲನೆ ನಡೆಸಿದ ಆಯುಕ್ತ ಮಂಜುನಾಥ ಪ್ರಸಾದ್

ನಿತ್ಯ 1 ಲಕ್ಷ ಮಂದಿಗೆ ಕೋವಿಡ್ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿ 60 ವರ್ಷ ಮೇಲಿನವರು, ಬೇರೆ ಕಾಯಿಲೆ ಹೊಂದಿರುವ 45 ವರ್ಷ ಮೇಲ್ಪಟ್ಟವರು ಸೇರಿದಂತೆ ನಿತ್ಯ 1 ಲಕ್ಷ ಮಂದಿಗೆ ಕೋವಿಡ್ ಲಸಿಕೆ ನೀಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ. ಇದಕ್ಕಾಗಿ ಹೆಚ್ಚುವರಿ ಆಸ್ಪತ್ರೆಗಳನ್ನು ಗುರುತಿಸುತ್ತಿದ್ದೇವೆ' ಎಂದು ಪಾಲಿಕೆ ಆಯುಕ್ತ ಎನ್. ಮಂಜುನಾಥ ಪ್ರಸಾದ್ ತಿಳಿಸಿದರು.

ಹಳೆ ವಿಮಾನನಿಲ್ದಾಣ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಗೆ ಬುಧವಾರ ಭೇಟಿ ನೀಡಿದ ಅವರು ಬಿಬಿಎಂಪಿ ವ್ಯಾಪ್ತಿಯಲ್ಲಿ ಮೂರನೇ ಹಂತದ ಕೋವಿಡ್ ಲಸಿಕೆ ಅಭಿಯಾನದ ಜಾರಿಗೆ ಕೈಗೊಂಡ ಕ್ರಮಗಳನ್ನು ಪರಿಶೀಲಿಸಿದರು. ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಆಯುಕ್ತರು, 'ಆರಂಭದಲ್ಲಿ ಪ್ರಾಯೋಗಿಕವಾಗಿ 26 ಆಸ್ಪತ್ರೆಗಳಲ್ಲಿ ಲಸಿಕಾ ಕೇಂದ್ರಗಳನ್ನು ತೆರೆಯಲಾಗಿತ್ತು. ಮುಂದಿನ ವಾರದಿಂದ 100ಕ್ಕಿಂತ ಹೆಚ್ಚು ಹಾಸಿಗೆ ಸಾಮರ್ಥ್ಯವುಳ್ಳ 107 ಖಾಸಗಿ ಆಸ್ಪತ್ರೆಗಳು, ಪಾಲಿಕೆಯ 141 ಪ್ರಾಥಮಿಕ ಆರೋಗ್ಯ ಕೇಂದ್ರಗಳು, ರೆಫರಲ್ ಆಸ್ಪತ್ರೆಗಳು ಸೇರಿದಂತೆ 300 ಆಸ್ಪತ್ರೆಗಳಲ್ಲಿ ಲಸಿಕೆ ನೀಡಲು ಕ್ರಮವಹಿಸಲಾಗುತ್ತಿದೆ. ಆಗ ನಿತ್ಯ 60 ಸಾವಿರ ಮಂದಿಗೆ ಲಸಿಕೆ ನೀಡಬಹುದು. ಕ್ರಮೇಣ ಈ ಸಂಖ್ಯೆಯನ್ನು 1 ಲಕ್ಷಕ್ಕೆ ಹೆಚ್ಚಿಸಲಿದ್ದೇವೆ' ಎಂದರು.

'ಬಿಬಿಎಂಪಿ ವ್ಯಾಪ್ತಿಯಲ್ಲಿ 3ನೇ ಹಂತದ ಅಭಿಯಾನದ ಮೊದಲ ದಿನ ಕೋವಿನ್ 2.0 ತಂತ್ರಾಂಶದಲ್ಲಿ ಕೆಲ ಲೋಪಗಳು ಕಾಣಿಸಿಕೊಂಡಿದ್ದರಿಂದ 1,063 ಮಂದಿಗೆ ಮಾತ್ರ ಲಸಿಕೆ ನೀಡಲಾಯಿತು. ಈ ಲೋಪಗಳನ್ನು ಸರ್ಕಾರದ ಗಮನಕ್ಕೆ ತಂದು ಸರಿಪಡಿಸಿದ್ದರಿಂದ ಎರಡನೇ ದಿನ 3,128 ಮಂದಿಗೆ ಲಸಿಕೆ ನೀಡಲು ಸಾಧ್ಯವಾಯಿತು' ಎಂದು ಆಯುಕ್ತರು ಮಾಹಿತಿ ನೀಡಿದರು.



ನಗರದ ಮಣಿಪಾಲ ಆಸ್ಪತ್ರೆಯ ಕೋವಿಡ್ ಲಸಿಕಾ ಕೇಂದ್ರದಲ್ಲಿ ಲಸಿಕೆ ನೀಡಲು ಮಾಡಿಕೊಂಡಿರುವ ಸಿದ್ಧತೆಗಳನ್ನು ಎನ್.ಮಂಜುನಾಥ ಪ್ರಸಾದ್ ಬುಧವಾರ ಪರಿಶೀಲಿಸಿದರು. ಆಸ್ಪತ್ರೆಯ ಮುಖ್ಯಸ್ಥ ಡಾ.ಸುದರ್ಶನ ಬಲ್ಲಾಳ್ ಹಾಗೂ ಬಿಬಿಎಂಪಿ ವಿಶೇಷ ಆಯುಕ್ತ ರಾಜೇಂದ್ರ ಚೋಳನ್ ಇದ್ದಾರೆ

'ಕೋವಿನ್ ಪೋರ್ಟಲ್ ಬಹುತೇಕ ಸಮಸ್ಯೆಗಳು ಬಗೆಹರಿದಿವೆ. ಇನ್ನೇನಾದರೂ ಸಮಸ್ಯೆಗಳಿದ್ದರೆ, 26 ಆಸ್ಪತ್ರೆಗಳಿಂದ ಪ್ರತಿಕ್ರಿಯೆ ಪಡೆದು ಸರಿಪಡಿಸಲಿದ್ದೇವೆ. 300 ಕೇಂದ್ರಗಳಲ್ಲಿ ಲಸಿಕೆ ನೀಡಲು ಪ್ರಾರಂಭಿಸಿದಾಗ ಹಾಗೂ ಹಿರಿಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಲಸಿಕೆ ಪಡೆಯುಲು ಮುಂದೆ ಬಂದಾಗ ಪೋರ್ಟಲ್‌ನಲ್ಲಿ ನೋಂದಣಿ ಸಮಸ್ಯೆ ಆಗಬಹುದು. ಯಾರೂ ಅವಕಾಶ ವಂಚಿತರಾಗಬಾರದೆಂಬ ಕಾರಣಕ್ಕೆ ನೋಂದಣಿ ಮಾಡಿಸದವರೂ ನೇರವಾಗಿ ಲಸಿಕೆ ಪಡೆಯಲು ವ್ಯವಸ್ಥೆ ಕಲ್ಪಿಸಲಾಗುತ್ತದೆ' ಎಂದು ತಿಳಿಸಿದರು.

> **ಬಿಬಿಎಂಪಿ ವ್ಯಾಪ್ತಿಯಲ್ಲಿ ಹಿರಿಯ ನಾಗರಿಕರು ಕೋವಿಡ್ ಲಸಿಕೆ ಪಡೆಯಲು ಉತ್ಸುಕರಾಗಿದ್ದಾರೆ. ನಾ ಮುಂದು ತಾ ಮುಂದು ಎಂದು ಮುಂದೆ ಬರುತ್ತಿದ್ದಾರೆ**
> **ಎನ್.ಮಂಜುನಾಥ ಪ್ರಸಾದ್,** ಬಿಬಿಎಂಪಿ ಆಯುಕ್ತ

ಪೋರ್ಟಲ್‌ನಲ್ಲಿ ಮಾಹಿತಿ ಮಾರ್ಪಾಡಿಗೆ ಅವಕಾಶ: 'ಲಸಿಕೆ ಪಡೆಯಲು ನೋಂದಣಿ ಮಾಡಿದವರು ಅನಿವಾರ್ಯ ಕಾರಣಗಳಿಂದ ಗೊತ್ತುಪಡಿಸಿದ ದಿನ ಲಸಿಕೆ ಹಾಕಿಸಿಕೊಳ್ಳಲು ಸಾಧ್ಯವಾಗದಿದ್ದರೆ, ಆ ದಿನಾಂಕವನ್ನು ಬದಲಾಯಿಸಲೂ ಅವಕಾಶವಿದೆ. ಒಮ್ಮೆ ಲಸಿಕೆ ಪಡೆದವರು 29 ದಿನಗಳ ಬಳಿಕ ಎರಡನೇ ಡೋಸ್ ಪಡೆಯಬೇಕು. ಈ ಬಗ್ಗೆ ಅವರ ಮೊಬೈಲ್‌ಗೆ ಸ್ವಯಂ ಸಂದೇಶ ರವಾನೆಯಾಗಲಿದೆ. ಒಂದೊಮ್ಮೆ ಇಲ್ಲಿ ಲಸಿಕೆ ಪಡೆದವರು ಬೇರೆ ನಗರಗಳಲ್ಲಿ ಎರಡನೇ ಡೋಸ್ ಪಡೆಯಲು ಬಯಸಿದರೆ, ಕೊವಿನ್ ಪೋರ್ಟಲ್‌ನಲ್ಲೇ ಲಸಿಕೆ ಪಡೆಯುವ ಸ್ಥಳ ಬದಲಾವಣೆ ಮಾಡಬಹುದು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕೊಳೆಗೇರಿ ನಿವಾಸಿಗಳಿಗೆ ವಿಶೇಷ ವ್ಯವಸ್ಥೆ: 'ನಗರದ ಕೊಳಗೇರಿಗಳಲ್ಲಿ 15 ಲಕ್ಷ ಮಂದಿ ವಾಸಿಸುತ್ತಿದ್ದಾರೆ. ಅವರು ಕೋವಿನ್ ಪೋರ್ಟಲ್‌ನಲ್ಲಿ ಹೆಸರು ನೋಂದಾಯಿಸುವುದು ಕಷ್ಟ. ಆಶಾ ಕಾರ್ಯಕರ್ತರು ಹಾಗೂ ಆರೋಗ್ಯ ಸಹಾಯಕಿಯರು ಅವರನ್ನು ಲಸಿಕಾ ಕೇಂದ್ರಗಳಿಗೆ ಕರೆತರುವುದಕ್ಕೆ ನೆರವಾಗುತ್ತಾರೆ. ನೋಂದಣಿ ಮಾಡಿಸದೆಯೂ ಅವರಿಗೆ ಲಸಿಕೆ ನೀಡುವುದಕ್ಕೆ ಮುಂದಿನ ವಾರದಿಂದ ವ್ಯವಸ್ಥೆ ಮಾಡುತ್ತೇವೆ' ಎಂದು ಆಯುಕ್ತರು ತಿಳಿಸಿದರು

'ನಗರದ ಒಟ್ಟು ಜನಸಂಖ್ಯೆ 1.30 ಕೋಟಿ ಇದೆ. ಅದರಲ್ಲಿ ಹಿರಿಯ ನಾಗರಿಕರು ಹಾಗೂ ಬೇರೆ ಬೇರೆ ಕಾಯಿಲೆ ಹೊಂದಿರುವ 45 ವರ್ಷ ಮೇಲ್ಪಟ್ಟವರ ಒಟ್ಟು ಸಂಖ್ಯೆ ಶೇ 10ರಷ್ಟು ಇರಬಹುದು ಎಂದು ಅಂದಾಜಿಸಲಾಗಿದೆ' ಎಂದರು.

'ಆರೋಗ್ಯ ಸಮೀಕ್ಷೆ– 3.50 ಲಕ್ಷ ಮಂದಿಯ ಮಾಹಿತಿ ಸಂಗ್ರಹ'

'ಪಾಲಿಕೆ ವ್ಯಾಪ್ತಿಯಲ್ಲಿರುವ 60 ವರ್ಷದ ಮೇಲ್ಪಟ್ಟವರ ಹಾಗೂ ಅನ್ಯ ಕಾಯಿಲೆಗಳಿಂದ ಬಳಲುತ್ತಿರುವ 45 ವರ್ಷ ಮೇಲ್ಪಟ್ಟ ನಾಗರಿಕರ ಸಮೀಕ್ಷೆ ಕಾರ್ಯ ನಡೆಯುತ್ತಿದೆ. ಇದುವರೆಗೆ ಇಂತಹ 3.50 ಲಕ್ಷ ಮಂದಿಯ ಸಮೀಕ್ಷೆ ಕಾರ್ಯ ಪೂರ್ಣಗೊಂಡಿದೆ' ಎಂದು ಆಯುಕ್ತರು ಹೇಳಿದರು.

'ಕೋವಿಡ್ ಲಸಿಕೆ ನೀಡುವುದರ ಜೊತೆಗೆ ನಗರದ ನಾಗರಿಕರ ಆರೋಗ್ಯದ ಕುರಿತ ಮಾಹಿತಿ ಕಲೆಹಾಕಿ ಸಮಗ್ರ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸುವುದು ಮತ್ತು ಸಾಂಕ್ರಾಮಿಕವಲ್ಲದ ಕಾಯಿಲೆಗಳನ್ನು ನಿಯಂತ್ರಣಕ್ಕೂ ಕ್ರಮಕೈಗೊಳ್ಳುವುದೂ ಇದರ ಉದ್ದೇಶ' ಎಂದರು.

'ಖಾಸಗಿ ಆಸ್ಪತ್ರೆಗಳಿಂದ ಬೇಡಿಕೆ'

'ಕೆಲವು ಖಾಸಗಿ ಆಸ್ಪತ್ರೆಗಳು ಲಸಿಕೆ ಕೇಂದ್ರ ತೆರೆಯಲು ಅವಕಾಶ ಕೋರಿದ್ದಾರೆ. ಕೇಂದ್ರ ಸರ್ಕಾರದ ಮಾನದಂಡಗಳ ಪ್ರಕಾರ ಕೇಂದ್ರ ಸರ್ಕಾರದ ಆರೋಗ್ಯ ಕಾರ್ಯಕ್ರಮ (ಸಿಜಿಎಚ್‌ಎಸ್) , ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ (ಪಿಎಂಜೆಎವೈ), ಕೇಂದ್ರ ಅಥವಾ ರಾಜ್ಯ ಸರ್ಕಾರಗಳ ಆರೋಗ್ಯ ವಿಮೆ ಯೋಜನೆಗಳಲ್ಲಿ ಜೋಡಣೆಯಾಗಿರುವ ಆಸ್ಪತ್ರೆಗಳು ಲಸಿಕಾ ಕೇಂದ್ರ ಆರಂಭಿಸಬಹುದು. ಖಾಸಗಿ ಆಸ್ಪತ್ರೆಗಳು ಇನ್ನು ಮುಂದೆಯೂ ಇಂತಹ ಕಾರ್ಯಕ್ರಮಗಳಲ್ಲಿ ಜೋಡಣೆ ಮಾಡಿಸಿಕೊಳ್ಳಬಹುದು. ಆಗ ಅವುಗಳಿಗೂ ಲಸಿಕೆ ಕೇಂದ್ರ ತೆರೆಯಲು ಅವಕಾಶ ಕಲ್ಪಿಸಬಹುದು' ಎಂದು ಆಯುಕ್ತರು ತಿಳಿಸಿದರು.

ಒಂದೇ ದಿನ 10 ಸಾವಿರ ಜನರಿಗೆ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಲಸಿಕೆ ಹಾಕುವ ಪ್ರಕ್ರಿಯೆ ತೀವ್ರಗೊಂಡಿದ್ದು, ಬುಧವಾರ ಒಂದೇ ದಿನ ಹತ್ತು ಸಾವಿರಕ್ಕೂ ಅಧಿಕ ಜನರಿಗೆ ಲಸಿಕೆ ವಿತರಿಸಲಾಗಿದೆ. ಯಾರಲ್ಲೂ ಯಾವುದೇ ಅಡ್ಡ ಪರಿಣಾಮಗಳು ಕಾಣಿಸಿಕೊಂಡಿಲ್ಲ.

45 ವರ್ಷ ಮೇಲ್ಪಟ್ಟವರಿಗೆ ಆದ್ಯತೆ ನೀಡಲಾಗುತ್ತಿದ್ದು, ಬೇರೆ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಮೊದಲು ಲಸಿಕೆ ಹಾಕಲಾಗುತ್ತಿದೆ. 45ರಿಂದ 59 ವರ್ಷದೊಳಗಿರುವ 1,350 ಮಂದಿಗೆ ಹಾಗೂ 60 ವರ್ಷ ಮೇಲ್ಪಟ್ಟ 9,903 ಹಿರಿಯ ನಾಗರಿಕರಿಗೆ ಲಸಿಕೆ ಹಾಕಲಾಯಿತು.

ಲಸಿಕೆ ಅಭಿಯಾನ 2.0 ಆರಂಭವಾದ ಮೊದಲ ಎರಡು ದಿನಗಳಿಗೆ ಹೋಲಿಸಿದರೆ, ಮೂರನೇ ದಿನ ಉತ್ತಮ ಸ್ಪಂದನೆ ವ್ಯಕ್ತವಾಯಿತು. ಮೊದಲ ದಿನ 2,600 ಮಂದಿ ಲಸಿಕೆ ಪಡೆದಿದ್ದರೆ, ಎರಡನೇ ದಿನ 6,313 ಮಂದಿ ಲಸಿಕೆ ಹಾಕಿಸಿಕೊಂಡಿದ್ದರು. ಮೂರನೇ ದಿನವೂ ಕೆಲವೆಡೆ ಸ್ವಲ್ಪ ಮಟ್ಟಿಗೆ ತಾಂತ್ರಿಕ ಸಮಸ್ಯೆ ಕಂಡು ಬಂದಿತ್ತು. ನಂತರ, ಅದನ್ನು ಸರಿಪಡಿಸಿಕೊಂಡು ಸಿಬ್ಬಂದಿಯು ಲಸಿಕೆ ನೀಡಿದರು. ಆನ್‌ಲೈನ್ ಜೊತೆಗೆ, ಸ್ಥಳದಲ್ಲಿಯೇ ನೋಂದಣಿ ಮಾಡಿಸಿಕೊಳ್ಳಲು ಅವಕಾಶ ಕಲ್ಪಿಸಿರುವುದರಿಂದ ಲಸಿಕೆ ಪಡೆದವರ ಸಂಖ್ಯೆ ಹೆಚ್ಚಾಗಿದೆ.

ರಾಜಧಾನಿಯಲ್ಲಿ ಮತ್ತು ಮೈಸೂರಿನಲ್ಲಿ ಹೆಚ್ಚು ಸಂಖ್ಯೆಯಲ್ಲಿ ಜನರು ಲಸಿಕೆ ಪಡೆದಿದ್ದಾರೆ. ಇವರೊಂದಿಗೆ, ಬುಧವಾರ ಆರೋಗ್ಯ ಕಾರ್ಯಕರ್ತರಲ್ಲಿ 768 ಮಂದಿ ಮೊದಲ ಡೋಸ್ ಹಾಗೂ 2,082 ಮಂದಿ ಎರಡನೇ ಡೋಸ್ ಹಾಗೂ ಮುಂಚೂಣಿ ಕಾರ್ಯಕರ್ತರಲ್ಲಿ 1,191 ಮಂದಿ ಮೊದಲ ಡೋಸ್ ಲಸಿಕೆಯನ್ನು ಪಡೆದುಕೊಂಡರು.

578 ಮಂದಿಗೆ ಕೋವಿಡ್



ರಾಜ್ಯದಲ್ಲಿ ಹೊಸದಾಗಿ 528 ಜನರಿಗೆ ಕೊರೊನಾ ಸೋಂಕು ತಗುಲಿರುವುದು ದೃಢಪಟ್ಟಿದ್ದು, ಈವರೆಗೆ ಒಟ್ಟಾರೆ 9.52 ಲಕ್ಷ ಕೋವಿಡ್ ಪೀಡಿತರಾಗಿದ್ದಾರೆ.

413 ಜನ ಗುಣಮುಖರಾಗಿದ್ದು, 9.34 ಲಕ್ಷ ಜನ ಕೋವಿಡ್‌ನಿಂದ ಮುಕ್ತರಾದಂತಾಗಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಇಬ್ಬರು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಬ್ಬರು ಸಾವಿಗೀಡಾಗುವ ಮೂಲಕ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 12,346 ಕ್ಕೆ ಏರಿದೆ.

ಸಕ್ರಿಯ ಪ್ರಕರಣಗಳ ಪೈಕಿ 6,057 ಮಂದಿ ಆಸ್ಪತ್ರೆ ಹಾಗೂ ಮನೆಗಳಲ್ಲಿ ಚಿಕಿತ್ಸೆ ಮತ್ತು ಆರೈಕೆಯಲ್ಲಿದ್ದಾರೆ. 116 ಮಂದಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಮಾ.3 ರಂದು 68,339 ಮಂದಿ ಕೋವಿಡ್ ಪರೀಕ್ಷೆ ಮಾಡಿಸಿಕೊಂಡಿದ್ದು, ಈವರೆಗೆ ಒಟ್ಟು 1.89 ಕೋಟಿ ಜನ ಪರೀಕ್ಷೆಗೆ ಒಳಗಾಗಿದ್ದಾರೆ ಎಂದು ಆರೋಗ್ಯ ಇಲಾಖೆ ಹೇಳಿದೆ.

ಸಂಕ್ಷಿಪ್ತ ಸುದ್ದಿ

ನೀರಿನ ಅದಾಲತ್ ಇಂದು

ಬೆಂಗಳೂರು: ಜಲಮಂಡಳಿಯು ವಿವಿಧ ಉಪವಿಭಾಗಗಳಲ್ಲಿ ಇದೇ 4ರಂದು ಬೆಳಿಗ್ಗೆ 9.30ರಿಂದ 11ರವರೆಗೆ ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ಬಳಕೆದಾರರು ಸಂಬಂಧಪಟ್ಟ ಉಪವಿಭಾಗದ ಕಚೇರಿಗೆ ತೆರಳಿ ಅದಾಲತ್‌ನಲ್ಲಿ ಪಾಲ್ಗೊಳ್ಳಬಹುದು.

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ:080– 22238888, ಸಹಾಯವಾಣಿ 1916 ಹಾಗೂ ವಾಟ್ಸ್‌ಆ್ಯಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದು.

6ರಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ಬನಶಂಕರಿ ಉಪವಿಭಾಗ ವ್ಯಾಪ್ತಿಯಲ್ಲಿ ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ಈ ಭಾಗದ ಕೆಲವು ಪ್ರದೇಶಗಳಲ್ಲಿ ಇದೇ 6ರಂದು ಬೆಳಿಗ್ಗೆ 10ರಿಂದ ಸಂಜೆ 5.30ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಕತ್ರಿಗುಪ್ಪೆ, ಕೆಂಪೇಗೌಡ ಬಡಾವಣೆ, ವಿಎಚ್‌ಬಿಸಿಎಸ್ ಬಡಾವಣೆ, ರಾಮರಾವ್ ಬಡಾವಣೆ, ಶ್ರೀನಿವಾಸನಗರ, ಪಿ.ಪಿ. ಬಡಾವಣೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಐಐಎಸ್‌ಸಿ: ಪಿಎಚ್‌.ಡಿ ವಿದ್ಯಾರ್ಥಿ ಆತ್ಮಹತ್ಯೆ

ಬೆಂಗಳೂರು: ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಪಿಎಚ್‌.ಡಿ ವಿದ್ಯಾರ್ಥಿಯೊಬ್ಬರು ಕ್ಯಾಂಪಸ್‌ನ ಹಾಸ್ಟೆಲ್ ಕೊಠಡಿಯಲ್ಲಿ ಮಂಗಳವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸಂಸ್ಥೆಯ ನ್ಯಾನೊ ಸೈನ್ಸ್ ಹಾಗೂ ಎಂಜಿನಿಯರಿಂಗ್ ವಿಭಾಗದಲ್ಲಿ ಪಿಎಚ್‌.ಡಿ ವ್ಯಾಸಂಗ ಮಾಡುತ್ತಿದ್ದ ಬಿಹಾರ ಮೂಲದ ರಣದೀರ್ ಕುಮಾರ್ (34) ಆತ್ಮಹತ್ಯೆ ಮಾಡಿಕೊಂಡಿರುವ ವಿದ್ಯಾರ್ಥಿ. 'ಕೋಣೆಯಲ್ಲಿ ಯಾವುದೇ ಮರಣ ಪತ್ರ ಪತ್ತೆಯಾಗಿಲ್ಲ. ಸಂಸ್ಥೆಯ ಆಡಳಿತ ಮಂಡಳಿ ನೀಡಿದ ದೂರಿನ ಮೇರೆಗೆ ಅಸ್ವಾಭಾವಿಕ ಸಾವು ಪ್ರಕರಣ ದಾಖಲಿಸಲಾಗಿದೆ. ಆತ ಮಾನಸಿಕ ಒತ್ತಡದಿಂದ ಬಳಲುತ್ತಿದ್ದ ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದು ಬಂದಿದೆ' ಎಂದು ಸದಾಶಿವನಗರ ಠಾಣೆ ಅಧಿಕಾರಿಯೊಬ್ಬರು ತಿಳಿಸಿದರು.

ಮತ್ತೊಬ್ಬ ವಿದ್ಯಾರ್ಥಿ ಸಾವು: 'ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಎಂ.ಟೆಕ್ ವಿದ್ಯಾರ್ಥಿಯೊಬ್ಬ ಫುಟ್‌ಬಾಲ್ ಆಡುತ್ತಿದ್ದಾಗ ಏಕಾಏಕಿ ಕುಸಿದು, ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿದ್ದರು. ಸಂಸ್ಥೆಯ ಆರೋಗ್ಯ ಕೇಂದ್ರದಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ರಾಮಯ್ಯ ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಮೃತಪಟ್ಟಿದ್ದರು. ಕ್ಯಾಂಪಸ್‌ನಲ್ಲಿ ಸಂಭವಿಸಿದ ಈ ಎರಡೂ ಘಟನೆಗಳಿಂದ ಅತೀವ ನೋವಾಗಿದೆ' ಎಂದು ಸಂಸ್ಥೆ ತಿಳಿಸಿದೆ.

'ಐಐಎಸ್‌ಸಿ ಸಮುದಾಯದ ಸದಸ್ಯರು ಮಾನಸಿಕ ಖಿನ್ನತೆ ಸೇರಿದಂತೆ ವಿವಿಧ ಸಮಸ್ಯೆಗಳಿಗೆ 080-47113444 ಸಂಖ್ಯೆಗೆ ಕರೆ ಮಾಡಿ, ಮನೋರೋಗ ತಜ್ಞರಿಂದ ಸಮಾಲೋಚನೆ ಪಡೆದುಕೊಳ್ಳಬಹುದು ಅಥವಾ https://wellness.iisc.ac.in ಸಂಪರ್ಕಿಸಬಹುದು' ಎಂದು ಐಐಎಸ್‌ಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಐದಕ್ಕಿಂತ ಹೆಚ್ಚು ಪ್ರಕರಣಗಳಿದ್ದರೆ 'ಕಂಟೈನ್ಮೆಂಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸತಿ ಸಮುಚ್ಚಯ ಸೇರಿದಂತೆ ಯಾವುದೇ ಪ್ರದೇಶದಲ್ಲಿ ಐದು ಅಥವಾ ಐದಕ್ಕಿಂತಲೂ ಹೆಚ್ಚು ಕೋವಿಡ್ ಪ್ರಕರಣಗಳು ವರದಿಯಾದರೆ ಆ ಸ್ಥಳವನ್ನು ಕಂಟೈನ್ಮೆಂಟ್ ವಲಯ ಎಂದು ಗುರುತಿಸುವಂತೆ ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ.

ತಾಂತ್ರಿಕ ಸಲಹಾ ಸಮಿತಿ ಸಲಹೆಗಳ ಆಧಾರದ ಮೇಲೆ ಇಲಾಖೆಯು ಕೆಲವು ಮುಂಜಾಗ್ರತಾ ಕ್ರಮಗಳನ್ನು ಜಾರಿಗೊಳಿಸಿದೆ. ರಾಜ್ಯದಲ್ಲಿ ಪರಿಸ್ಥಿತಿ ನಿಯಂತ್ರಣದಲ್ಲಿದ್ದರೂ, ಕೆಲವು ಪ್ರದೇಶಗಳಲ್ಲಿ ಮಾತ್ರ ಹೆಚ್ಚು ಪ್ರಕರಣಗಳು ಪತ್ತೆಯಾಗುತ್ತಿವೆ. ಇಂತಹ ಪ್ರದೇಶವನ್ನು ಕಂಟೈನ್ಮೆಂಟ್ ವಲಯ ಎಂದು ಘೋಷಿಸುವುದರ ಜತೆಗೆ ಆ ಪ್ರದೇಶದಲ್ಲಿ ಹೆಚ್ಚು ಪರೀಕ್ಷೆ ನಡೆಸುವ ಮೂಲಕ ಸೋಂಕು ಹರಡದಂತೆ ನಿಯಂತ್ರಿಸಲು ಕ್ರಮ ಕೈಗೊಳ್ಳಲು ಸೂಚಿಸಿದೆ.

15 ದಿನಗಳಿಗೊಮ್ಮೆ ಪರೀಕ್ಷೆ: ಶೈಕ್ಷಣಿಕ ಸಂಸ್ಥೆಗಳು, ಹಾಸ್ಟೆಲ್, ಹೋಟೆಲ್, ರೆಸ್ಟೋರೆಂಟ್ ಹಾಗೂ ಎಲ್ಲ ವಿಧದ ಕಚೇರಿಗಳಲ್ಲಿ ಪ್ರತಿ ಕಾರ್ಯನಿರ್ವಹಿಸುವ ಸಿಬ್ಬಂದಿ ಪ್ರತಿ 15 ದಿನಗಳಿಗೊಮ್ಮೆ ಕಡ್ಡಾಯವಾಗಿ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಸೂಚಿಸಲಾಗಿದೆ. ಮಾಸ್ಕ್ ಧರಿಸುವುದರ ಜೊತೆಗೆ ಅಂತರ ಕಾಪಾಡಿಕೊಳ್ಳಬೇಕು ಹಾಗೂ ಸ್ಯಾನಿಟೈಸರ್ ಬಳಕೆ ಸೇರಿದಂತೆ ಕೋವಿಡ್ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದೂ ಹೇಳಿದೆ.

ಸೋಂಕಿತರ ಜತೆಗೆ ಅವರ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರ ಪತ್ತೆಗೆ ಸ್ಥಳೀಯ ಆಡಳಿತ ಸಂಸ್ಥೆಗಳು, ಮಾರ್ಷಲ್‌ಗಳು ಹಾಗೂ ಪೊಲೀಸರ ನೆರವು ಪಡೆಯಲು ಇಲಾಖೆ ಸೂಚಿಸಿದೆ.

ಚಾಲಕರಿಗೆ ಪರೀಕ್ಷೆ ಕಡ್ಡಾಯ

ಕೇರಳ ಹಾಗೂ ಮಹಾರಾಷ್ಟ್ರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಈ ರಾಜ್ಯಗಳಿಂದ ಬರುವ ಸರಕು, ಸಾಗಣೆ ವಾಹನಗಳ ಚಾಲಕರು ಹಾಗೂ ಸಹಾಯಕರಿಗೆ ಆರ್‌ಟಿಪಿಸಿಆರ್ ಪರೀಕ್ಷೆಯ ನೆಗೆಟಿವ್ ವರದಿ ಕಡ್ಡಾಯಗೊಳಿಸಿ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಚಾಲಕರು ಹಾಗೂ ಸಹಾಯಕರು ಪ್ರತಿ 15 ದಿನಗಳಿಗೆ ಒಮ್ಮೆ ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಡುವುದು ಹಾಗೂ ನೆಗೆಟಿವ್ ಪರೀಕ್ಷೆ ವರದಿ ಹೊಂದಿರುವುದನ್ನು ಕಡ್ಡಾಯಗೊಳಿಸಲಾಗಿದೆ. ಪರೀಕ್ಷೆಯ ನೆಗಟಿವ್ ವರದಿ ಹೊಂದಿದವರಿಗೆ ಮಾತ್ರವೇ ರಾಜ್ಯಕ್ಕೆ ಪ್ರವೇಶಿಸಲು ಅವಕಾಶ ನೀಡಬೇಕು. ವರದಿಯ ಜತೆಗೆ ಕೋವಿಡ್ ಮುನ್ನೆಚ್ಚರಿಕಾ ಕ್ರಮಗಳನ್ನು ತಪ್ಪದೇ ಪಾಲಿಸಬೇಕು ಎಂದು ಆರೋಗ್ಯ ಇಲಾಖೆ ಆಯುಕ್ತ ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಕೋವಿಡ್ ನಿಯಂತ್ರಣ ಕ್ರಮ ತೀವ್ರಗೊಳಿಸಿ: ಕೇಂದ್ರ ತಂಡ

ಬೆಂಗಳೂರು: ಕೋವಿಡ್ ಎರಡನೇ ಅಲೆಯ ಮುನ್ಸೂಚನೆಯ ಕಾರಣ ಕೇಂದ್ರ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳು ರಾಜ್ಯದ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಕೋವಿಡ್ ನಿಯಂತ್ರಣ ಕ್ರಮಗಳ ಪರಿಶೀಲನೆ ನಡೆಸಿದರು.

ಮೊದಲು ವಿಮಾನ ನಿಲ್ದಾಣದ ಕಣ್ಗಾವಲು ಚಟುವಟಿಕೆ ಪರಿಶೀಲನೆ ನಡೆಸಿ, ಹೊರರಾಜ್ಯದಿಂದ ಸೋಂಕು ಹೆಚ್ಚು ವರದಿಯಾಗಿರುವ ನಗರದ ಸಂಭ್ರಮ್ ಕಾಲೇಜಿಗೆ ಭೇಟಿ ನೀಡಿದರು. ಬಳಿಕ ನಿಮ್ಹಾನ್ಸ್ ಪ್ರಯೋಗಾಲಯ ಮತ್ತು ತುಮಕೂರಿನ ವಿವಿಧೆಡೆ ಭೇಟಿ ನೀಡಿದರು. ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಕೋವಿಡ್ ನಿಯಂತ್ರಣ ಕ್ರಮಗಳನ್ನು ಮತ್ತಷ್ಟು ತೀವ್ರಗೊಳಿಸುವಂತೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿದರು.

ಇಲಾಖೆಯ ಹಿರಿಯ ಅಧಿಕಾರಿಗಳಾದ ಗಿರೀಶ್, ರೋಹಿತ್ ಕುಮಾರ್, ನಿಲಾಂಭು ಶರಣ್ ನೇತೃತ್ವದ ತಂಡ ಎರಡು ದಿನ ಪರಿಶೀಲನೆ ನಡೆಸಿದ್ದು, ಗಡಿ ಜಿಲ್ಲೆಗಳಲ್ಲಿ ಆದ್ಯತೆ ಮೇರೆಗೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು, ಕಟ್ಟುನಿಟ್ಟಾಗಿ ಕೋವಿಡ್ ಮಾರ್ಗಸೂಚಿ ಪಾಲನೆ ಮಾಡಬೇಕು ಎಂದು ಹೇಳಿದೆ.ಕೋವಿಡ್ ಲಸಿಕೆ ವಿತರಣೆ ಸಂಬಂಧ ರಾಜ್ಯಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಕೇಂದ್ರ ತಂಡ ಮೆಚ್ಚುಗೆ ವ್ಯಕ್ತಪಡಿಸಿತು.



'ನಮ್ಮ ಮೆಟ್ರೊ' ದ ನಿಲ್ದಾಣವೊಂದರಲ್ಲಿ ಸ್ಮಾರ್ಟ್‌ಕಾರ್ಡ್ ರಿಚಾರ್ಜ್‌ಗಾಗಿ ಸರದಿಯಲ್ಲಿ ನಿಂತಿದ್ದ ಪ್ರಯಾಣಿಕರು

ಕೈಗವಸು ಹಾಕಿ ಹಣ ಪಡೆಯಲು ಸಾಧ್ಯವಿಲ್ಲವೇ?: ಪ್ರಯಾಣಿಕರು

ಶುರುವಾಗದ ಟೋಕನ್ ವ್ಯವಸ್ಥೆ ಮೆಟ್ರೊ ವಿರುದ್ಧ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ರೈಲಿನಲ್ಲಿ ಪ್ರಯಾಣಿಸುವವರಿಗೆ ಟೋಕನ್ ವಿತರಿಸಲು ಮುಂದಾಗದ ಬೆಂಗಳೂರು ಮೆಟ್ರೊ ರೈಲು ನಿಗಮದ ವಿರುದ್ಧ ಪ್ರಯಾಣಿಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಮೆಟ್ರೊ ರೈಲಿನಲ್ಲಿ ಪ್ರಯಾಣಿಸುವವರಿಗೆ ಈಗಲೂ ಟೋಕನ್ ವಿತರಣೆ ಮಾಡುತ್ತಿಲ್ಲ. ಸ್ಮಾರ್ಟ್ ಕಾರ್ಡ್ ರಿಚಾರ್ಜ್ ಮಾಡಿಸಲೂ ಹಣ ತೆಗೆದುಕೊಳ್ಳುವುದಿಲ್ಲ. ಆನ್‌ಲೈನ್‌ನಲ್ಲಿ ಅಥವಾ ಎಟಿಎಂ ಕಾರ್ಡ್ ನೀಡಿ ಮಾಡಿಸಬೇಕು. ಎಟಿಎಂ ಕಾರ್ಡ್ ಇರದಿದ್ದರೆ ವಾಪಸ್ ಬರಬೇಕಾಗುತ್ತದೆ' ಎಂದು ಜಯಲಕ್ಷ್ಮಿ ಪಾಟೀಲ ಎಂಬುವರು ಹೇಳಿದರು.

'ಆನ್‌ಲೈನ್ ರಿಚಾರ್ಜ್ ಮಾಡಿಸಿಕೊಳ್ಳಲು ಗೊತ್ತಿಲ್ಲದವರು, ಎಟಿಎಂ ಕಾರ್ಡ್ ಇರದವರು ಮೆಟ್ರೊ ಹತ್ತಲೇಬಾರದು ಎಂದು ಬಿಎಂಆರ್‌ಸಿಎಲ್ ತೀರ್ಮಾನಿಸಿದಂತಿದೆ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

'ಕೋವಿಡ್ ನಿಯಂತ್ರಣಕ್ಕಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಸಿಬ್ಬಂದಿ ಹೇಳುತ್ತಾರೆ. ಕೈಗವಸು ಹಾಕಿಕೊಂಡು ಹಣ ತೆಗೆದುಕೊಳ್ಳಬಹುದಲ್ಲವೇ ? ಹಣವೂ ತೆಗೆದುಕೊಳ್ಳುವುದಿಲ್ಲ, ಸ್ಮಾರ್ಟ್‌ಕಾರ್ಡ್ ರಿಚಾರ್ಜ್ ಕೂಡ ಮಾಡುವುದಿಲ್ಲ ಎಂದರೆ ಹೇಗೆ' ಎಂದು ಅವರು ಪ್ರಶ್ನಿಸಿದರು.

ಕನಿಷ್ಠ ₹180 ಖರ್ಚು: 'ಮೆಟ್ರೊ ಸ್ಮಾರ್ಟ್‌ಕಾರ್ಡ್‌ನಲ್ಲಿ ಕನಿಷ್ಠ ₹50 ಬಾಕಿ ಇರಲೇಬೇಕು. ಸ್ಮಾರ್ಟ್‌ಕಾರ್ಡ್‌ಗೆ ₹50 ಶುಲ್ಕ ಇದೆ. ಅಂದರೆ, ಒಮ್ಮೆ ಪ್ರಯಾಣಿಸಲು ಕನಿಷ್ಠ ₹180 ಬೇಕಾಗುತ್ತದೆ. ಬೇರೆ ಊರಿನಿಂದ ಬಂದವರು ಅಥವಾ ಹೋಗುವವರಿಗೆ, ಒಮ್ಮೆ ಮಾತ್ರ ಸಂಚರಿಸುವವರಿಗೆ ತುಂಬಾ ಹೊರೆ ಎನಿಸುತ್ತಿದೆ. ಟೋಕನ್ ವಿತರಣೆ ವ್ಯವಸ್ಥೆಯನ್ನು ಕೂಡಲೇ ಆರಂಭಿಸಬೇಕು' ಎಂದು ಪ್ರಯಾಣಿಕ ರಮೇಶ್ ಎಂಬುವರು ಒತ್ತಾಯಿಸಿದರು.

'ಕೋವಿಡ್ ಪ್ರಕರಣಗಳ ಸಂಖ್ಯೆ ಕ್ಷೀಣಿಸುತ್ತಿದೆ. ಈಗಾಗಲೇ ಲಸಿಕೆಯೂ ಬಂದಿದೆ. ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಹೆಚ್ಚು ಜನ ಪ್ರಯಾಣಿಸುತ್ತಿದ್ದಾರೆ. ಮಾರುಕಟ್ಟೆಯಲ್ಲಿ, ಚಿತ್ರಮಂದಿರಗಳಲ್ಲಿಯೂ ಹೆಚ್ಚು ಜನ ಸೇರುತ್ತಿದ್ದಾರೆ. ಆದರೆ, ಮೆಟ್ರೊ ನಿಲ್ದಾಣಗಳಲ್ಲಿ ಮಾತ್ರ ಟೋಕನ್ ವಿತರಿಸುತ್ತಿಲ್ಲ ಎಂಬುದು ವಿಚಿತ್ರ ಎನಿಸುತ್ತದೆ' ಎಂದು ಪ್ರಯಾಣಿಕ ವಿಜಯ್‌ಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಜಯ್ ಸೇಠ್‌ಗೆ ಹಲವು ಬಾರಿ ಕರೆ ಮಾಡಲಾಯಿತು. ಅವರು ಕರೆ ಸ್ವೀಕರಿಸಲಿಲ್ಲ.

ಪತ್ತೆಯಾಗದ ಸಂತ್ರಸ್ತೆ: ದೂರುದಾರನಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವತಿಯನ್ನು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಂಡಿರುವ ರಮೇಶ್ ಜಾರಕಿಹೊಳಿ ಅವರ ವಿಡಿಯೊವನ್ನು ಬಹಿರಂಗಪಡಿಸಿದ್ದ ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ಅವರಿಗೆ ವಿಚಾರಣೆ ಸಂಬಂಧ ಗುರುವಾರ ಬೆಳಿಗ್ಗೆ 11 ಗಂಟೆಗೆ ಬರುವಂತೆ ಕಬ್ಬನ್ ಪಾರ್ಕ್ ಪೊಲೀಸರು ನೋಟಿಸ್ ನೀಡಿದ್ದಾರೆ.

ವಿಡಿಯೊ ಸಂಬಂಧ ಕಬ್ಬನ್ ಪಾರ್ಕ್ ಠಾಣೆಗೆ ದಿನೇಶ್ ಮಂಗಳವಾರ ದೂರು ನೀಡಿದ್ದರು. ಆದರೆ, ಈವರೆಗೆ ಪ್ರಕರಣದ ಸಂತ್ರಸ್ತೆ ಪತ್ತೆಯಾಗಿಲ್ಲ ಹಾಗೂ ಎಫ್‌ಐಆರ್ ದಾಖಲಾಗಿಲ್ಲ. ಹಾಗಾಗಿ, ಹೆಚ್ಚಿನ ವಿಚಾರಣೆ ನಡೆಸಲು ಸಲುವಾಗಿ ನೋಟಿಸ್ ನೀಡಿರುವುದಾಗಿ ಪೊಲೀಸ್ ಮೂಲಗಳು ತಿಳಿಸಿವೆ.

ದಿನೇಶ್ ವಿರುದ್ಧ ದೂರು ಅರ್ಜಿ: ದಿನೇಶ್ ವಿರುದ್ಧ ಕಬ್ಬನ್ ಪಾರ್ಕ್ ಠಾಣೆಗೆ ಕರ್ನಾಟಕ ಕನ್ನಡಪರ ಸಂಘಟನೆಗಳ ಒಕ್ಕೂಟ ದೂರು ನೀಡಿದೆ.

'ವಿಡಿಯೊ ಬಹಿರಂಗದ ಹಿಂದೆ ರಾಜಕೀಯ ಷಡ್ಯಂತ್ರ ಇದೆ. ರಮೇಶ್ ಜಾರಕಿಹೊಳಿ ಅವರನ್ನು ರಾಜಕೀಯವಾಗಿ ಕುಗ್ಗಿಸುವ ಹಾಗೂ ತೇಜೋವಧೆ ಮಾಡುವ ಉದ್ದೇಶದಿಂದ ಈ ರೀತಿ ಮಾಡಲಾಗಿದೆ. ವಿಡಿಯೊಗೆ ಹಾಗೂ ದಿನೇಶ್ ಅವರಿಗೆ ಯಾವುದೇ ಸಂಬಂಧವಿಲ್ಲ. ಯುವತಿಗೆ ನಿಜವಾಗಿ ಅನ್ಯಾಯವಾಗಿದ್ದರೆ ಅವರೇ ಏಕೆ ದೂರು ನೀಡಿಲ್ಲ?' ಎಂದು ಒಕ್ಕೂಟದ ಅಧ್ಯಕ್ಷ ಪುಟ್ಟೇಗೌಡ ದೂರಿನಲ್ಲಿ ಪ್ರಶ್ನಿಸಿದ್ದಾರೆ.

'ವಿಡಿಯೊದಲ್ಲಿ ಸಮ್ಮತಿಯುತ ಲೈಂಗಿಕ ಕ್ರಿಯೆ ವ್ಯಕ್ತವಾಗಿದೆ. ವೈಯಕ್ತಿಕ ವಿಚಾರವನ್ನು ಅಪಪ್ರಚಾರ ಮಾಡಲಾಗುತ್ತಿದ್ದು, ಇದರ ಹಿಂದೆ ಪ್ರಭಾವಿಗಳು ಇರಬಹುದು. ಇದೊಂದು ಬ್ಲ್ಯಾಕ್‌ಮೇಲ್ ರಾಜಕಾರಣ. ವಿಡಿಯೊ ಕುರಿತು ಸಮಗ್ರ ತನಿಖೆಯಾಗಬೇಕು. ದಿನೇಶ್ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಮನವಿ ಮಾಡಿದ್ದಾರೆ.

20ಕ್ಕೆ 'ರೈತರ ಮಹಾ ಪಂಚಾಯತ್'

ಶಿವಮೊಗ್ಗ: ಬಿ.ಎಚ್.ರಸ್ತೆಯ ಸೈನ್ಸ್ ಮೈದಾನದಲ್ಲಿ ಮಾರ್ಚ್ 20ರಂದು ರಾಜ್ಯದ ಮೊದಲ 'ರೈತರ ಮಹಾ ಪಂಚಾಯತ್' ನಡೆಯಲಿದೆ.

ಐಕ್ಯ ಹೋರಾಟ ಸಮಿತಿ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ನೇತೃತ್ವದಲ್ಲಿ ಅಂದು ಮಧ್ಯಾಹ್ನ 3ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ರಾಕೇಶ್ ಟಿಕಾಯತ್, ದರ್ಶನ ಪಾಲ್, ಯೋಗೇಂದ್ರ ಯಾದವ್ ಸೇರಿ ಸಂಯುಕ್ತ ಕಿಸಾನ್ ಮೋರ್ಚಾದ ರಾಷ್ಟ್ರೀಯ ನಾಯಕರು ಭಾಗವಹಿಸುವರು.

ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು 'ರೈತ ವಿರೋಧಿ ಪ್ರಧಾನಿ' ಎಂದು ಘೋಷಿಸಲಾಗುವುದು ಎಂದು ಸಂಘಟಕರಾದ ಎಚ್.ಆರ್. ಬಸವರಾಜಪ್ಪ, ಕೆ.ಟಿ.ಗಂಗಾಧರ್, ಕೆ.ಎಲ್.ಅಶೋಕ್, ಕೆ.ಪಿ.ಶ್ರೀಪಾಲ್ ತಿಳಿಸಿದ್ದಾರೆ.

ಮರಳು ಅಕ್ರಮ ಗಣಿಗಾರಿಕೆ ಹಸಿರು ಪೀಠ ಬೇಸರ

ಪ್ರಜಾವಾಣಿ ವಾರ್ತೆ

ನವದೆಹಲಿ: ಮರಳು ಅಕ್ರಮ ಗಣಿಗಾರಿಕೆಯ ನಿಯಂತ್ರಣ ಪರಿಣಾಮಕಾರಿಯಾಗಿ ಆಗುತ್ತಿಲ್ಲ ಎಂದು ಹಸಿರು ಪೀಠವು ಅಸಮಾಧಾನ ವ್ಯಕ್ತಪಡಿಸಿದೆ. ಮರಳು ಗಣಿಗಾರಿಕೆಯನ್ನು ವೈಜ್ಞಾನಿಕವಾಗಿ ಹೇಗೆ ನಡೆಸಬಹುದು ಎಂಬ ಬಗ್ಗೆ ರಾಷ್ಟ್ರ ಮಟ್ಟದ ತಜ್ಞರ ಜತೆಗೆ ಮೂರು ತಿಂಗಳೊಳಗೆ ಚರ್ಚೆ ನಡೆಸಬೇಕು. ಕೇಂದ್ರದ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಗಣಿಗಾರಿಕೆ ಹಾಗೂ ಜಲಶಕ್ತಿ ಸಚಿವಾಲಯಗಳ ಜತೆಗೆ ಸಮನ್ವಯದೊಂದಿಗೆ ಪರಿಸರ ಮತ್ತು ಅರಣ್ಯ ಸಚಿವಾಲಯವು ಈ ಸಭೆಯನ್ನು ಆಯೋಜಿಸಬೇಕು ಎಂದು ಪೀಠವು ಹೇಳಿದೆ.



ಮರಳು ಗಣಿಗಾರಿಕೆ ನಡೆಸುವವರು 'ಸುಸ್ಥಿರ ಮರಳು ಗಣಿಗಾರಿಕೆ ಮತ್ತು ನಿರ್ವಹಣಾ ಮಾರ್ಗಸೂಚಿ, 2016' ಅನ್ನು ಪಾಲಿಸುತ್ತಿದ್ದಾರೆ ಎಂಬುದನ್ನು ಖಾತರಿಪಡಿಸಿಕೊಳ್ಳಲು ರಾಜ್ಯ ಮಟ್ಟದಲ್ಲಿಯೂ ಇಂತಹ ಸಭೆಗಳನ್ನು ನಡೆಸಬೇಕು ಎಂದು ಹಸಿರು ಪೀಠದ ಅಧ್ಯಕ್ಷ ನ್ಯಾಯಮೂರ್ತಿ ಆದರ್ಶ ಕುಮಾರ್ ಗೋಯಲ್ ಹೇಳಿದ್ದಾರೆ.

ಮರಳು ಗಣಿಗಾರಿಕೆಗೆ ಸಂಬಂಧಿಸಿದ ಹಲವು ಅರ್ಜಿಗಳನ್ನು ವಿಲೇವಾರಿ ಮಾಡಿದ ಅವರು, ಇಂತಹ ಸಭೆಗಳು ಕಾನೂನು ಜಾರಿಯ ಬಗ್ಗೆ ಸ್ಪಷ್ಟತೆ ಹಾಗೂ ಪರಿಸರ ರಕ್ಷಣೆಗೆ ನೆರವಾಗುತ್ತವೆ ಎಂದರು. ಮರಳು ಗಣಿಗಾರಿಕೆಯ ಸ್ಥಿತಿಗತಿಯ ಬಗ್ಗೆ ಪ್ರತಿ ರಾಜ್ಯವೂ ವಾರ್ಷಿಕ ವರದಿಯನ್ನು ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯಕ್ಕೆ ಸಲ್ಲಿಸಬೇಕು. ಇದರ ಆಧಾರದಲ್ಲಿ ಮರಳು ಗಣಿಕಾರಿಗೆ ಮಾರ್ಗಸೂಚಿಯನ್ನು ಸಚಿವಾಲಯವು ಕಾಲಕಾಲಕ್ಕೆ ಪರಿಷ್ಕರಿಸಬಹುದು ಎಂದು ಪೀಠವು ಹೇಳಿದೆ.

ಪರಿಸರ ಪರಿಣಾಮ ವಿಶ್ಲೇಷಣಾ ಸಮಿತಿಯ ನೇತೃತ್ವದ ತಂಡವು ಮರಳು ಗಣಿಗಾರಿಕೆ ಪ್ರದೇಶಗಳನ್ನು ಕಾಲಕಾಲಕ್ಕೆ ಪರಿಶೀಲಿಸಬೇಕು. ಪರಿಶೀಲನಾ ವರದಿ ಸಿದ್ಧಪಡಿಸಬೇಕು ಎಂದು ಸೂಚಿಸಿದೆ.

ಮರಳು ಗಣಿಗಾರಿಕೆಗೆ ನಿಗಾ ಮತ್ತು ಜಾರಿ ಮಾರ್ಗಸೂಚಿ 2020 ಅನ್ನು ಪರಿಸರ ಸಚಿವಾಲಯವು ಸಿದ್ಧಪಡಿಸಿದೆ. ಮರಳು ಗಣಿಗಾರಿಕೆ ಪ್ರದೇಶಗಳ ಮೇಲೆ ನಿಗಾ ಇರಿಸಲು ಕತ್ತಲೆಯಲ್ಲಿಯೂ ಚಿತ್ರೀಕರಣ ತಂತ್ರಜ್ಞಾನ ಇರುವ ಡ್ರೋನ್ ಕ್ಯಾಮೆರಾ ಬಳಸಬೇಕು, ಮರಳಿನ ಮೂಲಗಳನ್ನು ಗುರುತಿಸಲು ಕ್ರಮ ಕೈಗೊಳ್ಳಬೇಕು, ಪರಿಸರ ಅನುಮೋದನೆ ದೊರೆತ ಬಳಿಕ ಮರಳು ಗಣಿಗಾರಿಕೆ ಸ್ಥಳಗಳ ಮೇಲೆ ನಿಗಾ ಇರಿಸಬೇಕು ಮುಂತಾದ ಅಂಶಗಳು ಈ ಮಾರ್ಗಸೂಚಿಯಲ್ಲಿ ಇವೆ.

ಮದ್ಯಕ್ಕಾಗಿ ಕೊಲೆ

ಬೆಂಗಳೂರು: ಮದ್ಯ ಕೊಡಿಸಲಿಲ್ಲ ಎಂಬ ಕಾರಣಕ್ಕೆ ಸ್ನೇಹಿತರ ನಡುವೆ ಆರಂಭಗೊಂಡ ಜಗಳದಲ್ಲಿ ಒಬ್ಬ ಕೊಲೆಯಾಗಿದ್ದು, ಇಬ್ಬರು ಆರೋಪಿಗಳನ್ನು ಹಲಸೂರು ಪೊಲೀಸರು ಬಂಧಿಸಿದ್ದಾರೆ.

ದೊಮ್ಮಲೂರು ಬಡಾವಣೆಯ ಎ.ಕೆ.ಕಾಲೊನಿ ನಿವಾಸಿ ಸ್ಟೀಫನ್ ಕೊಲೆಯಾದ ವ್ಯಕ್ತಿ. ಅದೇ ಬಡಾವಣೆಯ ಮನು (23) ಹಾಗೂ ನಾಗರಾಜ್ (54) ಬಂಧಿತರು. ಹಲಸೂರು ಠಾಣೆಯ ವ್ಯಾಪ್ತಿಯ ಬಯಲು ರಂಗ ಮಂದಿರದ ಬಳಿ ಕೊಲೆಯಾದ ಸ್ಥಿತಿಯಲ್ಲಿ ಶವ ಪತ್ತೆಯಾಗಿತ್ತು. ಘಟನೆ ನಡೆದಿದ್ದ ಅಕ್ಕಪಕ್ಕದ ಸ್ಥಳಗಳಲ್ಲಿದ್ದ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳಲ್ಲಿ ಆರೋಪಿಗಳ ಚಲನವಲನ ಸೆರೆಯಾಗಿತ್ತು. ಇದನ್ನು ಆಧರಿಸಿ, ಪೊಲೀಸರು ತನಿಖೆ ಕೈಗೆತ್ತಿಕೊಂಡಿದ್ದರು.

'ಕೂಲಿ ಕೆಲಸ ಮಾಡಿಕೊಂಡಿದ್ದ ಸ್ಟೀಫನ್ ಹಾಗೂ ಆರೋಪಿಗಳು ಸ್ನೇಹಿತರು. ವಾರಕ್ಕೊಮ್ಮೆ ಒಟ್ಟಾಗಿ ಸೇರಿ ಮದ್ಯಪಾನ ಮಾಡುತ್ತಿದ್ದರು. ಕಳೆದ ಭಾನುವಾರ ರಾತ್ರಿಯೂ ದೊಮ್ಮಲೂರು ಬಯಲು ರಂಗಮಂದಿರದ ಬಳಿ ಮದ್ಯಪಾನ ಮಾಡಿದ್ದರು. ಸ್ಟೀಫನ್ ಮದ್ಯ ಕೊಡಿಸಲಿಲ್ಲ ಎಂಬ ಕಾರಣಕ್ಕೆ ಈ ವೇಳೆ ಮೂವರ ನಡುವೆ ಜಗಳ ಶುರುವಾಗಿತ್ತು. ಅಮಲಿನಲ್ಲಿ ಸ್ಟೀಫನ್ ಮೇಲೆ ಇಬ್ಬರೂ ಹಲ್ಲೆ ನಡೆಸಿ, ರಂಗಮಂದಿರದ ಒಳಭಾಗದಲ್ಲಿರುವ ಕಾಲುವೆಗೆ ತಳ್ಳಿದ್ದರು. ಬಳಿಕ ಸಿಮೆಂಟ್ ಇಟ್ಟಿಗೆಗಳನ್ನು ಸ್ಟೀಫನ್ ತಲೆ ಮೇಲೆ ಎತ್ತಿ ಹಾಕಿ ಕೊಲೆ ಮಾಡಿದ್ದರು' ಎಂದು ಪೊಲೀಸರು ತಿಳಿಸಿದರು.

ವೈದ್ಯ ವೃತ್ತಿ ದೇವರ ಸಮ: ಸಚಿವ ಆರ್‌.ಶಂಕರ್

ವಿದ್ಯಾರ್ಥಿಗಳಿಗೆ, ವೈದ್ಯರಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ವೈದ್ಯ ವೃತ್ತಿ ದೇವರ ಸಮವಾಗಿದ್ದು ವೈದ್ಯರು ರೋಗಿಯ ರೋಗವನ್ನು ಗುಣಪಡಿಸುವ ಮೂಲಕ ಸಮಾಜದ ಆರೋಗ್ಯವನ್ನು ಕಾಪಾಡುತ್ತಾರೆ' ಎಂದು ತೋಟಗಾರಿಕೆ ಮತ್ತು ರೇಷ್ಮೆ ಸಚಿವ ಆರ್.ಶಂಕರ್ ಹೇಳಿದರು.

ಕಾಳಿದಾಸ ಹೆಲ್ತ್ ಆ್ಯಂಡ್ ಎಜುಕೇಷನ್ ಟ್ರಸ್ಟ್ ವತಿಯಿಂದ ಸರ್ವಜ್ಞನಗರದ ಕಾಚರಕನಹಳ್ಳಿ ಶ್ರೀಸಾಯಿ ಮಂದಿರದಲ್ಲಿ ಹಮ್ಮಿಕೊಂಡಿದ್ದ ಸರ್ಕಾರಿ ಕೋಟಾದಲ್ಲಿ ಎಂಬಿಬಿಎಸ್ ಸೀಟು ಪಡೆದ ಕುರುಬ ಸಮಾಜದ 110 ವಿದ್ಯಾರ್ಥಿಗಳಿಗೆ ಸನ್ಮಾನ ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಹಿರಿಯ ವೈದ್ಯರಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಹೊಸದುರ್ಗ ಕನಕ ಗುರುಪೀಠದ ಈಶ್ವರಾನಂದಪುರಿ ಸ್ವಾಮೀಜಿ, 'ಕುರುಬ ಸಮಾಜದಲ್ಲಿ ಅನೇಕರು ಬಡವರಿದ್ದಾರೆ. ಹಣಕಾಸಿನ ಕೊರತೆಯಿಂದ ವಿದ್ಯಾಭ್ಯಾಸ ಮುಂದುವರೆಸಲು ಆಗದೆ ಇರುವ ವಿದ್ಯಾರ್ಥಿಗಳು ಕಾಳಿದಾಸ ಹೆಲ್ತ್ ಅಂಡ್ ಎಜುಕೇಷನ್ ಟ್ರಸ್ಟ್ ನ ನೆರವನ್ನು ಪಡೆದು ವಿದ್ಯಾಭ್ಯಾಸ ಮಾಡಿ ಸಮಾಜಕ್ಕೆ ಗೌರವ ತರುವ ಕೆಲಸ ಮಾಡಬೇಕಿದೆ' ಎಂದರು.

ಶ್ವಾಸಕೋಶ ತಜ್ಞ ಡಾ.ಪರಮೇಶ್, ಮಹಾರಾಷ್ಟ್ರದ ಮಕ್ಕಳ ತಜ್ಞೆ ಡಾ.ಸಂಧ್ಯಾ ಸತೀಶ್ ಕಡ್ಸೆ, ಐಎಂಎ ಮಾಜಿ ಅಧ್ಯಕ್ಷ ಡಾ.ವೀರಣ್ಣ, ಡಾ.ಸುರ್ಮೆ, ಡಾ.ಲೀಲಾ, ಡಾ.ದೇವಕಿ ರಂಗಸ್ವಾಮಿ, ಡಾ.ಸೀಮಾ, ಕೆ.ಮಲ್ಲೇಶಪ್ಪ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.



ವಿದ್ಯಾರ್ಥಿಗಳನ್ನು ಸಚಿವ ಆರ್‌. ಶಂಕರ್ ಸನ್ಮಾನಿಸಿದರು. ಹೊಸದುರ್ಗ ಕನಕ ಗುರುಪೀಠದ ಈಶ್ವರಾನಂದಪುರಿ ಸ್ವಾಮೀಜಿ, ಕಲ್ಬುರ್ಗಿ ವಿಭಾಗದ ಕನಕ ಗುರುಪೀಠದ ಸಿದ್ಧರಾಮಾನಂದಪುರಿ ಸ್ವಾಮೀಜಿ, ಸಂಸ್ಥೆಯ ಸಂಸ್ಥಾಪಕ ಡಾ.ಪರಮೇಶ್, ಟ್ರಸ್ಟಿಗಳಾದ ಡಾ.ವಿಜಯಲಕ್ಷ್ಮಿ, ಡಾ.ಸುರೇಂದ್ರ, ಡಾ.ನಾಗೇಶ್ ಇದ್ದರು.

ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ 1.17 ಲಕ್ಷ ಮಂದಿ ಕಾರ್ಯನಿರತ; ಸೇವೆ ಕಾಯಂಗೊಳಿಸಲು ಆಗ್ರಹ

ವೇತನ ಹೆಚ್ಚಳಕ್ಕೆ ಬಿಸಿಯೂಟ ನೌಕರರ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಸಿಯೂಟ ನೌಕರರಿಗೆ ಬಾಕಿ ವೇತನ ಬಿಡುಗಡೆ, ವೇತನ ಹೆಚ್ಚಳ, ನಿವೃತ್ತಿ ವೇತನ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ನೇತೃತ್ವದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಬಿಸಿಯೂಟ ನೌಕರರು ಬುಧವಾರ ಪ್ರತಿಭಟನೆ ನಡೆಸಿದರು.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಿಸಿಯೂಟ ಕಾರ್ಯಕರ್ತರು ಸಾವಿರಾರು ಸಂಖ್ಯೆಯಲ್ಲಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ತಮ್ಮ ಬೇಡಿಕೆಗಳ ಘೋಷಣೆಗಳನ್ನು ಕೂಗುತ್ತಾ ಸುಡುಬಿಸಿಲನ್ನೂ ಲೆಕ್ಕಿಸದೆ, ಪ್ರತಿಭಟನಾ ಮೆರವಣಿಗೆ ನಡೆಸಿದರು.

ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ಗೌರವ ಅಧ್ಯಕ್ಷೆ ಎಸ್.ವರಲಕ್ಷ್ಮಿ,'ರಾಜ್ಯದಲ್ಲಿರುವ ಬಿಸಿಯೂಟ ನೌಕರರ ನಾಲ್ಕು ತಿಂಗಳಿನಿಂದ ವೇತನ ಸಿಕ್ಕಿಲ್ಲ. ಇದರಿಂದ ಸಂಕಷ್ಟದ ಜೀವನ ನಡೆಸುತ್ತಿದ್ದಾರೆ. ಬಾಕಿ ವೇತನದ ಜೊತೆಗೆ ಎಲ್ಲರಿಗೂ ವೇತನ ಹೆಚ್ಚಿಸಬೇಕು' ಎಂದು ಆಗ್ರಹಿಸಿದರು.

'ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ ರಾಜ್ಯದಲ್ಲಿ 1.17 ಲಕ್ಷ ನೌಕರರು ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಬಹುತೇಕರು ಬಡ ಮಹಿಳೆಯರು, ವಿಚ್ಛೇದಿತರು ಹಾಗೂ ವಿಧವೆಯರೇ ಆಗಿದ್ದಾರೆ. ಉದ್ಯೋಗವನ್ನೇ ಆಧರಿಸಿರುವ ನೌಕರರಿಗೆ ವೇತನ ಹೆಚ್ಚಿಸುವ ಬಗ್ಗೆ ಸರ್ಕಾರಗಳಿಗೆ ಕಾಳಜಿ ಇಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಬಿಸಿಯೂಟ ನೌಕರರನ್ನು ಕಾಯಂ ಮಾಡಿ, ಸೂಕ್ತ ಸವಲತ್ತುಗಳನ್ನು ಒದಗಿಸಬೇಕು. ಪ್ರತಿ ತಿಂಗಳು ವೇತನ ಸರಿಯಾಗಿ ನೀಡಬೇಕು. ಇವರ ಸಮಸ್ಯೆಗಳನ್ನು ಕುರಿತು ಶಿಕ್ಷಣ ಇಲಾಖೆಯಡಿ ಮೇಲ್ವಿಚಾರಣೆ ನಡೆಸಬೇಕು. ನೌಕರರಿಗೆ ಕನಿಷ್ಠ ಕೂಲಿ ಹಾಗೂ ನಿವೃತ್ತಿ ವೇತನ ಸೌಲಭ್ಯ ಜಾರಿ ಮಾಡಬೇಕು. ಕೆಲಸದಿಂದ ದಿಢೀರ್ ವಜಾ ಮಾಡುತ್ತಿರುವುದನ್ನು ನಿಲ್ಲಿಸಬೇಕು' ಎಂದು ಆಗ್ರಹಿಸಿದರು.

'ಅಡುಗೆ ಮಾಡುವ ಸಂದರ್ಭದಲ್ಲಿ ಅವಘಡಗಳು ನಡೆದರೆ ಹಾಗೂ ಸೇವೆಯಲ್ಲಿರುವ ಸಂದರ್ಭದಲ್ಲಿ ಸಹಜ ಸಾವು ಸಂಭವಿಸಿದರೂ ಪರಿಹಾರ ನೀಡಬೇಕು. ನೂತನ ಶಿಕ್ಷಣ ನೀತಿಯಲ್ಲಿ ಬಿಸಿಯೂಟ ಪದ್ಧತಿಯನ್ನು ಬಲಗೊಳಿಸಬೇಕು' ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತ ಆಗ್ರಹಿಸಿದರು.

ಕಲ್ಯಾಣ ಮಂಟಪಗಳಿಗೆ ಸ್ಥಳಾಂತರ: ಪ್ರತಿಭಟನಕಾರರು ಕಾಳಿದಾಸ ರಸ್ತೆಯಲ್ಲೇ ಸಂಜೆವರೆಗೆ ಕೂತು ಪ್ರತಿಭಟನೆ ಮುಂದುವರಿಸಿದರು. ರಾತ್ರಿ ಅದೇ ರಸ್ತೆಯಲ್ಲಿ ನಿದ್ರಿಸಲು ನಿರ್ಧರಿಸಿದ್ದರು. ಆದರೆ, ಸ್ಥಳಕ್ಕೆ ಬಂದ ಪೊಲೀಸರು ಪ್ರತಿಭಟನಕಾರರ ಮನವೊಲಿಸಿ, ಸ್ಥಳೀಯ ಕಲ್ಯಾಣ ಮಂಟಪಗಳಿಗೆ ಸ್ಥಳಾಂತರಿಸಿದರು.



ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಮೇಲ್ಸೇತುವೆಯಲ್ಲಿ ಸಾಗಿದ ಬಿಸಿಯೂಟ ನೌಕರರ ಪ್ರತಿಭಟನಾ ಮೆರವಣಿಗೆ —ಪ್ರಜಾವಾಣಿ ಚಿತ್ರ

ಮಾ.10ಕ್ಕೆ ಸಭೆ: ಸಚಿವ ಸುರೇಶ್ ಕುಮಾರ್

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಮನವಿ ಪತ್ರ ಸ್ವೀಕರಿಸಿ, ಪ್ರತಿಭಟನೆ ಕೈಬಿಡುವಂತೆ ಮನವಿ ಮಾಡಿದರು. ಆದರೆ, ಪ್ರತಿಭಟನನಿರತರು 'ಬೇಡಿಕೆ ಈಡೇರುವವರೆಗೆ ಇಲ್ಲಿಂದ ಕದಲುವುದಿಲ್ಲ' ಎಂದು ಪಟ್ಟು ಹಿಡಿದರು.

'ನಿಮ್ಮ ಬೇಡಿಕೆಗಳು ನ್ಯಾಯಯುತವಾಗಿವೆ. ಈ ಕುರಿತು ಮುಂದಿನ ಬುಧವಾರ (ಮಾ.10) ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಸೂಕ್ತ ಪರಿಹಾರ ಕ್ರಮ ಕೈಗೊಳ್ಳಲಾಗುವುದು' ಎಂದು ಸಚಿವರು ಮನವೊಲಿಸಿದರು.

ಸುದ್ದಿ 2 ನಿಮಿಷ

ಬರಹಗಾರ ಕೆ.ಟಿ.ಗಟ್ಟಿಗೆ ಮುಳಿಯ ತಿಮ್ಮಪ್ಪಯ್ಯ ಪ್ರಶಸ್ತಿ

ಉಡುಪಿ: ಹಿರಿಯ ವಿದ್ವಾಂಸರಾದ ದಿ.ಮುಳಿಯ ತಿಮ್ಮಪ್ಪಯ್ಯ ಅವರ ಸ್ಮರಣಾರ್ಥ ನೀಡಲಾಗುವ ಮುಳಿಯ ತಿಮ್ಮಪ್ಪಯ್ಯ ಪ್ರಶಸ್ತಿಗೆ ಲೇಖಕ ಹಾಗೂ ಕಾದಂಬರಿಕಾರ ಕೆ.ಟಿ.ಗಟ್ಟಿ ಆಯ್ಕೆಯಾಗಿದ್ದಾರೆ.

ವಿದ್ವಾಂಸ ಪ್ರೊ.ಬಿ.ಎ.ವಿವೇಕ ರೈ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿ ಸಭೆಯಲ್ಲಿ ಈ ನಿರ್ಣಯ ತೆಗೆದುಕೊಳ್ಳಲಾಗಿದೆ.

ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದ ಮೂಲಕ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿ ₹ 10,000 ನಗದು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ ಎಂದು ಕೇಂದ್ರದ ಆಡಳಿತಾಧಿಕಾರಿ ಡಾ.ಬಿ. ಜಗದೀಶ್ ಶೆಟ್ಟಿ ತಿಳಿಸಿದ್ದಾರೆ.

ಕೆ.ಟಿ. ಗಟ್ಟಿ ಅವರು ಕೇರಳ ವಿವಿಯಲ್ಲಿ ಇಂಗ್ಲಿಷ್ ಎಂ.ಎ ಪದವಿ ಪಡೆದು ಸ್ವದೇಶದಲ್ಲಿ 18 ವರ್ಷ ಹಾಗೂ ವಿದೇಶದಲ್ಲಿ 8 ವರ್ಷ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಲಂಡನ್‌ನ ಟ್ರಿನಿಟಿ ಕಾಲೇಜಿನಿಂದ ಇಂಗ್ಲಿಷ್ ಡಿಪ್ಲೊಮಾ, ಆಕ್ಸ್‌ಫರ್ಡ್ ಕಾಲೇಜ್ ಆಫ್ ಪ್ರಿಸೆಪ್ಟರ್ಸ್‌ನಿಂದ ಶಿಕ್ಷಣ ಡಿಪ್ಲೊಮಾ ಪಡೆದಿದ್ದಾರೆ.

ಪ್ರಬಂಧಕಾರ, ರಂಗತಜ್ಞ, ಕಾದಂಬರಿಕಾರ, ನಾಟಕಕಾರ ಹಾಗೂ ಅನುವಾದಕರಾಗಿ ಸೇವೆ ಸಲ್ಲಿಸಿರುವ ಗಟ್ಟಿ ಇಂಗ್ಲಿಷ್ ಕವನಗಳನ್ನು ತುಳುವಿಗೆ ಅನುವಾದಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ಸಂದೇಶ ಪ್ರಶಸ್ತಿ, ನಿರಂಜನ ಪ್ರಶಸ್ತಿ, ಚದುರಂಗ ಪ್ರಶಸ್ತಿ, ಉಗ್ರಾಣ ಪ್ರಶಸ್ತಿ, ಸವ್ಯಸಾಚಿ ಪ್ರಶಸ್ತಿಗಳು ಗಟ್ಟಿ ಅವರಿಗೆ ಸಂದಿವೆ.



'ಟೊಯೊಟಾ ಬಿಕ್ಕಟ್ಟು ತಾರ್ಕಿಕ ಅಂತ್ಯ'

ರಾಮನಗರ: 'ಬಿಡದಿಯ ಟೊಯೊಟಾ ಕಿರ್ಲೋಸ್ಕರ್ ಕಾರ್ಖಾನೆ ಬಿಕ್ಕಟ್ಟು ಸುಖಾಂತ್ಯ ಕಂಡಿದ್ದು, ಕಾರ್ಮಿಕರು ಕೆಲಸಕ್ಕೆ ಹಾಜರಾಗುತ್ತಿದ್ದಾರೆ' ಎಂದು ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ತಿಳಿಸಿದ್ದಾರೆ.

'ಬುಧವಾರ 2700 ಕಾರ್ಮಿಕರು ಕೆಲಸಕ್ಕೆ ಹಾಜರಾಗಿದ್ದಾರೆ. ಉಳಿದ ಕಾರ್ಮಿಕರು ಶೀಘ್ರದಲ್ಲೇ ಹಾಜರಾಗುವ ವಿಶ್ವಾಸ ಇದೆ. ಈ ಮೂಲಕ 115 ದಿನಗಳ ಕಾರ್ಮಿಕ ಹೋರಾಟ ಮುಗಿದಿದೆ. ಸೇವೆಯಿಂದ ಅಮಾನತುಗೊಂಡ 66 ಕಾರ್ಮಿಕರ ವಿರುದ್ಧದ ವಿಚಾರಣೆಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸುವಂತೆ ಕಾರ್ಖಾನೆ ಆಡಳಿತ ಮಂಡಳಿಗೆ ಸೂಚಿಸಲಾಗಿದೆ. ಇದಲ್ಲದೆ ಕಾರ್ಮಿಕರ ಕುಂದುಕೊರತೆಗಳನ್ನು ಪರಿಹರಿಸುವಂತೆ ಕಾರ್ಮಿಕ ಇಲಾಖೆ ಆಯುಕ್ತರಿಗೆ ತಿಳಿಸಲಾಗಿದೆ' ಎಂದು ಅವರು ಹೇಳಿದ್ದಾರೆ.

'ಇದೇ ತಿಂಗಳ 1ರಂದು ಕೆಲವು ಕಾರ್ಮಿಕ ಮುಖಂಡರು ಕಾರ್ಮಿಕ ಇಲಾಖೆ ಆಯುಕ್ತರ ಕಚೇರಿಗೆ ಹಾಜರಾಗಿ, ನೌಕರರು ಕೆಲಸಕ್ಕೆ ಹಾಜರಾಗಲು ಸಿದ್ಧರಿದ್ದು ಅವಕಾಶ ಮಾಡಿಕೊಡುವಂತೆ ಪತ್ರದ ಮೂಲಕ ಮನವಿ ಮಾಡಿದ್ದರು. ಇದಕ್ಕೆ ಕಾರ್ಖಾನೆಯ ಆಡಳಿತ ಮಂಡಳಿಯೂ ಸ್ಪಂದಿಸಿದ್ದು, ಕಾರ್ಮಿಕರು ಮುಚ್ಚಳಿಕೆ ಬರೆದುಕೊಡಬೇಕು ಎಂಬ ಷರತ್ತನ್ನು ಕೈಬಿಟ್ಟು ಎಲ್ಲ ಕಾರ್ಮಿಕರು ಕೆಲಸಕ್ಕೆ ಹಾಜರಾಗಬಹುದು ಎಂದು ಪ್ರಕಟಣೆ ಹೊರಡಿಸಿತು. ಈ ಮೂಲಕ ವಿವಾದ ತಾರ್ಕಿಕ ಅಂತ್ಯ ಕಂಡಿತು' ಎಂದು ಅವರು ವಿವರಿಸಿದ್ದಾರೆ.

ಮಹಿಳೆಯರ ಸಬಲೀಕರಣಕ್ಕೆ ಫಿನೊಲೆಕ್ಸ್ ಕ್ರಮ

ಮುಂಬೈ: ಮಹಿಳೆಯರ ಸಬಲೀಕರಣಕ್ಕಾಗಿ ಫಿನೋಲೆಕ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಎಫ್ಐಎಲ್) ತನ್ನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್ಆರ್) ಪಾಲುದಾರ ಮುಕುಲ್ ಮಾಧವ್ ಫೌಂಡೇಶನ್ (ಎಂಎಂಎಫ್) ಮೂಲಕ ಹಲವು ಯೋಜನೆಗಳಲ್ಲಿ ಹೂಡಿಕೆ ಮಾಡಿದೆ.

'ಎಂಎಂಎಫ್ ಮತ್ತು ಎಫ್ಐಎಲ್‌ನ ಸಹಯೋಗದಿಂದ 2019ರಲ್ಲಿ ಮಹಾರಾಷ್ಟ್ರದ ಉಸ್ಮಾನಾಬಾದ್‌ನ ಶೇ 60ರಷ್ಟು ರೈತ ಮಹಿಳೆಯರಿಗೆ ಸಾಲ ಮರುಪಾವತಿಸಲು ಮತ್ತು ಅವರ ಮಕ್ಕಳ ಶಿಕ್ಷಣಕ್ಕೆ ನೆರವಾಗಲು ಸಾಧ್ಯವಾಗಿದೆ' ಎಂದು ಫಿನೋಲೆಕ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಕಾರ್ಯನಿರ್ವಾಹಕ ಅಧ್ಯಕ್ಷ ಪ್ರಕಾಶ್ ಪಿ. ಛಾಬ್ರಿಯಾ ತಿಳಿಸಿದ್ದಾರೆ.

ನ್ಯಾಯಾಲಯ ಸಿಬ್ಬಂದಿಗೆ ವೇತನ ಪರಿಷ್ಕರಣೆಗೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೆಳಹಂತದ ನ್ಯಾಯಾಲಯಗಳ ಸಿಬ್ಬಂದಿಗೆ 2009ರಿಂದ ಪೂರ್ವಾನ್ವಯವಾಗುವಂತೆ ವೇತನ ಪರಿಷ್ಕರಣೆ ಮಾಡುವ ತೀರ್ಮಾನವನ್ನು ಬುಧವಾರ ನಡೆದ ಸಂಪುಟ ಸಭೆಯಲ್ಲಿ ಕೈಗೊಳ್ಳಲಾಗಿದೆ.

ಸಂಪುಟ ಸಭೆಯ ಬಳಿಕ ಈ ಕುರಿತು ಮಾಹಿತಿ ನೀಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ, 'ಕೆಳಹಂತದ ನ್ಯಾಯಾಲಯಗಳಲ್ಲಿನ ಗುಮಾಸ್ತರು, ಲಿಪಿಕ ಮತ್ತು ಇತರ ಹುದ್ದೆಗಳ ಸಿಬ್ಬಂದಿಯ ವೇತನ ಪರಿಷ್ಕರಣೆಗೆ ನ್ಯಾಯಾಲಯ ಆದೇಶ ನೀಡಿತ್ತು. ಅದನ್ನು ಜಾರಿಗೊಳಿಸದ ಕಾರಣದಿಂದ ನ್ಯಾಯಾಂಗ ನಿಂದನೆ ಪ್ರಕರಣವೂ ದಾಖಲಾಗಿತ್ತು. 2009ರಿಂದ ವೇತನ ಶ್ರೇಣಿ ಪರಿಷ್ಕರಣೆಗೆ ಸಂಪುಟ ಒಪ್ಪಿಗೆ ನೀಡಿದೆ' ಎಂದು ಹೇಳಿದರು.

ವೇತನ ಪರಿಷ್ಕರಣೆಗೆ ಪೂರಕವಾಗಿ, 'ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರ ಹುದ್ದೆಗಳು) (ನೇಮಕಾತಿ) (ತಿದ್ದುಪಡಿ) ನಿಯಮಗಳು-2020'ಕ್ಕೆ ಸಂಪುಟ ಒಪ್ಪಿಗೆ ನೀಡಿದೆ.

ಪ್ರೋತ್ಸಾಹ ಧನ ರದ್ದು: ಕಂಪ್ಯೂಟರ್ ಶಿಕ್ಷಣ ಪಡೆಯುವ ಸರ್ಕಾರಿ ನೌಕರರಿಗೆ ₹ 5,000 ಪ್ರೋತ್ಸಾಹಧನ ನೀಡುವ ಯೋಜನೆಯನ್ನು 2012ರಲ್ಲಿ ಜಾರಿಗೆ ತರಲಾಗಿತ್ತು. ಈಗ ಎಲ್ಲ ನೌಕರರೂ ಕಂಪ್ಯೂಟರ್ ಜ್ಞಾನ ಹೊಂದಿರುವ ಕಾರಣದಿಂದ ಪ್ರೋತ್ಸಾಹಧನ ನೀಡುವ ಯೋಜನೆಯನ್ನು ರದ್ದು ಮಾಡುವ ತೀರ್ಮಾನವನ್ನು ಸಂಪುಟ ಸಭೆ ಕೈಗೊಂಡಿದೆ. ಪ್ರೋತ್ಸಾಹ ಧನ ರದ್ದತಿಗಾಗಿ 'ಕರ್ನಾಟಕ ನಾಗರಿಕ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) (ತಿದ್ದುಪಡಿ) ನಿಯಮಗಳು-2021'ಕ್ಕೆ ಅನುಮೋದನೆ ನೀಡಲಾಗಿದೆ ಎಂದು ಸಚಿವರು ತಿಳಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನದಲ್ಲಿರುವ ಸರ್ಕಾರಿ ಹಾಗೂ ಅನುದಾನಿತ ಆಯುಷ್ ವೈದ್ಯಕೀಯ ಕಾಲೇಜುಗಳು, ಫಾರ್ಮಸಿ ಕಾಲೇಜಿನ ಬೋಧಕ ಸಿಬ್ಬಂದಿಗೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ ವೇತನ ಶ್ರೇಣಿಯವನ್ನು ನೀಡುವ ಪ್ರಸ್ತಾವಕ್ಕೂ ಸಂಪುಟ ಒಪ್ಪಿಗೆ ಸೂಚಿಸಿದೆ.

'ಕಲ್ಯಾಣ ಕರ್ನಾಟಕ'ಕ್ಕೆ ಹಾಸ್ಟೆಲ್: ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಪಡೆಯಲು ಬೆಂಗಳೂರಿಗೆ ಬರುವ ಕಲ್ಯಾಣ ಕರ್ನಾಟಕದ ಅಭ್ಯರ್ಥಿಗಳಿಗೆ ವಸತಿ ಸೌಕರ್ಯ ಒದಗಿಸಲು ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ₹ 59 ಕೋಟಿ ವೆಚ್ಚದಲ್ಲಿ ರಾಜಧಾನಿಯಲ್ಲಿ 400 ವಿದ್ಯಾರ್ಥಿಗಳ ಸಾಮರ್ಥ್ಯದ ಹಾಸ್ಟೆಲ್ ನಿರ್ಮಿಸುವ ಪ್ರಸ್ತಾವಕ್ಕೂ ಸಂಪುಟ ಒಪ್ಪಿಗೆ ನೀಡಿದೆ ಎಂದು ಬೊಮ್ಮಾಯಿ ತಿಳಿಸಿದರು.

ಮಂಡಳಿ ಅಧ್ಯಕ್ಷರಾಗಿ ಸಿಎಂ: ರಾಜ್ಯ ಜಲ ಸಾರಿಗೆ ಮಂಡಳಿಯ ಅಧ್ಯಕ್ಷ ಸ್ಥಾನವನ್ನು ಮುಖ್ಯಮಂತ್ರಿಯವರಿಗೆ ನೀಡುವುದಕ್ಕೆ ಪೂರಕವಾಗಿ ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾವಕ್ಕೂ ಒಪ್ಪಿಗೆ ನೀಡಲಾಗಿದೆ. ಈವರೆಗೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷರಾಗಿದ್ದರು. ಮುಂದೆ ಅಧ್ಯಕ್ಷರ ಹುದ್ದೆಯನ್ನು ಮುಖ್ಯಮಂತ್ರಿಯವರಿಗೆ ಮತ್ತು ಉಪಾಧ್ಯಕ್ಷರ ಹುದ್ದೆಯನ್ನು ಬಂದರು ಸಚಿವರಿಗೆ ನೀಡುವುದಕ್ಕೆ ಪೂರಕವಾಗಿ ಕಾಯ್ದೆಗೆ ತಿದ್ದುಪಡಿ ತರಲಾಗುವುದು ಎಂದು ಹೇಳಿದರು.

ಸಿಸಿಟಿವಿ ಅಳವಡಿಕೆಗೆ ₹ 18.50 ಕೋಟಿ

ರಾಜ್ಯದ 774 ಪೊಲೀಸ್ ಠಾಣೆಗಳಲ್ಲಿ ಈಗಾಗಲೇ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾಗಳನ್ನು ಮೇಲ್ದರ್ಜೆಗೇರಿಸಲು ಮತ್ತು 281 ಪೊಲೀಸ್ ಠಾಣೆಗಳಲ್ಲಿ ಹೊಸದಾಗಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲು ₹ 18.50 ಕೋಟಿ ಒದಗಿಸುವ ಪ್ರಸ್ತಾವಕ್ಕೆ ಸಂಪುಟ ಒಪ್ಪಿಗೆ ನೀಡಿದೆ.

ಒತ್ತುವರಿ ತೆರವುಗೊಂಡ 2 ಎಕರೆ 2 ಗುಂಟೆ ಜಾಗದಲ್ಲಿ ನಿರ್ಮಾಣವಾಗಲಿದೆ ಉದ್ಯಾನ

ನಾಗರಬಾವಿ: ಬಿಡಿಎ ಜಾಗದ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗರಭಾವಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಜಾಗದಲ್ಲಿ ಅನಧಿಕೃತವಾಗಿ ನಿರ್ಮಾಣವಾಗಿದ್ದ ಮೂರು ಕಾಂಕ್ರೀಟ್ ಕಟ್ಟಡಗಳು, ತಾತ್ಕಾಲಿಕ ಶೆಡ್‌ಗಳು, ಗ್ಯಾರೇಜ್‌ಗಳು ಮತ್ತು ಆವರಣ ಗೋಡೆಗಳನ್ನು ಪ್ರಾಧಿಕಾರದ ಅಧಿಕಾರಿಗಳು ಹಾಗೂ ನಗರ ಜಿಲ್ಲಾಡಳಿತದ ಅಧಿಕಾರಿಗಳು ಪೊಲೀಸ್ ಭದ್ರತೆಯೊಂದಿಗೆ ಬುಧವಾರ ತೆರವುಗೊಳಿಸಿದರು.

ನಾಗರಬಾವಿಯಲ್ಲಿ ವರ್ತುಲ ರಸ್ತೆಯ ಸಮೀಪದಲ್ಲಿ ಸರ್ವೆ ನಂಬರ್ 30ರಲ್ಲಿ ಪ್ರಾಧಿಕಾರವು 3 ಎಕರೆ 5 ಗುಂಟೆ ಜಮೀನನ್ನು ಹೊಂದಿದೆ. ಅದರಲ್ಲಿ 1 ಎಕರೆ 3 ಗುಂಟೆ ಜಾಗವನ್ನು ರಸ್ತೆ ನಿರ್ಮಾಣಕ್ಕೆ ಬಳಸಲಾಗಿದೆ. ಇನ್ನುಳಿದ 2 ಎಕರೆ 2 ಗುಂಟೆ ಜಾಗದ ಮಾಲೀಕತ್ವಕ್ಕೆ ಸಂಬಂಧಿಸಿದ ವ್ಯಾಜ್ಯ ಸುಪ್ರೀಂ ಕೋರ್ಟ್‌ನಲ್ಲಿ ಇತ್ಯರ್ಥಕ್ಕೆ ಬಾಕಿ ಇತ್ತು. ಸುಪ್ರೀಂ ಕೋರ್ಟ್ ಬಿಡಿಎ ಪರವಾಗಿ ಇತ್ತೀಚೆಗೆ ತೀರ್ಪು ನೀಡಿತ್ತು. ತೆರವುಗೊಂಡ ಜಾಗದ ಮೌಲ್ಯ ₹ 80 ಕೋಟಿ ಎಂದು ಅಂದಾಜಿಸಲಾಗಿದೆ.

'ನಾಗರಬಾವಿಯಲ್ಲಿ ಒತ್ತುವರಿಯಾದ ಜಾಗವನ್ನು ತೆರವುಗೊಳಿಸಿ ಅಲ್ಲಿ ಉದ್ಯಾನ ನಿರ್ಮಾಣ ಮಾಡುವಂತೆ ಸುಪ್ರೀಂ ಕೋರ್ಟ್ ಸೂಚಿಸಿತ್ತು. ತೆರವಿಗೆ ಮುನ್ನ ವಿಚಾರಣೆ ನಡೆಸಿ ಒತ್ತುವರಿದಾರರ ಮನವಿಯನ್ನೂ ಆಲಿಸುವಂತೆಯೂ ಹೇಳಿತ್ತು. ಆ ಪ್ರಕಾರ ವಿಚಾರಣೆ ನಡೆಸಿ, ಒತ್ತುವರಿದಾರರ ಕೋರಿಕೆಯನ್ನು ತಿರಸ್ಕರಿಸಿದ್ದೇವೆ' ಎಂದು ಬಿಡಿಎ ಆಯುಕ್ತ ಎಚ್.ಆರ್. ಮಹದೇವ್ 'ಪ್ರಜಾವಾಣಿ'ಗೆ ತಿಳಿಸಿದರು.

'ಒತ್ತುವರಿ ತೆರವುಗೊಳಿಸುವ ಮುನ್ನವೇ ಆ ಜಾಗದಲ್ಲಿ ಉದ್ಯಾನ ನಿರ್ಮಿಸಲು ಸಿದ್ಧತೆ ಮಾಡಿಕೊಂಡಿದ್ದೆವು. ಅದಕ್ಕೆ ಟೆಂಡರ್ ಕೂಡಾ ಕರೆದಿದ್ದೆವು. ಅಲ್ಲಿ ಉದ್ಯಾನ ನಿರ್ಮಿಸುವ ಕಾರ್ಯ ಒಂದು ತಿಂಗಳಲ್ಲಿ ಆರಂಭವಾಗಲಿದೆ' ಎಂದು ಅವರು ಮಾಹಿತಿ ನೀಡಿದರು.

ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್, 'ಇದು ಕೇವಲ ಆರಂಭವಷ್ಟೇ. ನಗರದ ಜಯನಗರ, ಕೋರಮಂಗಲ, ಪೀಣ್ಯ, ವಿಜಯನಗರ, ಚಂದ್ರಾ ಬಡಾವಣೆ ಸೇರಿದಂತೆ ವಿವಿಧ ಬಡಾವಣೆಗಳಲ್ಲಿ ಬಿಡಿಎಗೆ ಸೇರಿದ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿಗಳು ಒತ್ತುವರಿಯಾಗಿವೆ. ಇವುಗಳನ್ನು ತೆರವುಗೊಳಿಸುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೂಚನೆ ನೀಡಿದ್ದಾರೆ. ಒತ್ತುವರಿ ಜಾಗಗಳನ್ನು ಗುರುತಿಸಿ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಒತ್ತುವರಿಯಾದ ಜಾಗಗಳೆಲ್ಲವನ್ನೂ ಕಾನೂನು ಪ್ರಕಾರ ವಶಕ್ಕೆ ಪಡೆಯಲಿದ್ದೇವೆ' ಎಂದು ತಿಳಿಸಿದರು.

ಮುಖ್ಯಾಂಶಗಳು

- ಒತ್ತುವರಿಯಾಗಿದ್ದ ಜಾಗದ ಅಂದಾಜು ಮೌಲ್ಯ ₹ 80 ಕೋಟಿ
- ಮತ್ತೆ ವಶಕ್ಕೆ ಪಡೆದ ಜಾಗದಲ್ಲಿ ಉದ್ಯಾನ ನಿರ್ಮಿಸಲು ಟೆಂಡರ್ ಕರೆದಿರುವ ಬಿಡಿಎ
- ಉದ್ಯಾನ ನಿರ್ಮಾಣ ಕಾಮಗಾರಿ 30ಗಳೊಳಗೆ ಆರಂಭ



ನಾಗರಬಾವಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಜಾಗವನ್ನು ಒತ್ತುವರಿ ಮಾಡಿಕೊಂಡು ನಿರ್ಮಿಸಿದ್ದ ಕಟ್ಟಡಗಳನ್ನು ಬುಧವಾರ ತೆರವುಗೊಳಿಸಲಾಯಿತು

> ಬಿಡಿಎ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವವರು ಎಷ್ಟೇ ಪ್ರಭಾವಿಗಳಾಗಿದ್ದರೂ ಸರಿಯೇ. ಪ್ರಾಧಿಕಾರದ ಜಾಗಗಳನ್ನು ವಶಪಡಿಸಿಕೊಂಡು ಜನಪರ ಯೋಜನೆಗಳಿಗಾಗಿ ಬಳಸುತ್ತೇವೆ
> **ಎಸ್.ಆರ್.ವಿಶ್ವನಾಥ್,** ಬಿಡಿಎ ಅಧ್ಯಕ್ಷ

> ಬಿಡಿಎ ಅಭಿವೃದ್ಧಿಪಡಿಸಿದ ವಿವಿಧ ಬಡಾವಣೆಗಳಲ್ಲಿ ಅನೇಕ ಕಡೆ ಜಾಗ ಒತ್ತುವರಿಯಾಗಿರುವುದನ್ನು ಗುರುತಿಸಿದ್ದೇವೆ. ಹಂತ ಹಂತವಾಗಿ ಅವುಗಳನ್ನು ತೆರವುಗೊಳಿಸುತ್ತೇವೆ
> **ಎಚ್.ಆರ್.ಮಹದೇವ್,** ಬಿಡಿಎ ಆಯುಕ್ತ

ಬಿಬಿಎಂಪಿ: ಕಸ ವಿಲೇವಾರಿಗೆ ಕಂಪನಿ

ಒಂದನೇ ಪುಟದಿಂದ...

ಪಾಲಿಕೆಯಿಂದ ಇಬ್ಬರು, ರಾಜ್ಯ ಸರ್ಕಾರದಿಂದ ಮೂವರು ಪದನಿಮಿತ್ತ ನಿರ್ದೇಶಕರು ಇರಲಿದ್ದು, ಕಸ ನಿರ್ವಹಣೆಯಲ್ಲಿ ತಜ್ಞರಾಗಿರುವ ಇಬ್ಬರು ನಿರ್ದೇಶಕರನ್ನು ಸರ್ಕಾರ ನಾಮನಿರ್ದೇಶನ ಮಾಡುತ್ತದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ದಿನಕ್ಕೆ 5000 ಟನ್‌ಗಳಷ್ಟು ಕಸ ಉತ್ಪತ್ತಿಯಾಗುತ್ತಿದೆ. ಸಂಪೂರ್ಣ ಕಸ ಸಂಗ್ರಹ, ಸಾಗಣೆ, ವಿಲೇವಾರಿ ಎಲ್ಲವನ್ನೂ ಕಂಪನಿಯೇ ನಿರ್ವಹಿಸುತ್ತದೆ. ರಾಜ್ಯ ಸರ್ಕಾರ ಒದಗಿಸುವ ಅನುದಾನ, ಬಳಕೆದಾರರ ಶುಲ್ಕ ಮತ್ತು ಬಿಬಿಎಂಪಿ ನಿಧಿಯಲ್ಲಿ ಕಂಪನಿ ಕಾರ್ಯನಿರ್ವಹಿಸುತ್ತದೆ. ಕಸ ನಿರ್ವಹಣೆಯನ್ನು ಆದಾಯದ ಮೂಲವನ್ನಾಗಿ ಪರಿವರ್ತಿಸುವ ಉದ್ದೇಶದೊಂದಿಗೆ ಕಂಪನಿ ಆರಂಭಿಸಲಾಗುತ್ತಿದೆ ಎಂದು ಸಚಿವರು ತಿಳಿಸಿದರು.

ಬಿಬಿಎಂಪಿಯ ನೂತನ ಕಾಯ್ದೆಯ ಅಡಿಯಲ್ಲಿ ಕಂಪನಿ ಆರಂಭಕ್ಕೆ ಅವಕಾಶ ಕಲ್ಪಿಸಲಾಗಿದೆ. ಕಸದಿಂದ ಕಾಂಪೋಸ್ಟ್ ತಯಾರಿ, ವಿದ್ಯುತ್ ಉತ್ಪಾದನೆ ಮಾಡುವ ಹೊಣೆಗಳನ್ನೂ ಕಂಪನಿಗೆ ವರ್ಗಾಯಿಸಲಾಗುವುದು. ಕಸದಿಂದ ವಿದ್ಯುತ್ ಉತ್ಪಾದಿಸುವ ಘಟಕಗಳ ನಿರ್ಮಾಣ, ನಿರ್ವಹಣೆಯನ್ನೂ ಹೊಸ ಕಂಪನಿ ಮಾಡಲಿದೆ ಎಂದರು.

ಗುತ್ತಿಗೆ ಪದ್ಧತಿ ರದ್ದು: ಬಿಎಸ್‌ಡಬ್ಲ್ಯುಎಂಎಲ್ ಅಸ್ತಿತ್ವಕ್ಕೆ ಬಂದ ಬಳಿಕ ಬಿಬಿಎಂಪಿ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಗುತ್ತಿಗೆ ವ್ಯವಸ್ಥೆ ರದ್ದಾಗಲಿದೆ. ಮುಂದೆ ಪಾಲಿಕೆಯ ಮೂಲಕ ಯಾವುದೇ ಟೆಂಡರ್ ಪ್ರಕ್ರಿಯೆಗಳೂ ನಡೆಯುವುದಿಲ್ಲ. ಆ ಎಲ್ಲ ಪ್ರಕ್ರಿಯೆಗಳನ್ನೂ ಬಿಎಸ್‌ಡಬ್ಲ್ಯುಎಂಎಲ್‌ನಿರ್ವಹಿಸುತ್ತದೆ ಎಂದು ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕಸದ ಮಾಫಿಯಾದಿಂದಾಗಿ ಕಸ ವಿಲೇವಾರಿ ಸಮರ್ಪಕವಾಗಿ ನಡೆಯುತ್ತಿರಲಿಲ್ಲ. ಯಾವುದೇ ಮಿಶ್ರ ಕಸ ಭೂಭರ್ತಿ ಕೇಂದ್ರವನ್ನು ತಲುಪಬಾರದು ಎಂದು ಹಸಿರು ನ್ಯಾಯಮಂಡಳಿ ಸೂಚನೆ ನೀಡಿದ್ದರೂ ಅದರ ಅನುಷ್ಠಾನ ಸಾಧ್ಯವಾಗಿರಲಿಲ್ಲ. ಈಗಲೂ ನಿತ್ಯ 3 ಸಾವಿರ ಟನ್‌ಗಳಷ್ಟು ಮಿಶ್ರ ಕಸ ಭೂಭರ್ತಿ ಕೇಂದ್ರವನ್ನು ತಲುಪುತ್ತಿದೆ. ಗುತ್ತಿಗೆದಾರರು ಅಧಿಕಾರಿಗಳು ಹಾಗೂ ಪಾಲಿಕೆ ಸದಸ್ಯರ ನಡುವಿನ ಅಪವಿತ್ರ ಮೈತ್ರಿಯಿಂದಾಗಿ ಕಸ ವಿಲೇವಾರಿ ವ್ಯವಸ್ಥೆಯಲ್ಲಿ ಪದೇ ಪದೇ ಸಮಸ್ಯೆಗಳು ಎದುರಾಗುತ್ತಿದ್ದವು. ಸ್ವಚ್ಛ ಸರ್ವೇಕ್ಷಣ್ ಸಮೀಕ್ಷೆಯಲ್ಲೂ ಬಿಬಿಎಂಪಿಯ ಕಳಪೆ ಸಾಧನೆ ಮಾಡುವುದಕ್ಕೆ ಕಸ ವಿಲೇವಾರಿ ಸಮರ್ಪಕವಾಗಿ ನಡೆಯದಿರುವುದು ಕೂಡಾ ಕಾರಣವಾಗಿತ್ತು. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವಂತೆ ಸಾರ್ವಜನಿಕರು ಹಾಗೂ ಸಂಘ ಸಂಸ್ಥೆಗಳು ಸರ್ಕಾರವನ್ನು ಒತ್ತಾಯಿಸಿದ್ದವು.

ನೀರು ಪೂರೈಕೆ: ಮರು ಪರಿಶೀಲನೆಗೆ ನಿರ್ಧಾರ

ಆನೇಕಲ್ ತಾಲ್ಲೂಕಿನ ಸೂರ್ಯನಗರ ಮತ್ತು ಸುತ್ತಲಿನ 52 ಗ್ರಾಮಗಳಿಗೆ ಜಲ ಜೀವನ್ ಮಿಷನ್‌ನಡಿ ಕುಡಿಯುವ ನೀರು ಪೂರೈಸಲು ಬಹುಗ್ರಾಮ ಕುಡಿಯುವ ನೀರು ಪೂರೈಕೆ ಯೋಜನೆ ಅನುಷ್ಠಾನಕ್ಕೆ ಒಪ್ಪಿಗೆ ನೀಡುವ ಪ್ರಸ್ತಾವ ಸಂಪುಟ ಸಭೆಯ ಮುಂದಿತ್ತು. ಆದರೆ, ಯೋಜನೆಯನ್ನು ಮರು ಪರಿಶೀಲಿಸಲು ನಿರ್ಧಾರ ಕೈಗೊಳ್ಳಲಾಗಿದೆ ಎಂದು ಬಸವರಾಜ ಬೊಮ್ಮಾಯಿ ತಿಳಿಸಿದರು.

'ವಿಧಾನಸಭೆಯಲ್ಲಿ ಒಡೆಯರ್ ಭಾವಚಿತ್ರ ಅಳವಡಿಸಿ'



ಸೋಮಶೇಖರ್

ಬೆಂಗಳೂರು: ವಿಧಾನಸಭೆಯಲ್ಲಿ ಹತ್ತನೇ ಚಾಮರಾಜ ಒಡೆಯರ್ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರ ಅಳವಡಿಸಬೇಕು ಹಾಗೂ ಮೈಸೂರು ವಿಮಾನ ನಿಲ್ದಾಣಕ್ಕೆ ಚಾಮರಾಜ ಒಡೆಯರ್ ಹೆಸರಿಡಬೇಕು ಎಂದು ಕೋರಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ವಿಧಾನಸಭಾ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಪತ್ರ ಬರೆದಿದ್ದಾರೆ.

'ರಾಜಪರಂಪರೆಯ ಕಾಲದಲ್ಲಿಯೇ ಪ್ರಜಾಪ್ರಭುತ್ವದ ಪರಿಕಲ್ಪನೆ ಹೊಂದಿ ಅದನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿದ್ದವರು ಚಾಮರಾಜ ಒಡೆಯರ್ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್. ರಾಜ್ಯಕ್ಕೆ ಉತ್ತಮ ಹೆಸರು ತಂದು ಕೊಡುವಲ್ಲಿ ಅಂದಿನ ಮೈಸೂರು ಮಹಾಸಂಸ್ಥಾನದ ಮಹಾರಾಜರ ಕೊಡುಗೆಗಳೂ ಸಾಕ್ಷಿವೆ' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

'ಕರ್ನಾಟಕ ಇಂದು ದೇಶ-ವಿದೇಶದಲ್ಲಿ ಹೆಸರು ಗಳಿಸಲು ಮೈಸೂರು ಹಾಗೂ ಮಹಾರಾಜರ ಕೊಡುಗೆ ಅಪಾರವಾಗಿದೆ. ಜೊತೆಗೆ ಸ್ವತಃ ರಾಜಮಾತೆಯವರೇ ಪತ್ರ ಬರೆದು ಕೋರಿದ್ದು, ಅವರಿಗೆ ಗೌರವ ಸೂಚಿಸುವುದು ನಮ್ಮ ಕರ್ತವ್ಯವಾಗಿದೆ' ಎಂದೂ ಅವರು ಹೇಳಿದ್ದಾರೆ.

ಪ್ರಶಂಸೆ: 'ಮುಖ್ಯಮಂತ್ರಿ ಮತ್ತು ಸಭಾಧ್ಯಕ್ಷರಿಗೆ ಪತ್ರ ಬರೆದು ಇಂತಹ ಕಾರ್ಯಕ್ಕೆ ಮುಂದಾಳತ್ವ ವಹಿಸಿರುವ ಎಸ್.ಟಿ. ಸೋಮಶೇಖರ್ ನಡೆ ಪ್ರಶಂಸನಾರ್ಹ' ಎಂದು ರಾಜಮಾತೆ ಪ್ರಮೋದಾ ದೇವಿ ಒಡೆಯರ್ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ನಿಧನ ವಾರ್ತೆ

ಬೆಮೆಲ್ ಸೋಮಣ್ಣ




ದೊಡ್ಡಬಳ್ಳಾಪುರ: ಪೋಷಕ ನಟ ಬೆಮೆಲ್ ಸೋಮಣ್ಣ(77) ಅನಾರೋಗ್ಯದಿಂದ ನಿಧನರಾಗಿದ್ದಾರೆ.

ಮೃತರಿಗೆ ಒಬ್ಬ ಪುತ್ರ ಹಾಗೂ ನಾಲ್ವರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆ ನಗರದ ಮುಕ್ತಿಧಾಮದಲ್ಲಿ ಬುಧವಾರ ನಡೆಯಿತು.

'ದೇವತಾ ಮನುಷ್ಯ', 'ನಮ್ಮೂರ ರಾಜ' ಸೇರಿ 100ಕ್ಕೂ ಹೆಚ್ಚು ಚಿತ್ರಗಳಲ್ಲಿ ಪೋಷಕ ಪಾತ್ರ ನಿರ್ವಹಿಸಿದ್ದ ಸೋಮಣ್ಣ, ಚಿತ್ರ ನಿರ್ಮಾಣದ ವ್ಯವಸ್ಥಾಪಕರಾಗಿಯೂ ಕೆಲಸ ಮಾಡಿದ್ದರು. ಹಲವಾರು ನಾಟಕ, ಏಕಪಾತ್ರಾಭಿಯಗಳ ಪ್ರದರ್ಶನ ನೀಡುವ ಮೂಲಕ ಹೆಸರುವಾಸಿಯಾಗಿದ್ದರು.

ಜಿ.ಮಂಜುನಾಥ



ಬೆಂಗಳೂರು: ಮಹಾಲಕ್ಷ್ಮೀ ಬಡಾವಣೆಯ ನಿವಾಸಿ ಜಿ.ಮಂಜುನಾಥ್ (67) ಅನಾರೋಗ್ಯ ಸಮಸ್ಯೆಯಿಂದ ನಗರದ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

ಬೆಂಗಳೂರು ಉತ್ತರ ತಾಲ್ಲೂಕಿನ ತಮ್ಮೇನಹಳ್ಳಿಯ ಆಚಾರ್ಯ ಎಂಜಿನಿಯರಿಂಗ್ ಕಾಲೇಜು ಬಳಿ ಇರುವ ತೋಟದಲ್ಲಿ ಗುರುವಾರ ಮಧ್ಯಾಹ್ನ 1 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಪೂರ್ವ ಸಿದ್ಧತೆಯ ಆಯಾಮಗಳು


ಸಾಂದರ್ಭಿಕ ಚಿತ್ರ

ಚನ್ನಬಸಪ್ಪ ರೊಟ್ಟಿ


ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶ ಸಾಧಿಸಲು ಯೋಜಿತ ಪೂರ್ವಸಿದ್ಧತೆಯೇ ಮುನ್ನುಡಿ. ಸಿದ್ಧತೆ ಇಲ್ಲದೇ ಸ್ಪರ್ಧಾತ್ಮಕ ಪರೀಕ್ಷೆ ಬರೆಯುವುದೆಂದರೆ ಈಜು ಬಾರದವ ಸಮುದ್ರಕ್ಕೆ ಇಳಿದಂತೆ! ಹಾಗಾದರೆ, ಸ್ಪರ್ಧಾತ್ಮಕ ಪರೀಕ್ಷಾ ಸಿದ್ಧತೆಯ ಆಯಾಮಗಳೇನು?

- **ಸ್ಪರ್ಧಾತ್ಮಕ ಓದು ಯಾವಾಗಿನಿಂದ?:** ಕೆಲವು ಗ್ರೂಪ್ ಸಿ ಹುದ್ದೆಗಳನ್ನು ಹೊರತುಪಡಿಸಿ, ಬಹುತೇಕ ಹುದ್ದೆಗಳಿಗೆ ಪದವಿಯೇ ಕನಿಷ್ಠ ವಿದ್ಯಾರ್ಹತೆಯಾಗಿದೆ. ಈ ನಿಟ್ಟಿನಲ್ಲಿ ಪದವಿ ಓದುತ್ತಿರುವಾಗಲೇ ಕೆಲವರು ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿಯಲ್ಲಿ ತೊಡಗಿರುತ್ತಾರೆ. ಆದರೆ, ಕಾಲೇಜು ಓದುತ್ತಿರುವಾಗ ಸ್ಪರ್ಧಾತ್ಮಕ ಪರೀಕ್ಷೆ ತಯಾರಿ ಮಾಡಿಕೊಳ್ಳುವುದು ಸೂಕ್ತವಲ್ಲ. ಪದವಿ ಹಂತದ ಪಠ್ಯಕ್ರಮ ಸ್ಪರ್ಧಾತ್ಮಕ ಪರೀಕ್ಷೆಗೆ ಪೂರಕವಾಗಿರುತ್ತದೆ. ಅದಕ್ಕಾಗಿ ಪದವಿಯಲ್ಲಿ ನಿಗದಿಪಡಿಸಿದ ಪಠ್ಯಕ್ರಮಕ್ಕೆ ಆದ್ಯತೆ ನೀಡುವುದು ಒಳ್ಳೆಯದು.

> ಸ್ಪರ್ಧಾತ್ಮಕ ಪರೀಕ್ಷೆಗೆ ಓದಬೇಕು ಎಂಬ ನಿರ್ಧಾರ ಮಾಡಿದಾಗ ಅದಕ್ಕೆ ಕೆಲವು ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಇದು ಯಶಸ್ಸಿಗೆ ಮುನ್ನುಡಿ ಇದ್ದಂತೆ.

- **ಪದವಿ ನಂತರ ಸ್ನಾತಕೋತ್ತರ ಪದವಿ ಅಗತ್ಯವೇ?:** ನಿಮ್ಮ ಗುರಿ ಐಎಎಸ್, ಐಪಿಎಸ್ ಅಥವಾ ಕೆಎಎಸ್ ಅಧಿಕಾರಿ ಆಗಬೇಕು ಎಂದಾಗಿದ್ದರೆ, ನಿಮ್ಮ ಇಷ್ಟದ ಸ್ನಾತಕೋತ್ತರ ಪದವಿ ಪಡೆಯುವುದು ಉತ್ತಮ. ನಿಮಗೆ ಉದ್ಯೋಗ ಅನಿವಾರ್ಯ ಎಂದಾಗಿದ್ದರೆ ಪದವಿ ನಂತರ ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿ ಮಾಡಿಕೊಳ್ಳುವುದು ಒಳಿತು.
- **ಅಧ್ಯಯನ ಸಾಮಗ್ರಿ ಆಯ್ಕೆ ಹೇಗೆ?:** ಸ್ಪರ್ಧಾತ್ಮಕ ಪರೀಕ್ಷೆಯ ಓದಿಗೆ ಪುಸ್ತಕ, ಪತ್ರಿಕೆಗಳು ಹಾಗೂ ಆನ್‌ಲೈನ್ ಓದು ಅಗತ್ಯವಾಗಿವೆ. ಪುಸ್ತಕ, ಪತ್ರಿಕೆಗಳ ಖರೀದಿಗೂ ಮುನ್ನ- ಇತ್ತೀಚೆಗೆ ನಡೆದ ಪರೀಕ್ಷೆಗಳಲ್ಲಿ ಆ ಪುಸ್ತಕ, ಪತ್ರಿಕೆಗಳಿಂದ ಎಷ್ಟು ಪ್ರಶ್ನೆಗಳು ಬಂದಿವೆ ಎಂಬುದನ್ನು ಪರಿಶೀಲಿಸಿ, ನೀವು ಓದುವ ಆವೃತ್ತಿ ಪರಿಷ್ಕೃತ ಎಂಬುದನ್ನು ದೃಢೀಕರಿಸಿಕೊಳ್ಳಿ, ಅನ್ವಯಿಕ, ವಿಶ್ಲೇಷಣಾತ್ಮಕ ಪ್ರಶ್ನೆಗಳಿಗೆ ಅವು ಉತ್ತರ ಒದಗಿಸುತ್ತವೆಯೋ ಇಲ್ಲವೋ ಎಂದು ಖಚಿತಪಡಿಸಿಕೊಳ್ಳಿ. ಪುಸ್ತಕ ಅಂಗಡಿ ಮಾಲೀಕರು 'ಇದು ಉತ್ತಮ ಪುಸ್ತಕ' ಎಂದ ಕೂಡಲೇ ಕಣ್ಮುಚ್ಚಿ ಖರೀದಿಸದಿರಿ. ವೆಬ್ ರೆಫರೆನ್ಸ್‌ಗೂ ಮುನ್ನ ತಜ್ಞರ, ಸಾಧಕರ ಮಾರ್ಗದರ್ಶನ ಪಡೆಯಿರಿ.
- **ಏಕಕಾಲದಲ್ಲಿ ವಿವಿಧ ಹುದ್ದೆಗಳಿಗೆ ಅರ್ಜಿ ಕರೆದಾಗ ಏನು ಮಾಡಬೇಕು?:** ಎಫ್‌ಡಿಎ, ಪಿಎಸ್‌ಐ, ಟಿಇಟಿ, ಸಿಇಟಿ, ಸಿಟಿಇಟಿ, ಕೆಎಎಸ್, ಬ್ಯಾಂಕಿಂಗ್... ಹೀಗೆ ವಿವಿಧ ಪರೀಕ್ಷೆಗಳಿಗೆ ಏಕಕಾಲಕ್ಕೆ ಅರ್ಜಿ ಕರೆದಿದ್ದರೆ, ನಿಮ್ಮ ತಯಾರಿ, ಸಾಮರ್ಥ್ಯಕ್ಕೆ ಅನುಗುಣವಾಗಿ ಯಾವ ಪರೀಕ್ಷೆ ಎದುರಿಸಬೇಕು ಎಂಬ ನಿರ್ಧಾರ ಕೈಗೊಳ್ಳಬೇಕು. ಉದಾಹರಣೆಗೆ: ನೀವು ಬಿಇಡಿ ಪಾಸಾಗಿದ್ದರೆ ಟಿಇಟಿ, ಸಿಇಟಿ, ಸಿಟಿಇಟಿಗೆ ಆದ್ಯತೆ ನೀಡಬೇಕು, ದೈಹಿಕ ಕ್ಷಮತೆ ಹೊಂದಿದ್ದರೆ ಪಿಎಸ್‌ಐ ಪರೀಕ್ಷೆಗೆ ಒತ್ತು ಕೊಡಬೇಕು, ಮೊದಲ ಬಾರಿ ಕೆಎಎಸ್‌ಗೆ ಸಿದ್ಧರಾಗುತ್ತಿದ್ದರೆ ಎಫ್‌ಡಿಎ ಪರೀಕ್ಷೆ ಎದುರಿಸುವುದು ಒಳಿತು.
- **ಪಠ್ಯಕ್ರಮಕ್ಕೆ ಅನುಗುಣವಾಗಿ ಓದಿ:** ನಿಮ್ಮ ಓದು ಪಠ್ಯಕ್ರಮವೆಂಬ ಪಥದ ಮೇಲೆಯೇ ಸಾಗಬೇಕು. ಉದಾಹರಣೆಗೆ: ಪ್ರಚಲಿತ ವಿದ್ಯಮಾನ ಹಾಗೂ ಸಾಮಾನ್ಯ ಅಧ್ಯಯನಕ್ಕೆ ಸಂಬಂಧಿಸಿ ಇತಿಹಾಸ, ಭೂಗೋಳ, ವಿಜ್ಞಾನ-ತಂತ್ರಜ್ಞಾನ, ಬೇಸಿಕ್ ಕಂಪ್ಯೂಟರ್, ಸಂವಿಧಾನ ಮತ್ತು ರಾಜಕೀಯ, ಅರ್ಥಶಾಸ್ತ್ರ, ಕಲೆ- ಸಾಹಿತ್ಯ- ಸಂಗೀತ ಸಾಧಕರ ವಿಶೇಷತೆ, ಸ್ಥಳ ವಿಶೇಷತೆ, ಆವಿಷ್ಕಾರಗಳ ಸಾಂಪ್ರದಾಯಿಕ ಹಾಗೂ ಸಮಕಾಲೀನ ವಿದ್ಯಮಾನಗಳನ್ನು ಅರಿತುಕೊಳ್ಳಬೇಕು.
- **ಅಗತ್ಯ ದಾಖಲೆ ಪತ್ರಗಳನ್ನು ಹೊಂದಿರಬೇಕು:** ಆಯಾ ಪರೀಕ್ಷೆಗೆ ಸಂಬಂಧಪಟ್ಟಂತೆ ಅಗತ್ಯವಾದ ಎಲ್ಲ ದಾಖಲೆ ಪತ್ರಗಳನ್ನು ಅರ್ಜಿ ಹಾಕುವ ಕೊನೆಯ ದಿನಾಂಕದೊಳಗೆ ಹೊಂದಿರಲೇಬೇಕು. ಅರ್ಜಿ ಹಾಕಿದ ನಂತರದ ದಿನಾಂಕದ ದಾಖಲೆ ಪತ್ರಗಳು ಅಸಿಂಧುವಾಗುತ್ತವೆ.
- **ಕೆಲಸ ಮಾಡುವುದು ಅನಿವಾರ್ಯವಾಗಿದ್ದರೆ.. :** ಪದವಿ ನಂತರ ಸೂಕ್ತ ತರಬೇತಿ ಪಡೆದು ಸ್ಪರ್ಧಾತ್ಮಕ ಪರೀಕ್ಷೆ ತಯಾರಿ ಆರಂಭಿಸುವುದು ಒಳ್ಳೆಯದು. ಆದರೆ, ಕೆಲಸ ಮಾಡಲೇಬೇಕಾದ ಅನಿವಾರ್ಯತೆ ಇದ್ದರೆ, ಅರೆಕಾಲಿಕ ಉದ್ಯೋಗ ಮಾಡುತ್ತ ಅಧ್ಯಯನ ಮುಂದುವರಿಸಬಹುದು. ಇಲ್ಲಿ ಓದು ಮೊದಲ ಆದ್ಯತೆ ಆಗಿರಬೇಕು.

(ಲೇಖಕರು: ನಿರ್ದೇಶಕರು, ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)



ಸ್ಪರ್ಧಾತ್ಮಕ ಪರೀಕ್ಷೆಗೆ ಟಿಪ್ಪಣಿ ಎಂಬ 'ಸೂಪರ್ ಚಾರ್ಜರ್'

ಆರ್.ಬಿ. ಗುರುಬಸವರಾಜ

ಓದಿದ್ದನ್ನು ನೆನಪಿಟ್ಟುಕೊಳ್ಳುವುದು ಹೇಗೆ ಎಂಬುದು ಬಹುತೇಕ ಸ್ಪರ್ಧಾರ್ಥಿಗಳ ಪ್ರಶ್ನೆ. ಇತ್ತೀಚೆಗೆ ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳ ಬಳಕೆಯಿಂದಾಗಿ ಗಮನ ಕೇಂದ್ರೀಕರಿಸಿ ಓದುವ, ಓದಿದ್ದನ್ನು ಉಳಿಸಿಕೊಳ್ಳುವ ಮತ್ತು ಸಕಾಲದಲ್ಲಿ ಅದನ್ನು ಬಳಸುವ ಬಗ್ಗೆ ಸಾಕಷ್ಟು ತೊಂದರೆಗಳಾಗುತ್ತಿವೆ. ಇಂತಹ ಸಮಸ್ಯೆಗಳಿಗೆ ಸೂಕ್ತ ಮಾರ್ಗವೆಂದರೆ ಓದಿನ ಜೊತೆಗೆ ಟಿಪ್ಪಣಿ ಬರೆದಿಟ್ಟುಕೊಳ್ಳುವುದು.

ಟಿಪ್ಪಣಿ ಬರಹವು 'ಸೂಪರ್ ಚಾರ್ಜರ್' ಇದ್ದಂತೆ. ಓದಿದ್ದನ್ನು ವೇಗವಾಗಿ ನೆನಪಿಡಲು ಮತ್ತು ಸಕಾಲದಲ್ಲಿ ಅದನ್ನು ಬಳಸಲು ಇದು ತುಂಬಾ ಪ್ರಭಾವಿ ತಂತ್ರಗಾರಿಕೆ.

ಟಿಪ್ಪಣಿ ತೆಗೆದುಕೊಳ್ಳುವುದಕ್ಕಿಂತ ಮೊದಲು ಅದರ ಉದ್ದೇಶವನ್ನು ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ ಸ್ಪರ್ಧಾತ್ಮಕ ಪರೀಕ್ಷಾ ಅಧ್ಯಯನದ ಟಿಪ್ಪಣಿಯು ಸಂಶೋಧನಾ ಅಧ್ಯಯನದ ಟಿಪ್ಪಣಿಗಿಂತ ಭಿನ್ನವಾಗಿರುತ್ತದೆ. ಹಾಗೆಯೇ ಟಿಪ್ಪಣಿ ತೆಗೆದುಕೊಳ್ಳುವ ವಿಧಾನವು ಕೂಡ ಬೇರೆ ಬೇರೆಯಾಗಿರುತ್ತದೆ. ಟಿಪ್ಪಣಿ ಮಾಡಿಕೊಳ್ಳಲು ಎಲ್ಲರಿಗೂ ಸರಿಹೊಂದುವ ಯಾವುದೇ ತಂತ್ರಗಳಿಲ್ಲ. ನೀವು ಸ್ವಲ್ಪ ಪ್ರಯತ್ನ- ಪ್ರಮಾದ (ಟ್ರಯಲ್ ಅಂಡ್ ಎರರ್) ವಿಧಾನಗಳಿಂದ ನಿಮ್ಮದೇ ಆದ ತಂತ್ರಗಾರಿಕೆಯನ್ನು ರೂಪಿಸಿಕೊಳ್ಳುವುದು ಅಗತ್ಯ. ಯಾವ ವಿಧಾನದಿಂದ ನಿಮಗೆ ಅನುಕೂಲವಾಗುತ್ತದೆ ಎಂಬುದು ಮುಖ್ಯ.

- ಮೊದಲ ಹಂತದಲ್ಲಿ ಓದಲು ಕೈಗೆತ್ತಿಕೊಂಡ ಪುಸ್ತಕವು ನೀವು ಪಡೆಯಲು ಬಯಸಿದ ಮಾಹಿತಿಯನ್ನು ಒಳಗೊಂಡಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಿ. ಅದಕ್ಕಾಗಿ ಪುಸ್ತಕದ ಮುನ್ನುಡಿ, ವಿಷಯಗಳ ಪಟ್ಟಿ ಮತ್ತು ಕವರ್ ಪೇಜ್‌ಗಳನ್ನು ಗಮನಿಸಿ. ಸಾಧ್ಯವಾದರೆ ಸುಮ್ಮನೆ ಒಂದೆರಡು ಒಳಪುಟಗಳನ್ನು ತಿರುವಿಹಾಕಿ. ನೀವು ಪಡೆಯಬಯಸಿದ ಮಾಹಿತಿ ಒಳಗೊಂಡಿದ್ದರೆ ಪುಸ್ತಕವನ್ನು ವಿವರವಾಗಿ ಓದಿ, ಇಲ್ಲದಿದ್ದರೆ ಪಕ್ಕಕ್ಕಿಡಿ.
- ಎರಡನೇ ಹಂತದಲ್ಲಿ ಪಾರಿಭಾಷಿಕ ಪದಗಳತ್ತ ಗಮನ ಹರಿಸಿ ಅರ್ಥೈಸಿಕೊಳ್ಳಿ. ಓದುವ ವೇಳೆ ಪ್ರತಿ ಪ್ಯಾರಾದೊಂದಿಗೆ, ಸಂವಾದ ಚರ್ಚೆ ನಡೆಸಿ. ನೀವೇ ಪ್ರಶ್ನೆಗಳನ್ನು ರೂಪಿಸಿಕೊಂಡು ಉತ್ತರಗಳನ್ನು ಟಿಪ್ಪಣಿ ರೂಪದಲ್ಲಿ ಬರೆದಿಟ್ಟುಕೊಳ್ಳಿ.
- ಮೂರನೇ ಹಂತದಲ್ಲಿ ಪ್ರತಿ ಅಧ್ಯಾಯ ಓದಿದ ನಂತರ ಸಾರಾಂಶವನ್ನು ನಿಮ್ಮದೇ ಆದ ಶೈಲಿಯಲ್ಲಿ ಬುಲೆಟ್ ಪಾಯಿಂಟ್‌ಗಳಲ್ಲಿ ಬರೆದುಕೊಳ್ಳಿ. ನಂತರ ನೀವು ಬರೆದುಕೊಂಡ ಪ್ರಶ್ನೆಗಳನ್ನು ಗಮನಿಸಿ ಅವುಗಳಿಗೆ ಉತ್ತರ ಕಂಡುಕೊಳ್ಳಿ. ಉತ್ತರ ಕಂಡುಕೊಳ್ಳಲಾಗದ ಪ್ರಶ್ನೆಗಳನ್ನು ಬರೆದಿಟ್ಟುಕೊಳ್ಳಿ. ನಾಲ್ಕಾರು ದಿನಗಳು ಕಳೆದ ನಂತರ ಆ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಿ. ಆಗಲೂ ಉತ್ತರ ದೊರೆಯದಿದ್ದರೆ ಸಂಬಂಧಿಸಿದ ವಿಷಯತಜ್ಞರಿಂದ ಉತ್ತರ ಪಡೆಯಿರಿ.

ನಾಲ್ಕಾರು ದಿನಗಳು ಕಳೆದ ನಂತರ ಇನ್ನೊಮ್ಮೆ ಅದೇ ಘಟಕ ಅಥವಾ ಅಧ್ಯಾಯದ ಮೇಲೆ ಪಕ್ಷಿನೋಟ ಹರಿಸಿ. ಇನ್ನೂ ಯಾವುದಾದರೂ ಪ್ರಮುಖಾಂಶಗಳನ್ನು ಟಿಪ್ಪಣಿ ಮಾಡಿಕೊಳ್ಳಬೇಕು ಎನಿಸಿದರೆ ಟಿಪ್ಪಣಿ ಮಾಡಿಕೊಳ್ಳಿ. ಹೀಗೆ ಮಾಡುವುದರಿಂದ ಓದಿನ ಪ್ರಕ್ರಿಯೆಗೆ ಜ್ಞಾನವನ್ನು ಅನ್ವಯಿಸುವ ಪ್ರಕ್ರಿಯೆ ಮುಂದುವರೆಯುತ್ತದೆ. ಆಗ ಪುಸ್ತಕದ ಮೇಲಿನ ನಿಮ್ಮ ಅವಲಂಬನೆ ಕಡಿಮೆಯಾಗುತ್ತದೆ. ಜೊತೆಗೆ ಪರಿಕಲ್ಪನೆಯಾಧಾರಿತ ಇನ್ನಿತರೇ ಓದಿನ ಲಿಂಕ್‌ಗಳಿಗೆ ನಮ್ಮನ್ನು ಕರೆದೊಯ್ಯುತ್ತದೆ.

ಟಿಪ್ಪಣಿಯ ಅಂಶಗಳನ್ನು ನಿಮ್ಮ ಸ್ನೇಹಿತರು ಅಥವಾ ಮಾರ್ಗದರ್ಶಕರೊಂದಿಗೆ ಹಂಚಿಕೊಳ್ಳಿ. ಸೂಕ್ತ ಸಲಹೆಗಳಿದ್ದರೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಂಡು ಮುಂದುವರಿಯಿರಿ. ಟಿಪ್ಪಣಿಯು ಸರಳ, ನಿಖರ ಹಾಗೂ ನೇರವಾಗಿರಲಿ. ಗೊಂದಲಗಳಿಗೆ ಅವಕಾಶ ಇರಬಾರದು.

ಪುಸ್ತಕದಲ್ಲಿನ ಎಲ್ಲಾ ಅಂಶಗಳು ಮತ್ತು ಮಾಹಿತಿಗಳು ನಿಮಗೆ ಉಪಯುಕ್ತವೇ ಆಗಿವೆ. ಆದರೆ ಎಲ್ಲಾ ಅಂಶಗಳನ್ನು ನೆನಪಿಟ್ಟುಕೊಳ್ಳಲಾಗದು. ಪರೀಕ್ಷಾ ದೃಷ್ಟಿಯಿಂದ ಕೆಲವು ಅಂಶಗಳು ಮಾತ್ರ ಪ್ರಮುಖ ಎನಿಸಬಹುದು. ಪ್ರಮುಖಾಂಶಗಳನ್ನು ಪುಟ ಸಂಖ್ಯೆಯ ಸಮೇತವಾಗಿ ಬರೆದಿಟ್ಟುಕೊಂಡರೆ ವಿಸ್ತೃತ ಓದಿಗೆ ಸಹಾಯವಾಗುತ್ತದೆ.

ಆಯ್ದ ಭಾಗಗಳನ್ನು ಕೈಯಿಂದ ನೋಟ್ ಮಾಡಿಟ್ಟುಕೊಳ್ಳಿ. ಟಿಪ್ಪಣಿಯನ್ನು ಆದಷ್ಟೂ ಕೈಯಿಂದಲೇ ಬರೆದಿಟ್ಟುಕೊಳ್ಳುವುದು ಉತ್ತಮ. ಇದು ನಿಮ್ಮ ಬರವಣಿಗೆಯ ಶೈಲಿ ಮತ್ತು ಮಟ್ಟವನ್ನು ಸುಧಾರಿಸುತ್ತದೆ. ಟಿಪ್ಪಣಿಯನ್ನು ಪರಿಕಲ್ಪನಾತ್ಮಕ ನಕ್ಷೆಯ(ಮೈಂಡ್ ಮ್ಯಾಪ್) ರೂಪದಲ್ಲಿಯೂ ಬರೆದಿಟ್ಟುಕೊಳ್ಳಬಹುದು. ಟಿಪ್ಪಣಿಯು ಓದಿನ ವೈಯಕ್ತಿಕ ದಾಖಲೆಯಾದ್ದರಿಂದ ವ್ಯಕ್ತಿಗತವಾಗಿ ಭಿನ್ನವಾಗಿರುತ್ತದೆ. ಇದರಲ್ಲಿ ನಿಮ್ಮ ಐಡೆಂಟಿಟಿಯೂ ಇರಲಿದೆ. ಇದು ಓದಿನ ದಾಖಲಾತ್ಮಕ ತಂತ್ರಗಾರಿಕೆಯಾದ್ದರಿಂದ ನೆನಪಿನ ಸೂಪರ್ ಚಾರ್ಜರ್ ಆಗಿದೆ.

ಪ್ರಜಾವಾಣಿ ಉದ್ಯೋಗ ವಾರ್ತೆ

ಬಿಎಂಆರ್‌ಸಿಎಲ್‌ನಲ್ಲಿ 6 ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು ಮೆಟ್ರೊ ರೈಲ್ ಕಾರ್ಪೊರೇಷನ್ ಲಿಮಿಟೆಡ್ (ಬಿಎಂಆರ್‌ಸಿಎಲ್)ನಲ್ಲಿ 6 ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

ಹುದ್ದೆಗಳು: ಚೀಫ್ ಎಂಜಿನಿಯರ್, ಚೀಫ್ ಎಲೆಕ್ಟ್ರಿಕಲ್ ಎಂಜಿನಿಯರ್, ಜನರಲ್ ಮ್ಯಾನೇಜರ್ ಹಾಗೂ ಡೆಪ್ಯೂಟಿ ಜನರಲ್ ಮ್ಯಾನೇಜರ್

ಹುದ್ದೆಗಳ ಸಂಖ್ಯೆ: 6, **ಸ್ಥಳ:** ಬೆಂಗಳೂರು

ವಿದ್ಯಾರ್ಹತೆ: ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿ.ಇ, ಬಿ.ಟೆಕ್ ಪದವಿ ಪಡೆದಿರಬೇಕು.

ವಯೋಮಿತಿ: ಚೀಫ್ ಎಂಜಿನಿಯರ್ ಹಾಗೂ ಜನರಲ್ ಮ್ಯಾನೇಜರ್- ಗರಿಷ್ಠ 50 ವರ್ಷ, ಡೆಪ್ಯೂಟಿ ಜನರಲ್ ಮ್ಯಾನೇಜರ್- ಗರಿಷ್ಠ 45

ಆಯ್ಕೆ ಪ್ರಕ್ರಿಯೆ: ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ

ಅರ್ಜಿ ಸಲ್ಲಿಕೆ ವಿಧಾನ: ಆಸಕ್ತ ಅಭ್ಯರ್ಥಿಗಳು ಸಂಬಂಧಪಟ್ಟ ದಾಖಲೆಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು.

ವಿಳಾಸ: ಜನರಲ್ ಮ್ಯಾನೇಜರ್ (ಎಚ್‌ಆರ್ ಅಂಡ್ ಟ್ಯಾಕ್ಸೇಷನ್), ಬೆಂಗಳೂರು ಮೆಟ್ರೊ ರೈಲ್ ಕಾರ್ಪೊರೇಷನ್ ಲಿಮಿಟೆಡ್, 3ನೇ ಮಹಡಿ, ಬಿಎಂಟಿಸಿ ಕಾಂಪ್ಲೆಕ್ಸ್, ಕೆ.ಎಸ್. ರೋಡ್, ಶಾಂತಿನಗರ, ಬೆಂಗಳೂರು – 560027

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮಾರ್ಚ್ 22, 2021

ಹೆಚ್ಚಿನ ಮಾಹಿತಿಗೆ: https://english.bmrc.co.in/FileUploads/1720bd_CareerFiles.pdf

ಗ್ಯಾಸ್ ಅಥಾರಿಟಿ ಆಫ್ ಇಂಡಿಯಾದಲ್ಲಿ ಎಕ್ಸಿಕ್ಯೂಟಿವ್ ಹುದ್ದೆಗಳು

ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್(ಜಿಎಐಎಲ್) ನಲ್ಲಿ ಖಾಲಿ ಇರುವ ಎಕ್ಸಿಕ್ಯೂಟಿವ್ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಹುದ್ದೆ: ಎಕ್ಸಿಕ್ಯೂಟಿವ್ ಟ್ರೈನಿ

ಹುದ್ದೆಗಳು ಸಂಖ್ಯೆ: 25, **ಸ್ಥಳ:** ಭಾರತದೆಲ್ಲೆಡೆ

ವಿದ್ಯಾರ್ಹತೆ: ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಎಂಜಿನಿಯರಿಂಗ್ ಪದವಿ ಪಡೆದಿರಬೇಕು. **ವಯೋಮಿತಿ:** ಗರಿಷ್ಠ 26 ವರ್ಷ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮಾರ್ಚ್ 16, 2021

ಹೆಚ್ಚಿನ ಮಾಹಿತಿಗೆ: https://gailonline.com/CR-ApplyingGail.html

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

Dr. B.R.Ambedkar by Sri R. Venkataraman

ಇಂಗ್ಲಿಷ್ · ಎಸ್ಸೆಸ್ಸೆಲ್ಸಿ

UNIT – 04


Dr. B.R.Ambedkar

Dr.B.R.Ambedkar, this lesson was written by out eighth President of India Sri R. Venkataraman. This lesson revolves around Ambedkar's accomplishments. Dr.B.R.Ambedkar is termed as the father of the Constitution of India. Though he hailed from a socially backward caste, he rose to unparalleled height. Throughout his life Dr. Ambedkar was a voracious reader. He had an insatiable thirst for books. He bought books by curtailing his daily needs. In New York he purchased about 2000 books and that they had to be sent to India in 32 boxes. While in USA, Ambedkar was drawn to the 14th amendment of the constitution of the USA, which gave freedom to Black Americans. He was at once the parallel of the situation for the depressed classes in India.

On returning to India he was greatly influenced by the life and work of Mahatma Phule, the votary of a classless society and women's upliftment. This made him to devote all his time and talents for the betterment of his underprivileged brethren. Ambedkar started newspapers such as Mooknayak, Bahishkrit Bharat and Samata, These newspapers became the voices of the depressed classes. Likewise, institutions were set up by him such as the Hitakarini Sabha and the Independent Labour Party of India became vehicles of change. He was elected to the Bombay Legislative Assembly in the election under the constitution of India Act, 1935. Babasaheb was not in the Congress, but it must be said to the credit of the farsighted and objective leadership of the Indian National Congress that it requested Dr.Ambedkar to serve on the drafting committee of the Constituent Assembly and made him its Chairman. He was tactful, frank and had utmost patience. He explained clearly the meaning and scope of the different provisions of the Draft constitution. He explained the most complicated legal concepts which could be easily understood even by a layman. (common person)

Dr Ambedkar had a clear idea about maturity of the legislature, the Executive and the Judiciary. He said that the jurisdiction of each should be clear and untrammeled. He had a sense of the importance of the sole of citizen. He said that the Constitution is a fundamental document which defines the position and power of the three organs of the state – the executive, the judiciary and the legislature as against the citizens. The other purpose of constitution to limit their authority to avoid tyranny and oppression by the legislature and the Executive.

Ambedkar had a great skill in law and legislation. He had the vision of social justice. Therefore, Nehru chose him to be the first Law Minister of India. According to him, methods of civil disobedience, non-cooperation and Satyagraha are necessary in a state which is ruled by foreigners. But in a democratic country, these methods should not be used. If used there would be loss of lives and public property. Gandhiji reminded the higher castes their duty towards the depressed classes. Babasaheb Ambedkar did the same by reminding them of their inherent rights to equality with the higher and more powerful castes. One stressed the duties, the other stressed the rights. Finally, the Architect of Our constitution said that "I like the religion that teaches LIBERTY, EQUALITY and FRETERNITY".


ಪ್ರಜಾವಾಣಿ ನೋಡಿಯೊ — ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮದ ರಸಾಯನಶಾಸ್ತ್ರ ವಿಭಾಗದ 'ಮಾಡರ್ನ್ ಪೀರಿಯಾಡಿಕ್ ಟೇಬಲ್ ಅಂಡ್ ಪೀರಿಯಾಡಿಕ್ ಟ್ರೆಂಡ್ಸ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://bit.ly/3kDIikW


ಅಂತಸ್ಥ ಅರೆವಾಹಕಗಳು


ಭೌತಶಾಸ್ತ್ರ · ದ್ವಿತೀಯ ಪಿಯುಸಿ

ಅಂತಸ್ಥ ಅರೆ ವಾಹಕಗಳು ರಾಸಾಯನಿಕವಾಗಿ ಅತಿ ಶುದ್ಧ ವಸ್ತುಗಳಾಗಿದ್ದು ಕಡಿಮೆ ವಾಹಕತೆಯನ್ನು ಹೊಂದಿವೆ.

ಉದಾ: ಸಿಲಿಕಾನ್, ಜರ್ಮೇನಿಯಂ ಇವು ಸಂಪೂರ್ಣ ಶೂನ್ಯ ತಾಪದಲ್ಲಿ ನಿರೋಧಕವಾಗಿ ವರ್ತಿಸುತ್ತವೆ. ಅರೆವಾಹಕದ ಸಿಲಿಕಾನ್ ಅಥವಾ ಜರ್ಮೇನಿಯಂ ತೆಗೆದುಕೊಂಡಾಗ ಅವು ನಾಲ್ಕು ವೇಲೆನ್ಸ್ ಎಲೆಕ್ಟ್ರಾನ್‌ಗಳಿರುವ ಪ್ರತಿ ಪರಮಾಣುವು ಅಕ್ಕಪಕ್ಕದ ನಾಲ್ಕು ಪರಮಾಣುಗಳೊಂದಿಗೆ ನಾಲ್ಕು ವೇಲೆನ್ಸ್ ಎಲೆಕ್ಟ್ರಾನ್‌ಗಳನ್ನು ಹಂಚಿಕೊಂಡು ಸೇರ್ಪಡೆಯಾಗಿರುತ್ತದೆ. ಇವು ಕೋವೆಲೆಂಟ್ ಬಂಧ ಅಥವಾ ವೇಲೆನ್ಸ್ ಬಂಧವನ್ನು ನಿರ್ಮಿಸುತ್ತದೆ.







ಉಷ್ಣತೆಯು ಹೆಚ್ಚಾದಂತೆ ಎಲೆಕ್ಟ್ರಾನ್‌ಗಳ ಬಂಧವನ್ನು ಮುರಿದುಕೊಂಡು ವೇಲೆನ್ಸ್ ಪಟ್ಟಿಯಿಂದ ವಾಹಕಪಟ್ಟಿಗೆ ದಾಟುತ್ತವೆ. ಹೀಗೆ ದಾಟುವಾಗ ಧನ ವಿದ್ಯುದಾವೇಶವುಳ್ಳ ಖಾಲಿ ರಂಧ್ರವನ್ನು ಉಳಿಸುತ್ತವೆ. ಈ ರಂಧ್ರಗಳು ಮತ್ತು ಎಲೆಕ್ಟ್ರಾನ್‌ಗಳು ಸ್ಥಿರವಾದ ಜಾಗದಲ್ಲಿರದೆ ವಸ್ತುವಿನ ವಾಹಕತೆಗೆ ಕಾರಣೀಕರ್ತವಾಗುತ್ತವೆ.

ಅಂತಸ್ಥ ಅರೆವಾಹಕಗಳಲ್ಲಿ ಸ್ವತಂತ್ರ ಎಲೆಕ್ಟ್ರಾನ್‌ಗಳ ಸಂಖ್ಯೆ ರಂಧ್ರಗಳ ಸಂಖ್ಯೆ n_e ಗಳಿಗೆ n_h ಸಮನಾಗಿರುತ್ತವೆ.

$n_e = n_h = n_i$ ಇಲ್ಲಿ n_i ಅಂತಸ್ಥ ಆವೇಶಗಳ ಸಂಖ್ಯೆಯಾಗಿದೆ.

ಇಲ್ಲಿ I_h ರಂಧ್ರಗಳ ಚಲನೆಯಿಂದಾದ ವಿದ್ಯುತ್ ಪ್ರವಾಹ ಮತ್ತು I_e ಎಲೆಕ್ಟ್ರಾನ್‌ಗಳ ಚಲನೆಯಿಂದಾದ ವಿದ್ಯುತ್ ಪ್ರವಾಹವಾದರೆ ಒಟ್ಟು ವಿದ್ಯುತ್ ಪ್ರವಾಹವು $I = I_e + I_h$

ಅಂತಸ್ಥ ಅರೆ ವಾಹಕವು ಶೂನ್ಯ ತಾಪ ಅಂದರೆ T = 0 K ನಲ್ಲಿ ನಿರೋಧಕಗಳಾಗಿ ವರ್ತಿಸುತ್ತವೆ ಮತ್ತು ತಾಪವನ್ನು ಹೆಚ್ಚಿಸಿದಾಗ ಎಲೆಕ್ಟ್ರಾನ್‌ಗಳು ವಾಹಕಪಟ್ಟಿಗೆ ದಾಟುವುದರ ಮೂಲಕ ವಾಹಕತೆಯನ್ನು ಹೆಚ್ಚಿಸುತ್ತವೆ. ಇಲ್ಲಿ ವಾಹಕತೆಯ ತಾಪಕ್ಕೆ ನೇರ ಅನುಪಾತವಾಗಿರುತ್ತದೆ.


ಬಾಹ್ಯಸ್ಥ ಅರೆವಾಹಕಗಳು

ಸ್ವಲ್ಪ ಪ್ರಮಾಣದ ಸೂಕ್ತವಾದ ಅಶುದ್ಧತೆಯನ್ನು ಅಂದರೆ ಒಂದು ಮಿಲಿಯನ್‌ನಲ್ಲಿ ಕೆಲವೇ ಕೆಲವು ಭಾಗ ಶುದ್ಧವಾದ ಅರೆವಾಹಕಕ್ಕೆ ಮಿಶ್ರಣ ಮಾಡುವುದರಿಂದ ಅವುಗಳ ವಾಹಕತೆಯನ್ನು ಹೆಚ್ಚಿಸಬಹುದು. ಇಂತಹ ಅರೆವಾಹಕಗಳನ್ನು ಬಾಹ್ಯಸ್ಥ ಅರೆವಾಹಕಗಳು ಎನ್ನುವರು.

ಅಶುದ್ಧ ಪದಾರ್ಥವನ್ನು ಅಂತಸ್ಥ ಅರೆವಾಹಕಕ್ಕೆ ಮಿಶ್ರಣಗೊಳಿಸುವುದನ್ನು ಡೋಪಿಂಗ್ ಎಂತಲೂ ಮಿಶ್ರಗೊಳಿಸಿದ ಅಶುದ್ಧ ಪರಮಾಣುವನ್ನು ಡೋಪೆಂಟ್ಸ್ ಎಂತಲೂ ಕರೆಯುತ್ತಾರೆ.

n- ಬಗೆಯ ಅರೆವಾಹಕ

ಪಂಚವೇಲೆಂಟ್ ಮೂಲಧಾತುವಾದ As, Sb ಅಥವಾ P ಗಳನ್ನು ಟೆಟ್ರಾವೇಲೆಂಟ್ ಅರೆವಾಹಕಗಳಾದ Si ಅಥವಾ Ge ಗೆ ಮಿಶ್ರಣಗೊಳಿಸಿದಾಗ, + 5 ವೇಲೆನ್ಸಿಯಿರುವ ಮೂಲಧಾತುವಿನ ಪರಮಾಣುವೊಂದು Si ಹರಳಿನ ಜಾಲಕದಲ್ಲಿರುವ ಪರಮಾಣುವಿನ ಜಾಗವೊಂದನ್ನು ಆಕ್ರಮಿಸಿಕೊಳ್ಳುತ್ತದೆ.




ಹೀಗೆ ಆಕ್ರಮಿಸಿಕೊಂಡಾಗ ತನ್ನಲ್ಲಿರುವ ಐದು ಎಲೆಕ್ಟ್ರಾನ್‌ಗಳ ಪೈಕಿ ನಾಲ್ಕು ಎಲೆಕ್ಟ್ರಾನ್‌ಗಳನ್ನು ತನ್ನ ಸುತ್ತುವರೆದಿರುವ ನಾಲ್ಕು ಸಿಲಿಕಾನ್ ಪರಮಾಣುಗಳೊಂದಿಗೆ ಬಂಧ ರಚನೆಯಲ್ಲಿ ಹಂಚಿಕೊಳ್ಳುತ್ತದೆ. ಉಳಿದ ಐದನೇ ಎಲೆಕ್ಟ್ರಾನ್ ಮೂಲ ಪರಮಾಣುವಿನೊಂದಿಗೆ ದುರ್ಬಲವಾಗಿ ಅಂಟಿಕೊಳ್ಳುತ್ತದೆ. ಈ ದುರ್ಬಲ ಬಂಧಿತ ಎಲೆಕ್ಟ್ರಾನ್ ಅನ್ನು ಬಂಧದಿಂದ ವಿಮುಕ್ತಿಗೊಳಿಸಲು ಕಡಿಮೆ ಶಕ್ತಿ ಸಾಕಾಗಿದ್ದು ಕೊಠಡಿ ಉಷ್ಣತೆಯಲ್ಲಿ ಎಲೆಕ್ಟ್ರಾನ್ ಸ್ವತಂತ್ರವಾಗಿ ಚಲಿಸಬಲ್ಲದು.

ಸಿಲಿಕಾನ್ ಬಾಹ್ಯಸ್ಥ ಅರೆವಾಹಕದಲ್ಲಿ ಎಲೆಕ್ಟ್ರಾನ್ ಅನ್ನು ಬೇರ್ಪಡಿಸಲು 0.01 eV ಮತ್ತು ಜರ್ಮೇನಿಯಂ ಬಾಹ್ಯಸ್ಥ ಅರೆವಾಹಕದಲ್ಲಿ ಎಲೆಕ್ಟ್ರಾನ್ ಅನ್ನು ಬೇರ್ಪಡಿಸಲು 0.05 eV ಸಾಕಾಗುತ್ತದೆ. ಇದರಿಂದ ವಾಹಕತೆಯು ಕೊಠಡಿ ತಾಪದಲ್ಲಿ ಶುದ್ಧ ವಾಹಕಕ್ಕಿಂತ ಹೆಚ್ಚಾಗಿರುತ್ತದೆ.

n - ಬಗೆಯ ಅರೆವಾಹಕದಲ್ಲಿ $n_e >> n_n$

p - ಬಗೆಯ ಅರೆವಾಹಕ

ತ್ರಿವೇಲೆಂಟ್ ಅಶುದ್ಧತೆಗಳಾದ AI, B ಅಥವಾ I_n ಮುಂತಾದವುಗಳನ್ನು ಟೆಟ್ರಾವೇಲೆಂಟ್ ಅರೆವಾಹಕಗಳಾದ Si ಅಥವಾ Ge ನೊಂದಿಗೆ ಡೋಪ್ ಮಾಡಿದಾಗ p - ಬಗೆಯ ಅರೆವಾಹಕಗಳನ್ನು ಪಡೆಯಬಹುದು. ಹೀಗೆ ಡೋಪ್ ಮಾಡುವಾಗ ಡೊಪೆಂಟ್ ಪರಮಾಣು ತನ್ನ ಸುತ್ತುವರೆದಿರುವ ನಾಲ್ಕು Si ಪರಮಾಣುಗಳ ಪೈಕಿ ಮೂರು ಪರಮಾಣುಗಳೊಂದಿಗೆ ಕೊವೇಲೆಂಟ್ ಬಂಧ ರಚಿಸಿ ನಾಲ್ಕೇ Si ಪರಮಾಣು ಮತ್ತು ಡೋಪೆಂಟ್ ಪರಮಾಣುಗಳ ನಡುವೆ ಇರುವ ಬಂಧದಲ್ಲಿ ರಂಧ್ರವನ್ನು ಉಂಟು ಮಾಡುತ್ತವೆ. ಈ ರಂಧ್ರವು ಧನಾವೇಶವನ್ನು ಹೊಂದಿದ್ದು ಆ ಜಾಗವನ್ನು ತುಂಬಲು ಅಕ್ಕಪಕ್ಕದಲ್ಲಿನ ಪರಮಾಣುವಿನ ಹೊರ ಕವಚದ ಎಲೆಕ್ಟ್ರಾನ್‌ಗಳು ನೆಗೆಯುತ್ತವೆ. ನೆಗೆದ ಎಲೆಕ್ಟ್ರಾನ್ ಜಾಗದಲ್ಲಿ ಉಂಟಾದ ರಂಧ್ರವನ್ನು ತುಂಬಲು ಇನ್ನೊಂದು ಪರಮಾಣುವಿನ ಎಲೆಕ್ಟ್ರಾನ್ ನೆಗೆಯುತ್ತದೆ.



ಈ ಪ್ರಕಾರವಾಗಿ ಎಲೆಕ್ಟ್ರಾನ್‌ನ ಚಲನೆಯು ವಾಹಕತೆಗೆ ಕಾರಣವಾಗಿದೆ

p - ಬಗೆಯ ಅರೆವಾಹಕದಲ್ಲಿ $n_n >> n_e$

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ — ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಆ್ಯಂಪಿಯರ್ಸ್ ಲಾ' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://bit.ly/3uJBCGq

ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರದ ಪತನ ಸೂತ್ರಧಾರಿಯ ಏಳು– ಬೀಳು

ದಿಢೀರ್ ಮೇಲೇರಿ ಇಳಿದ ಜಾರಕಿಹೊಳಿ

• ಎಸ್.ರವಿಪ್ರಕಾಶ್

ಬೆಂಗಳೂರು: ಬಿಜೆಪಿಯ ರಮೇಶ ಜಾರಕಿಹೊಳಿ ಅವರು ರಾಜ್ಯ ರಾಜಕಾರಣದಲ್ಲಿ ರಾಕೆಟ್ ವೇಗದಲ್ಲಿ ಏರಿ ಅಷ್ಟೇ ರಭಸದಲ್ಲಿ ಪಾತಾಳಕ್ಕೆ ಕುಸಿದಿದ್ದಾರೆ. ಜೆಡಿಎಸ್–ಕಾಂಗ್ರೆಸ್ ಸರ್ಕಾರದ ಪತನದ ಸೂತ್ರಧಾರಿ ಎಂದೇ ಬಿಂಬಿತರಾಗಿರುವ ರಮೇಶ ಅವರು ಸಚಿವರಾಗಿ ಒಂದು ವರ್ಷದಲ್ಲೇ ಲೈಂಗಿಕ ಹಗರಣದ ಆರೋಪದ ಮೇಲೆ ನಿರ್ಗಮಿಸಿದ್ದಾರೆ.

ಮೈತ್ರಿ ಸರ್ಕಾರದ ಅವಧಿಯಲ್ಲಿ ಬೆಳಗಾವಿ ಜಿಲ್ಲೆಯ ರಾಜಕಾರಣದಲ್ಲಿ ಡಿ.ಕೆ.ಶಿವಕುಮಾರ್ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದು ಸಿಟ್ಟಿಗೆದ್ದ ಮೈತ್ರಿ ಸರ್ಕಾರದ ವಿರುದ್ಧವೇ ತಿರುಗಿ ಬಿದ್ದರು. ಬೆಳಗಾವಿ ರಾಜಕಾರಣದಲ್ಲಿ ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಅವರಿಗೆ ಡಿ.ಕೆ.ಶಿವಕುಮಾರ್ ಪ್ರಾಶಸ್ತ್ಯ ನೀಡುತ್ತಿದ್ದಾರೆ ಎಂಬುದು ರಮೇಶ ಅವರ ಸಿಟ್ಟಿಗೆ ಕಾರಣವಾಗಿತ್ತು. ಮೈತ್ರಿ ಸರ್ಕಾರ ಪತನಕ್ಕೆ ಹಲವು ಬಾರಿ ಪ್ರಯತ್ನ ನಡೆಸಿದ್ದರೂ ಕೈಗೂಡಿರಲಿಲ್ಲ.

ಸಿದ್ದರಾಮಯ್ಯ ಸರ್ಕಾರದಲ್ಲಿ ಸಣ್ಣ ಕೈಗಾರಿಕೆಗಳ ಸಚಿವರಾಗಿದ್ದ ರಮೇಶ ಅವರಿಗೆ ಎಚ್.ಡಿ.ಕುಮಾರಸ್ವಾಮಿ ಸರ್ಕಾರದಲ್ಲಿ ಪೌರಾಡಳಿತ ಖಾತೆ ಸಿಕ್ಕಿತ್ತು. ಸಚಿವ ಸ್ಥಾನ ಸಿಕ್ಕಿದ್ದರೂ ತಮ್ಮ ಕಚೇರಿಗೆ ಒಂದು ದಿನವೂ ಸರಿಯಾಗಿ ಹೋಗಿರಲಿಲ್ಲ. ಸಚಿವ ಸಂಪುಟ ಸಭೆಗಳಿಗೆ ಗೈರಾಗಿದ್ದರು. ತಮ್ಮ ಬಹುತೇಕ ಸಮಯವನ್ನು ಶಿವಕುಮಾರ್ ಮತ್ತು ಲಕ್ಷ್ಮೀ ಹೆಬ್ಬಾಳಕರ ಅವರನ್ನು ಟೀಕಿಸುವುದರಲ್ಲೇ ಸಮಯ ವ್ಯಯಮಾಡಿದರು ಎಂಬ ಟೀಕೆಗೆ ಗುರಿಯಾದರು.

2019ರ ಜೂನ್‌ನಲ್ಲಿ ಕಾಂಗ್ರೆಸ್‌ನ 15 ಶಾಸಕರು ಮತ್ತು ಜೆಡಿಎಸ್‌ನ ಇಬ್ಬರು ಶಾಸಕರು ರಾಜೀನಾಮೆ ನೀಡಿ ಮುಂಬೈಗೆ ಹೋದಾಗ ಅದರ ನೇತೃತ್ವವನ್ನು ಜಾರಕಿಹೊಳಿಯೇ ವಹಿಸಿದ್ದರು. ಬಿಜೆಪಿ ಸರ್ಕಾರ ಬಂದ ಮೇಲೆ ತಮ್ಮ ಜತೆ ಬಂದವರಿಗೆ ಉಪಚುನಾವಣೆಯಲ್ಲಿ ಟಿಕೆಟ್ ಕೊಡಿಸುವ ಮತ್ತು ಸಚಿವ ಸ್ಥಾನಕ್ಕಾಗಿ ಪ್ರಭಾವ ಬೀರುವಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ಮಂತ್ರಿ ಮಂಡಲ ಸೇರ್ಪಡೆ ವೇಳೆ ತಮಗೆ ಜಲಸಂಪನ್ಮೂಲ ಖಾತೆ ನೀಡುವುದರ ಜತೆಗೆ ಬೆಳಗಾವಿ ಜಿಲ್ಲೆ ಉಸ್ತುವಾರಿ ನೀಡಬೇಕು ಎಂದು ಪಟ್ಟು ಹಿಡಿದ್ದರು. ಮುಖ್ಯಮಂತ್ರಿ ಯಡಿಯೂರಪ್ಪ ಬೇರೆ ದಾರಿ ಇಲ್ಲದೇ ಅವರ ಬೇಡಿಕೆಗೆ ಮಣಿಯಲೇಬೇಕಾಯಿತು.

ಹಾದಿ ಬದಲಿಸಿದ ಜಾರಕಿಹೊಳಿ: ಸಚಿವರಾಗಿ ಆರು ತಿಂಗಳು ಕಳೆಯುತ್ತಲೇ ಪ್ರತ್ಯೇಕ ಸಭೆಗಳನ್ನು ನಡೆಸುವ ಮೂಲಕ ಮುಖ್ಯಮಂತ್ರಿಯವರಿಗೆ ಇರಿಸುಮುರಿಸು ಉಂಟು ಮಾಡಿದ್ದರು. ಸಚಿವ ಸಂಪುಟ ವಿಸ್ತರಣೆಗಾಗಿ ಇಂತಹ ಸಭೆಗಳನ್ನು ನಡೆಸಿ ಒತ್ತಡ ತಂತ್ರ ಅನುಸರಿಸಿದ್ದರು. ಈ ಬಗ್ಗೆ ಯಡಿಯೂರಪ್ಪ ಅಸಮಾಧಾನಗೊಂಡಿದ್ದರು ಎಂದು ಮೂಲಗಳು ಹೇಳಿವೆ.

ಮುಖ್ಯಮಂತ್ರಿ ಹುದ್ದೆಗೆ ಕೇಂದ್ರ ಸಚಿವ ಪ್ರಲ್ಹಾದ ಜೋಷಿಯವರನ್ನು ಬಿಂಬಿಸುವ ಕೆಲಸವನ್ನು ಸದ್ದಿಲ್ಲದೇ ಮಾಡಿದ್ದರು. ದೆಹಲಿಯಲ್ಲಿ ಜೋಷಿ ಅವರನ್ನು ಹಲವು ಬಾರಿ ಭೇಟಿ ಮಾಡಿದ್ದರು. ಈಗ ಬಹಿರಂಗವಾಗಿರುವ ಸಿ.ಡಿಯಲ್ಲೂ ಮುಖ್ಯಮಂತ್ರಿ ಯಡಿಯೂರಪ್ಪ ಭ್ರಷ್ಟ ಮತ್ತು ಪ್ರಲ್ಹಾದ ಜೋಷಿ ಮುಂದಿನ ಮುಖ್ಯಮಂತ್ರಿ ಆಗುತ್ತಾರೆ ಎಂದು ಹೇಳಿರುವುದು ಪಕ್ಷಕ್ಕೆ ತೀವ್ರ ಮುಜುಗರ ಉಂಟು ಮಾಡಿದೆ ಎಂದು ಮೂಲಗಳು ಹೇಳಿವೆ.

ಅದೇ ಸಿ.ಡಿಯಲ್ಲಿ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಒಳ್ಳೆಯ ಮನುಷ್ಯ ಎಂದು ಹೊಗಳಿದ್ದಾರೆ. ಈ ವ್ಯಕ್ತಿ ಎಲ್ಲೆಲ್ಲಿ ರಾಜಕೀಯದ ಸೂಕ್ಷ್ಮತೆಯನ್ನು ಚರ್ಚಿಸುತ್ತಾರೆ ಎಂಬ ಚರ್ಚೆಯೂ ರಾಜಕೀಯ ವಲಯದಲ್ಲಿ ಆರಂಭವಾಗಿದೆ.

ಲೈಂಗಿಕ ಹಗರಣಗಳಲ್ಲಿ ಸಿಲುಕಿ ಪುನಃ ರಾಜಕೀಯ ಭವಿಷ್ಯ ಕಂಡುಕೊಂಡವರು ವಿರಳ. ಈ ಹಿಂದೆ ಹರತಾಳು ಹಾಲಪ್ಪ ಅವರು ಇಂತಹದ್ದೇ ಆರೋಪಕ್ಕೆ ಗುರಿಯಾಗಿದ್ದರು ಬಳಿಕ ಕ್ಲಿನ್ ಚಿಟ್ ಪಡೆದರು. ಸಿದ್ದರಾಮಯ್ಯ ಅವಧಿಯಲ್ಲಿ ಲೈಂಗಿಕ ಹಗರಣದಲ್ಲಿ ರಾಜೀನಾಮೆ ನೀಡಿದ್ದ ಎಚ್.ವೈ.ಮೇಟಿಗೆ ಕಾಂಗ್ರೆಸ್ ಪಕ್ಷ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ನೀಡಿತು, ಆದರೆ ಚುನಾವಣೆಯಲ್ಲಿ ಗೆಲ್ಲಲಿಲ್ಲ. ಜಾರಕಿಹೊಳಿ ರಾಜಕೀಯವಾಗಿ ಮೂಲೆಗುಂಪಾಗಬಹುದು ಎಂದು ರಾಜಕೀಯ ವಲಯದಲ್ಲಿ ವಿಶ್ಲೇಷಿಸಲಾಗಿದೆ.

'ತಕ್ಷಣ ರಾಜೀನಾಮೆ ನೀಡಬೇಕಿತ್ತು'



ಸತೀಶ ಜಾರಕಿಹೊಳಿ

ಬೆಳಗಾವಿ: 'ಆರೋಪ ಕೇಳಿಬಂದ ಕೂಡಲೇ ರಮೇಶ ಜಾರಕಿಹೊಳಿ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಿತ್ತು. ಒಂದು ದಿನ ಕಾಯುವ ಅಗತ್ಯ ಇರಲಿಲ್ಲ' ಎಂದು ಸಹೋದರ, ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಪ್ರತಿಕ್ರಿಯಿಸಿದರು.

ಗೋಕಾಕದಲ್ಲಿ ಬುಧವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ವಿರೋಧ ಪಕ್ಷ, ಆಡಳಿತ ಪಕ್ಷ ಹಾಗೂ ಜನರ ಒತ್ತಡದಂತೆ ರಾಜೀನಾಮೆ ನೀಡಿದ್ದಾರೆ. ಈಗ ನೈತಿಕತೆಯ ವಿಚಾರ ಮುಗಿದಿದೆ. ಇನ್ನೇನಿದ್ದರೂ ಕಾನೂನು ಹೋರಾಟವಷ್ಟೆ. ಆ ಸಿ.ಡಿ. ನಕಲಿಯೋ, ಅಸಲಿಯೋ ಎನ್ನುವುದನ್ನು ಪೊಲೀಸರು ತನಿಖೆ ಮಾಡಬೇಕು. ಸತ್ಯ ಬಯಲಿಗೆಳೆಯಬೇಕು' ಎಂದರು.

'ನಾವು ಸಹೋದರರಾಗಿರಬಹುದು. ಆದರೆ, ಪಕ್ಷ ಬೇರೆ. ಪಕ್ಷವೆಂದು ಬಂದಾಗ ನಮ್ಮ ಪಕ್ಷದ ಪರ ನಿಲ್ಲುತ್ತೇವೆ. ಎಲ್ಲದಕ್ಕೂ ಕುಟುಂಬ ಬೆರೆಸುವುದು ಸರಿಯಲ್ಲ' ಎಂದರು.

ಗೋಕಾಕದಲ್ಲಿ ಸಾರಿಗೆ ಬಸ್‌ಗಳಿಗೆ ಕಲ್ಲು



ಬೆಳಗಾವಿ: 'ರಮೇಶ ಜಾರಕಿಹೊಳಿ ವಿರುದ್ಧ ಷಡ್ಯಂತ್ರ ರೂಪಿಸಲಾಗಿದೆ ಎಂದು ಆರೋಪಿಸಿ ಹಾಗೂ ಅವರು ಸಚಿವ ಸ್ಥಾನಕ್ಕೆ ನೀಡಿರುವ ರಾಜೀನಾಮೆ ಅಂಗೀಕರಿಸಬಾರದು' ಎಂದು ಆಗ್ರಹಿಸಿ ಅವರ ಬೆಂಬಲಿಗರು ಗೋಕಾಕದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು. ಈ ವೇಳೆ ಕಿಡಿಗೇಡಿಗಳು ಕಲ್ಲು ತೂರಿದ್ದರಿಂದ ಎನ್‌ಡಬ್ಲ್ಯುಕೆಆರ್‌ಟಿಸಿಗೆ ಸೇರಿದ 13ಕ್ಕೂ ಹೆಚ್ಚು ಬಸ್‌ಗಳ ಹಿಂಬದಿಯ ಗಾಜುಗಳು ಒಡೆದಿವೆ.

ನಿಲ್ದಾಣದಲ್ಲಿ ನಿಂತಿದ್ದ ಬಸ್‌ಗಳ ಮೇಲೆ ಕಲ್ಲು ತೂರಿದ್ದಾರೆ. ಆಗ ಪ್ರಯಾಣಿಕರಿರಲಿಲ್ಲ.

ಮುಂಜಾಗ್ರತಾ ಕ್ರಮವಾಗಿ ಬಸ್‌ಗಳ ಸಂಚಾರ ದಿಢೀರ್ ಸ್ಥಗಿತಗೊಳಿಸಿದ್ದರಿಂದ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಹಾಗೂ ಪ್ರಯಾಣಿಕರು ಪರದಾಡಿದರು.

'ರಾಜಕೀಯ ಪಿತೂರಿ'

ಮೈಸೂರು: 'ರಮೇಶ್ ಜಾರಕಿಹೊಳಿ ಬಹಳ ದೈವಭಕ್ತ, ಸಮಾಜಕ್ಕೆ ಹೆದರುವ ವ್ಯಕ್ತಿ. ಮೇಲ್ನೋಟಕ್ಕೆ ಇದೊಂದು ರಾಜಕೀಯ ಪಿತೂರಿ ಎನಿಸುತ್ತಿದೆ. ಸತ್ಯ ಹೊರಗೆ ಬರುವವರೆಗೆ ಕಾಯೋಣ' ಎಂದು ಸಚಿವ ಸಿ.ಪಿ. ಯೋಗೇಶ್ವರ್ ಬುಧವಾರ ಇಲ್ಲಿ ತಿಳಿಸಿದರು.

'ರಮೇಶ್ ಜೊತೆ ನಾನು ಕೂಡ ಮಾತನಾಡಿದ್ದೇನೆ. ಯಾರೋ ದುರುದ್ದೇಶದಿಂದ ಈ ಕೃತ್ಯ ಎಸಗಿರುವುದಾಗಿ ಹೇಳುತ್ತಿದ್ದಾರೆ. ನೈತಿಕವಾಗಿ ಅವರಿಗೆ ನಾನೂ ಬೆಂಬಲ ಕೊಡುತ್ತೇನೆ. ಊಹಾಪೋಹದ ಮೇಲೆ ಮಾತನಾಡುವುದಿಲ್ಲ. ಸಿ.ಡಿ ನೈಜವೋ, ನಕಲಿಯೋ ನನಗೆ ಗೊತ್ತಿಲ್ಲ' ಎಂದರು.

ವಿಚಾರಣೆ ನಡೆಯಲಿ: 'ತಪ್ಪು ಮಾಡಿಲ್ಲ ಎಂಬುದಾಗಿ ಜಾರಕಿಹೊಳಿ ಅವರೇ ಹೇಳಿದ್ದಾರೆ. ಹೀಗಾಗಿ, ವಿಚಾರಣೆ ನಡೆಯಲಿ. ತಕ್ಷಣವೇ ನಿರ್ಧಾರಕ್ಕೆ ಬರುವುದು ಸರಿಯಲ್ಲ' ಎಂದು ಸಚಿವ ಜಗದೀಶ ಶೆಟ್ಟರ್ ಹೇಳಿದರು.

ತನಿಖೆ ನಡೆಯಲಿ: 'ಸತ್ಯ ಏನೆಂಬುದು ರಮೇಶ್ ಜಾರಕಿಹೊಳಿ ಅವರಿಗೆ ಗೊತ್ತಿದೆ. ಇದಕ್ಕೆ ಸಂಬಂಧಪಟ್ಟಂತೆ ಸರಿಯಾದ ನಿರ್ಧಾರವನ್ನು ಮುಖ್ಯಮಂತ್ರಿ ತೆಗೆದುಕೊಳ್ಳುತ್ತಾರೆ' ಎಂದು ಶಾಸಕ ಎಸ್.ಎ.ರಾಮದಾಸ್ ಹೇಳಿದರು.

'ಬಿಜೆಪಿ ಸಚಿವರ ನಡೆ ಹೇಸಿಗೆ ಮೂಡಿಸುತ್ತದೆ'

ಬೆಂಗಳೂರು: 'ಸರ್ಕಾರದ ಕೆಲಸ ದೇವರ ಕೆಲಸ ಎಂದು ಹೇಳುತ್ತೇವೆ. ಆದರೆ, ಬಿಜೆಪಿ ಸಚಿವರ ನಡೆ ಹೇಸಿಗೆ ಮೂಡಿಸುತ್ತದೆ' ಎಂದು ಕಾಂಗ್ರೆಸ್ ವಕ್ತಾರ ಬ್ರಿಜೇಶ್ ಕಾಳಪ್ಪ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಮೇಶ ಜಾರಕಿಹೊಳಿ ಯುವತಿ ಜೊತೆ ಇರುವ ಸಿ.ಡಿ ಹೊರಬಂದಿದೆ. ಈ ಹಿಂದೆ, ಅರವಿಂದ ಲಿಂಬಾವಳಿ ಅವರ ಬಗ್ಗೆಯೂ ಸಿ.ಡಿ ಹೊರಬಂದಿತ್ತು. ಅದು ಏನಾಯಿತು ಎಂದು ಗೊತ್ತಿಲ್ಲ' ಎಂದರು.

'ಅತಿ ಭ್ರಷ್ಟ ಮುಖ್ಯಮಂತ್ರಿ ಯಡಿಯೂರಪ್ಪ ಎಂದು ರಮೇಶ ಹೇಳಿರುವುದು ಕೂಡಾ ಸಿ.ಡಿಯಲ್ಲಿದೆ. ಆ ಮಾತನ್ನು ಅವರು ಸಾರ್ವಜನಿಕವಾಗಿ ಹೇಳಬೇಕಿತ್ತು. ಪ್ರಲ್ಹಾದ ಜೋಷಿ ಮುಂದೆ ಮುಖ್ಯಮಂತ್ರಿ ಆಗುತ್ತಾರೆಂದೂ ಅವರೇ ಹೇಳಿರುವುದೂ ಸಿ.ಡಿಯಲ್ಲಿದೆ. ಅಂದರೆ, ಯಡಿಯೂರಪ್ಪ ಬಗ್ಗೆ ಸಚಿವರಿಗೆ ಯಾವ ರೀತಿಯ ಅಭಿಪ್ರಾಯ ಇದೆ ಅನ್ನೋದು ಗೊತ್ತಾಗುತ್ತದೆ' ಎಂದರು.

'ಇನ್ನೂ 19 ಮುಖಂಡರ ಸಿ.ಡಿ ಬಿಡುಗಡೆ ಸಾಧ್ಯತೆ'

ಪ್ರಜಾವಾಣಿ ವಾರ್ತೆ



ಮುಲಾಲಿ

ಬಳ್ಳಾರಿ: 'ರಾಜ್ಯದ ಇನ್ನೂ 19 ರಾಜಕೀಯ ಮುಖಂಡರ ಲೈಂಗಿಕ ಹಗರಣಗಳ ಸಿ.ಡಿ. ಬಿಡುಗಡೆಯಾಗುವ ನಿರೀಕ್ಷೆ ಇದೆ' ಎಂದು ಸಾಮಾಜಿಕ ಕಾರ್ಯಕರ್ತ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನದ ಆಕಾಂಕ್ಷಿ ರಾಜಶೇಖರ ಮುಲಾಲಿ ಹೇಳಿದರು.

'ವಿವಿಧ ಪಕ್ಷಗಳ ಶಾಸಕರು, ಸಚಿವರು ಮತ್ತು ಸಂಸದರು ಸೇರಿದಂತೆ ಮುಖಂಡರ ಲೈಂಗಿಕ ಹಗರಣಗಳ ಸಿ.ಡಿಗಳನ್ನು ಕೆಲವರು ಸಿದ್ಧಪಡಿಸಿಟ್ಟಿರುವುದು ಗೊತ್ತಾಗಿದೆ. ಎರಡು ದಿನದ ಹಿಂದೆ ಸಿ.ಡಿ. ಬಿಡುಗಡೆಯ ನೇತೃತ್ವ ವಹಿಸಬೇಕು ಎಂದು ಕೋರಿ ಒಬ್ಬರು ಕರೆ ಮಾಡಿದ್ದರು. ಸಾಹಿತ್ಯ ಪರಿಷತ್‌ನ ಚುನಾವಣೆಯಲ್ಲಿ ಸ್ಪರ್ಧಿಸಿರುವುದರಿಂದ ಸಾಧ್ಯವಿಲ್ಲ ಎಂದಿದ್ದೆ' ಎಂದು ನಗರದಲ್ಲಿ ಬುಧವಾರ ತಿಳಿಸಿದರು. ಆದರೆ ಕರೆ ಮಾಡಿದವರು ಯಾರು ಎಂಬುದನ್ನು ತಿಳಿಸಲಿಲ್ಲ.

'ರಾಜಕಾರಣಿಗಳನ್ನು ಸಿಲುಕಿಸಿ ಬ್ಲ್ಯಾಕ್‌ಮೇಲ್ ಮಾಡುವ ಏಜೆನ್ಸಿಗಳಿವೆ. ರಮೇಶ ಜಾರಕಿಹೊಳಿ ಅವರ ಸಿ.ಡಿ. ಬಿಡುಗಡೆ ಹಿಂದೆ ಕಾಂಗ್ರೆಸ್ ಕೈವಾಡವಿದೆ. ರಾಜ್ಯದ ಮಾಜಿ ಮುಖ್ಯಮಂತ್ರಿಯೊಬ್ಬರು ವಾರಕ್ಕೊಮ್ಮೆ ವಯನಾಡಿಗೆ ಭೇಟಿ ನೀಡುವುದರ ಹಿಂದೆಯೂ ಲೈಂಗಿಕ ಅಭೀಪ್ಸೆಯೇ ಇದೆ' ಎಂದು ಆರೋಪಿಸಿದರು.

'ರಮೇಡಶ ಜಾರಕಿಹೊಳಿ ಪ್ರಕರಣದಲ್ಲಿ ಸಂತ್ರಸ್ತ ಮಹಿಳೆ ದೂರು ನೀಡಿಲ್ಲ. ಆಕೆ ಪತಿ, ಮಕ್ಕಳು ಅಥವಾ ಮಾಜಿ ಸಚಿವರ ಪತ್ನಿ ದೂರು ಕೊಟ್ಟರೆ ಮಾತ್ರ ಕ್ರಮ ಕೈಗೊಳ್ಳಲು ಸಾಧ್ಯ. ಮಹಿಳೆಗೆ ಪ್ರಾಣಭಯವಿದ್ದರೆ ನನ್ನನ್ನು ಸಂಪರ್ಕಿಸಿದರೆ ನೆರವಾಗುವೆ' ಎಂದರು.

ದೂರುದಾರ ದಿನೇಶ್ ಕಲ್ಲಹಳ್ಳಿಗೆ ಜೀವ ಬೆದರಿಕೆ: ಭದ್ರತೆ

ಪ್ರಜಾವಾಣಿ ವಾರ್ತೆ

ರಾಮನಗರ: ರಮೇಶ ಜಾರಕಿಹೊಳಿ ವಿರುದ್ಧ ದೂರು ನೀಡಿರುವ ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ಅವರಿಗೆ ಬೆದರಿಕೆ ಕರೆಗಳು ಬಂದಿವೆ. ಈ ಹಿನ್ನೆಲೆಯಲ್ಲಿ ಕನಕಪುರ ತಾಲ್ಲೂಕಿನ ಕಲ್ಲಹಳ್ಳಿಯಲ್ಲಿ ಇರುವ ಅವರ ನಿವಾಸಕ್ಕೆ ಪೊಲೀಸರು ಬುಧವಾರ ಭದ್ರತೆ ಒದಗಿಸಿದ್ದಾರೆ.

'ನಾನು ನೀಡಿರುವ ದೂರಿನಿಂದ ಜಾರಕಿಹೊಳಿ ಬೆಂಬಲಿಗರು ಆಕ್ರೋಶಗೊಂಡಿದ್ದು, ದೂರವಾಣಿ ಕರೆಗಳ ಮೂಲಕ ನನಗೆ ಜೀವ ಬೆದರಿಕೆ ಒಡ್ಡುತ್ತಿದ್ದಾರೆ. ಅಲ್ಲದೇ ನಾನು ಓಡಾಡುವ ಸ್ಥಳಗಳಲ್ಲಿ ಅಪರಿಚಿತರ ಗುಂಪು ನನ್ನನ್ನು ಹಿಂಬಾಲಿಸುತ್ತಿದ್ದು, ನಾನು ಹಾಗೂ ನನ್ನ ಕುಟುಂಬದವರಿಗೆ ಭಯ ಹುಟ್ಟಿಸಲು ಯತ್ನಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಅಗತ್ಯ ಭದ್ರತೆ ಒದಗಿಸಬೇಕು' ಎಂದು ಕೋರಿ ಅವರು ಬುಧವಾರ ಸಂಜೆ ಕನಕಪುರ ಗ್ರಾಮೀಣ ಠಾಣೆಯಲ್ಲಿ ದೂರು ಸಲ್ಲಿಸಿದರು.

ತಮಿಳುನಾಡು ವಿಧಾನಸಭಾ ಚುನಾವಣೆ • ಸ್ವಂತ ಬಲದಲ್ಲೇ ಅಧಿಕಾರಕ್ಕೆ ಏರಲು ಸ್ಟಾಲಿನ್ ನೇತೃತ್ವದ ಪಕ್ಷದ ಹಂಬಲ • ಮಿತ್ರಪಕ್ಷಗಳ ಮನವೊಲಿಕೆಗೆ ಯತ್ನ

ಸೀಟು ಹಂಚಿಕೆ: ಡಿಎಂಕೆಗೆ ತಲೆನೋವು

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡು ವಿಧಾನಸಭೆ ಚುನಾವಣೆ ಕಾವೇರುತ್ತಿದ್ದು, ಡಿಎಂಕೆ ಮೈತ್ರಿಕೂಟದಲ್ಲಿ ಸೀಟು ಹೊಂದಾಣಿಕೆ ಬಿಕ್ಕಟ್ಟು ತಲೆದೋರಿದೆ.

ಸೀಟು ಹೊಂದಾಣಿಕೆ ಕುರಿತಂತೆ ಡಿಎಂಕೆ ಜೊತೆ ಮಿತ್ರಪಕ್ಷಗಳು ಮುನಿಸಿಕೊಂಡಿವೆ. 10 ವರ್ಷಗಳಿಂದ ಅಧಿಕಾರ ಕಾಣದ ಡಿಎಂಕೆ, ಈ ಬಾರಿ 180ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಸ್ಪರ್ಧಿಸಿ, ಎಐಎಡಿಎಂಕೆ ಮೈತ್ರಿಕೂಟಕ್ಕೆ ಬಲವಾದ ಪೆಟ್ಟುಕೊಟ್ಟು, ಸ್ವಂತ ಬಲದಲ್ಲಿಯೇ ಸರ್ಕಾರ ರಚಿಸುವ ಇರಾದೆ ಹೊಂದಿದೆ.

ಆದರೆ 2019ರ ಲೋಕಸಭಾ ಚುನಾವಣೆಯಲ್ಲಿ ಪಕ್ಷ ತೆಗೆದುಕೊಂಡಿದ್ದ ನಿಲುವಿಗೆ ಇದು ವಿರುದ್ಧವಾಗಿದೆ. 39 ಕ್ಷೇತ್ರಗಳ ಪೈಕಿ 20 ಸೀಟುಗಳನ್ನು ಡಿಎಂಕೆ ಮಿತ್ರಪಕ್ಷಗಳಿಗೆ ಹಂಚಿಕೆ ಮಾಡಿತ್ತು.

‘ನಾವು 2021ರ ಚುನಾವಣೆಯನ್ನು ವಿಭಿನ್ನ ಆಟ ಎಂದು ಮಿತ್ರ ಪಕ್ಷಗಳಿಗೆ ತಿಳಿಸಿದ್ದೇವೆ. ಎಐಎಡಿಎಂಕೆ ಮಾತ್ರವಲ್ಲ ನಾವು ಬಿಜೆಪಿಯ ವಿರುದ್ಧವೂ ಹೋರಾಡುತ್ತಿದ್ದೇವೆ. ಆದ್ದರಿಂದ, ನಾವು ಗರಿಷ್ಠ ಕ್ಷೇತ್ರಗಳಲ್ಲಿ ಮತ್ತು ಮಿತ್ರಪಕ್ಷಗಳು ಕಡಿಮೆ ಸಂಖ್ಯೆಯಲ್ಲಿ ಸ್ಪರ್ಧಿಸಿದರೆ ಮೈತ್ರಿಕೂಟಕ್ಕೆ ಒಳಿತಾಗುತ್ತದೆ ಎಂದು ನಾವು ಅವರಿಗೆ ತಿಳಿಸಿದ್ದೇವೆ’ ಎಂದು ಡಿಎಂಕೆ ಹಿರಿಯ ಮುಖಂಡರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.



ತಮಿಳುನಾಡು ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಕನ್ಯಾಕುಮಾರಿಯಲ್ಲಿ ಭದ್ರತಾಪಡೆಗಳು ಬುಧವಾರ ಪಥಸಂಚಲನ ನಡೆಸಿದವು –ಪಿಟಿಐ ಚಿತ್ರ

ಐಎಸ್‌ಎಫ್‌ಗೆ ಸೀಟು ಬಿಟ್ಟುಕೊಟ್ಟ ಕಾಂಗ್ರೆಸ್

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿ ಇಂಡಿಯನ್ ಸೆಕ್ಯುಲರ್ ಫ್ರಂಟ್ (ಐಎಸ್‌ಎಫ್) ಜತೆಗೆ ಕಾಂಗ್ರೆಸ್ ಮತ್ತು ಎಡಪಕ್ಷಗಳು ಸೀಟು ಹಂಚಿಕೆ ಮಾತುಕತೆ ನಡೆಸಿವೆ. ಮಂಗಳವಾರ ತಡರಾತ್ರಿ ನಡೆದ ಸಭೆಯಲ್ಲಿ, ಐಎಸ್‌ಎಫ್‌ಗೆ ತನ್ನ ಪಾಲಿನ ಏಳು ಸೀಟುಗಳನ್ನು ಬಿಟ್ಟುಕೊಡಲು ಕಾಂಗ್ರೆಸ್ ಒಪ್ಪಿಗೆ ನೀಡಿದೆ. ಆದರೆ ಇನ್ನೂ ಮೂರು (ಒಟ್ಟು ಹತ್ತು) ಸೀಟುಗಳನ್ನು ಬಿಟ್ಟುಕೊಡುವಂತೆ ಐಎಸ್‌ಎಫ್ ಪಟ್ಟು ಹಿಡಿದಿದೆ. ಹೀಗಾಗಿ ಸೀಟು ಹಂಚಿಕೆ ಇನ್ನೂ ಅಂತಿಮವಾಗಿಲ್ಲ.

ಐಎಸ್‌ಎಫ್ ಜತೆ ಮೈತ್ರಿ ಮಾಡಿಕೊಂಡಿರುವುದಕ್ಕೆ ಕಾಂಗ್ರೆಸ್‌ನ ಹಿರಿಯ ನಾಯಕ ಆನಂದ್ ಶರ್ಮಾ ಅವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಇದಕ್ಕೆ ಲೋಕಸಭೆಯಲ್ಲಿ ಪಕ್ಷದ ನಾಯಕ ಅಧೀರ್ ರಂಜನ್ ಚೌಧರಿ ಅವರು ಸ್ಪಷ್ಟನೆ ನೀಡಿದ್ದರು. ಕಾಂಗ್ರೆಸ್‌ನ ತನ್ನ ಪಾಲಿನ ಒಂದು ಸೀಟನ್ನೂ ಐಎಸ್‌ಎಫ್‌ಗೆ ಬಿಟ್ಟುಕೊಡುವುದಿಲ್ಲ ಎಂದು ಅವರು ಹೇಳಿದ್ದರು. ಅವರು ಈ ಹೇಳಿಕೆ ನೀಡಿದ ಒಂದು ದಿನದ ಒಳಗೇ, ಐಎಸ್‌ಎಫ್‌ಗೆ ಕಾಂಗ್ರೆಸ್ ತನ್ನ ಪಾಲಿನ ಏಳು ಸೀಟುಗಳನ್ನು ಬಿಟ್ಟುಕೊಟ್ಟಿದೆ.

ಯುವನಾಯಕರಿಗೆ ಸಿಪಿಎಂ ಮಣೆ: ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಹೊಸತಲೆಮಾರಿನ ನಾಯಕರನ್ನು ಚುನಾವಣಾ ಕಣಕ್ಕೆ ಇಳಿಸಲು ಸಿಪಿಎಂ ಸಿದ್ಧತೆ ನಡೆಸಿದೆ. ಪಶ್ಚಿಮ ಬಂಗಾಳ ಸಿಪಿಎಂನ ಪ್ರಧಾನ ಕಾರ್ಯದರ್ಶಿ ಸೂರ್ಯಕಾಂತ ಮಿಶ್ರಾ ಸೇರಿದಂತೆ ಪಕ್ಷದ ಹಲವು ಹಿರಿಯ ನಾಯಕರನ್ನು ಚುನಾವಣಾ ಕಣಕ್ಕೆ ಇಳಿಸದೇ ಇರಲು ಸಿಪಿಎಂ ನಿರ್ಧರಿಸಿದೆ.

ಬದಲಿಗೆ ಪಕ್ಷದ ಯುವಮೋರ್ಚಾ ಘಟಕ ಮತ್ತು ವಿದ್ಯಾರ್ಥಿಗಳ ಘಟಕದ ನಾಯಕರನ್ನು ಈ ಚುನಾವಣೆಯಲ್ಲಿ ಕಣಕ್ಕೆ ಇಳಿಸಲಾಗುತ್ತದೆ. ಒಟ್ಟು ಅಭ್ಯರ್ಥಿಗಳಲ್ಲಿ ಯುವ ನಾಯಕರ ಸಂಖ್ಯೆಯೇ ಅಧಿಕವಾಗಿರಲಿದೆ ಎಂದು ಪಕ್ಷವು ಹೇಳಿದೆ. ಜೆಎನ್‌ಯು ವಿದ್ಯಾರ್ಥಿ ಸಂಘಟನೆ ನಾಯಕಿ ಆಯಿಷಿ ಘೋಷ್, ಎಸ್‌ಎಫ್‌ಐ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ದೀಪ್ತಿಷ್ಮ ಧರ್, ಎಫ್‌ಎಫ್‌ಐ ನಾಯಕಿ ಮಧುಜಾ ಸೇನ್ ರಾಯ್, ಸಿಪಿಎಂನ ಶತರೂಪ್ ಘೋಷ್, ಡಿವೈಎಫ್‌ಐನ ರಾಜ್ಯ ಜಾರ್ಯದರ್ಶಿ ಸಯಾನ್ ದೀಪ್ ಮಿತ್ರಾ ಅವರಿಗೆ ಟಿಕೆಟ್ ನೀಡುವ ಸಾಧ್ಯತೆ ಇದೆ.

ನುಡಿ–ಕಿಡಿ

ಬಂಗಾಳದ ಪುತ್ರ ಶ್ಯಾಂ ಪ್ರಸಾದ್ ಮುಖರ್ಜಿ ಅವರು ಜನಸಂಘವನ್ನು ಸ್ಥಾಪಿಸಿದ್ದರು. ಜನಸಂಘದ ಸಿದ್ಧಾಂತಗಳ ಆಧಾರದಲ್ಲೇ ಬಿಜೆಪಿಯನ್ನು ಸ್ಥಾಪಿಸಲಾಗಿತ್ತು. ಆದರೆ, ಮಮತಾ ಬ್ಯಾನರ್ಜಿ ಅವರು ಬಿಜೆಪಿಯನ್ನು ಹೊರಗಿನವರು ಎಂದು ಅವಹೇಳನ ಮಾಡುತ್ತಾರೆ
ನಿತಿನ್ ಗಡ್ಕರಿ, ಕೇಂದ್ರ ಸಚಿವ

ಟಿಎಂಸಿ ಆಡಳಿತದಲ್ಲಿ ಪಶ್ಚಿಮ ಬಂಗಾಳದ ಅಭಿವೃದ್ಧಿಯು ಅಧೋಗತಿಗೆ ಇಳಿದಿದೆ. ಬಿಜೆಪಿ ಅಧಿಕಾರಕ್ಕೆ ಬಂದರೆ, ರಾಜ್ಯವನ್ನು ಮತ್ತೆ ಅಭಿವೃದ್ಧಿಯ ಪಥಕ್ಕೆ ತರುತ್ತೇವೆ
ಪಶ್ಚಿಮ ಬಂಗಾಳ ಬಿಜೆಪಿ ಘಟಕ

ಪ್ರಧಾನಿ ನರೇಂದ್ರ ಮೋದಿ ಅವರು 20 ಅಥವಾ ಅದಕ್ಕಿಂತಲೂ ಹೆಚ್ಚಿನ ಬಾರಿ ಪಶ್ಚಿಮ ಬಂಗಾಳಕ್ಕೆ ಭೇಟಿ ನೀಡಲಿ, ಪ್ರಚಾರ ನಡೆಸಲಿ. ರಾಜ್ಯವು ಎಷ್ಟು ಅಭಿವೃದ್ಧಿಯಾಗಿದೆ ಎಂಬುದು ಅವರಿಗೆ ಮನವರಿಕೆಯಾಗುತ್ತದೆ
ಬ್ರತ್ಯ ಬಸು, ಟಿಎಂಸಿ ವಕ್ತಾರ

ಚುನಾವಣೆ ಹತ್ತಿರವಾಗುತ್ತಿರುವಂತೆಯೇ ಕೇಂದ್ರ ಸರ್ಕಾರವು ಕೇರಳ ಸರ್ಕಾರದ ಸಂಸ್ಥೆಗಳ ಮೇಲೆ ಜಾರಿ ನಿರ್ದೇಶನಾಲಯವನ್ನು (ಇ.ಡಿ) ಛೂಬಿಟ್ಟಿದೆ. ಇ.ಡಿ ದಾಳಿಯು ಚುನಾವಣಾ ನೀತಿ ಸಂಹಿತೆಯ ಸ್ಪಷ್ಟ ಉಲ್ಲಂಘನೆ
ಥಾಮಸ್ ಐಸೆಕ್, ಕೇರಳದ ಸಚಿವ

ಡಿಎಂಕೆ ಮೇಲೆ ಕಾಂಗ್ರೆಸ್ ಮುನಿಸು

ಬೇಡಿಕೆ ಇಟ್ಟಿದ್ದ ಸ್ಥಾನಗಳು ಹಾಗೂ ಕೊಡಲು ಪ್ರಸ್ತಾವಿಸಿರುವ ಸ್ಥಾನಗಳ ನಡುವೆ ಸಾಕಷ್ಟು ಅಂತರ ಇದೆ ಎಂದು ಕಾಂಗ್ರೆಸ್ ವಾದಿಸಿದೆ.

‘ಮೈತ್ರಿ ಎಂಬುದು ಕೇವಲ ಸ್ಥಾನಗಳನ್ನು ಆಧರಿಸಿಲ್ಲ. ಬದಲಾಗಿ, ಬಿಜೆಪಿ–ಎಐಎಡಿಎಂಕೆ ಮೈತ್ರಿಕೂಟವನ್ನು ಒಗ್ಗಟ್ಟಿನಿಂದ ಸೋಲಿಸುವ ಸಾಮಾನ್ಯ ಗುರಿಯನ್ನು ಆಧರಿಸಿದೆ’ ಎಂದು ಕಾಂಗ್ರೆಸ್ ಬುಧವಾರ ಹೇಳಿದೆ.

ಸೀಟು ಹಂಚಿಕೆ ಬಗ್ಗೆ ಪಕ್ಷದ ನಿಲುವನ್ನು ಈಗಾಗಲೇ ಡಿಎಂಕೆಗೆ ತಿಳಿಸಲಾಗಿದೆ ಎಂದು ತಮಿಳುನಾಡು ಕಾಂಗ್ರೆಸ್ ಘಟಕದ ಅಧ್ಯಕ್ಷ ಕೆ.ಎಸ್. ಅಳಗಿರಿ ಹೇಳಿದ್ದಾರೆ.

ಎರಡೂ ಪಕ್ಷಗಳು ತಮ್ಮ ನಿಲುವಿಗೆ ಅಂಟಿಕೊಂಡಿದ್ದರಿಂದ ಮಂಗಳವಾರ ನಡೆದ ಎರಡನೇ ಹಂತದ ಸೀಟುಹಂಚಿಕೆ ಸಭೆ ಅನಿಶ್ಚಿತೆಯಲ್ಲಿ ಮುಕ್ತಾಯವಾಯಿತು. ಮೂಲಗಳ ಪ್ರಕಾರ ಕಾಂಗ್ರೆಸ್‌ಗೆ 24 ಸ್ಥಾನಗಳನ್ನು ನೀಡಲು ಡಿಎಂಕೆ ಚಿಂತನೆ ನಡೆಸಿದೆ. ಡಿಎಂಕೆ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಕಾಂಗ್ರೆಸ್, ಗೌರವಾರ್ಹ ಸೀಟುಗಳು ಬೇಕು ಎಂದು ದನಿ ಎತ್ತಿದೆ. ಗುರುವಾರ ಮೂರನೇ ಸುತ್ತಿನ ಮಾತುಕತೆ ನಡೆಯುವ ಸಾಧ್ಯತೆಯಿದೆ.

‘ಮೊದಲ ಸುತ್ತಿನ ಮಾತುಕತೆಯಲ್ಲಿ ಡಿಎಂಕೆ ಕೇವಲ 18 ಸೀಟುಗಳನ್ನು ನೀಡಲು ಮುಂದಾಗಿತ್ತು. ಇದು ಅವಮಾನ. 40 ಸೀಟುಗಳಿಗಿಂತ ಕಡಿಮೆ ಒಪ್ಪಬಾರದು ಎಂಬ ಅಭಿಪ್ರಾಯ ಪಕ್ಷದೊಳಗೆ ಇದೆ. ಆದರೂ 35 ಸೀಟುಗಳನ್ನು ಒಪ್ಪಿಕೊಳ್ಳುತ್ತೇವೆ. ಅದಕ್ಕಿಂತ ಕಡಿಮೆ ನೀಡಿದರೆ ಒಪ್ಪಲು ಕಷ್ಟವಾಗುತ್ತದೆ. ಡಿಎಂಕೆಯು ನಮ್ಮ ಭಾವನೆಗಳನ್ನು ಗೌರವಿಸಬೇಕು’ ಎಂದು ಅಳಗಿರಿ ಹೇಳಿದ್ದಾರೆ.

ಶಶಿಕಲಾ ರಾಜಕೀಯ ನಿವೃತ್ತಿ



ಚೆನ್ನೈ (ಪಿಟಿಐ): ತಮಿಳುನಾಡು ರಾಜಕೀಯದಲ್ಲಿ ಬುಧವಾರ ಅಚ್ಚರಿದಾಯಕ ಬೆಳವಣಿಗೆ ನಡೆದಿದೆ. ಇತ್ತೀಚೆಗಷ್ಟೇ ಜೈಲಿನಿಂದ ಬಿಡುಗಡೆಯಾಗಿರುವ, ಎಐಎಡಿಎಂಕೆಯ ಉಚ್ಚಾಟಿತ ನಾಯಕಿ ವಿ.ಕೆ. ಶಶಿಕಲಾ ರಾಜಕೀಯ ನಿವೃತ್ತಿ ಘೋಷಿಸಿದ್ದಾರೆ.

ಜೈಲಿನಿಂದ ಶಶಿಕಲಾ ಅವರ ಬಿಡುಗಡೆಯು ತಮಿಳುನಾಡು ರಾಜಕೀಯದಲ್ಲಿ ಭಾರಿ ಬದಲಾವಣೆಗೆ ಕಾರಣವಾಗಲಿದೆ, ಅವರು ಆಡಳಿತಾರೂಢ ಪಕ್ಷ ಎಐಎಡಿಎಂಕೆಯ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಬಹುದು ಎಂದು ನಿರೀಕ್ಷಿಸಲಾಗಿತ್ತು.

ಆದರೆ, ತಾನು ರಾಜಕೀಯದಿಂದ ನಿವೃತ್ತಿ ಹೊಂದುವುದಾಗಿ ಬುಧವಾರ ರಾತ್ರಿ ಘೋಷಿಸಿದ ಅವರು, ‘ಜಯಲಲಿತಾ ಅವರು ಜೀವಂತವಿದ್ದಾಗಲೂ ಅಧಿಕಾರದ ಹಿಂದೆ ಓಡಲಿಲ್ಲ. ಅವರ ನಿಧನಾ ನಂತರವೂ ಅಧಿಕಾರದ ಹಿಂದೆ ಓಡುವುದಿಲ್ಲ. ಬದಲಿಗೆ ರಾಜಕೀಯದಿಂದ ನಿವೃತ್ತಿ ಹೊಂದುತ್ತಿದ್ದೇನೆ’ ಎಂದಿದ್ದಾರೆ.

ಪುದುಚೇರಿ: ಎನ್‌ಡಿಎ ಮೈತ್ರಿಯಲ್ಲಿ ಒಡಕು

ಪುದುಚೇರಿಯಲ್ಲಿ ಎನ್‌ಡಿಎ ಮೈತ್ರಿಕೂಟವು ಚುನಾವಣೆಯನ್ನು ಬಿಜೆಪಿ ನೇತೃತ್ವದಲ್ಲಿ ಎದುರಿಸಲಿದೆ ಎಂದು ಬಿಜೆಪಿ ಘೋಷಿಸಿರುವುದಕ್ಕೆ ಮಿತ್ರಪಕ್ಷಗಳು ಅಸಮಾಧಾನ ವ್ಯಕ್ತಪಡಿಸಿವೆ. ಪ್ರಮುಖ ವಿರೋಧ ಪಕ್ಷವಾಗಿದ್ದ ಎನ್.ಆರ್. ಕಾಂಗ್ರೆಸ್ ಈ ಸಂಬಂಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಚುನಾವಣೆಯನ್ನು ಬಿಜೆಪಿ ನೇತೃತ್ವದಲ್ಲೇ ಎದುರಿಸಲಾಗುತ್ತದೆ ಎಂದು ಬಿಜೆಪಿ ಏಕಪಕ್ಷೀಯವಾಗಿ ಘೋಷಿಸಿದೆ. ಪ್ರಬಲ ವಿರೋಧಪಕ್ಷವಾಗಿದ್ದ ನಮ್ಮನ್ನು ಕಡೆಗಣಿಸಲಾಗಿದೆ. ಈ ಸಂಬಂಧ ನಮ್ಮ ಪಕ್ಷದ ನಾಯಕರು ಮತ್ತು ಕಾರ್ಯಕರ್ತರ ಜತೆ ಮಾತುಕತೆ ನಡೆಸುತ್ತಿದ್ದೇವೆ. ಚುನಾವಣೆಯನ್ನು ಸ್ವತಂತ್ರವಾಗಿ ಎದುರಿಸಬೇಕೇ ಅಥವಾ ಮೈತ್ರಿಯಲ್ಲಿ ಮುಂದುವರಿಯಬೇಕೇ ಎಂಬುದರ ಬಗ್ಗೆ ಇನ್ನಷ್ಟೇ ನಿರ್ಧಾರ ತೆಗೆದುಕೊಳ್ಳಬೇಕಿದೆ ಎಂದು ಎನ್.ಆರ್. ಕಾಂಗ್ರೆಸ್‌ನ ಸಂಸ್ಥಾಪಕ ಅಧ್ಯಕ್ಷ ಎನ್.ರಂಗಸ್ವಾಮಿ ಅವರು ಹೇಳಿದ್ದಾರೆ.

11ಕ್ಕೆ ಡಿಎಂಕೆ ಪ್ರಣಾಳಿಕೆ ಬಿಡುಗಡೆ

ಏಪ್ರಿಲ್ 6ರಂದು ನಿಗದಿಯಾಗಿರುವ ತಮಿಳುನಾಡು ವಿಧಾನಸಭಾ ಚುನಾವಣೆಗೆ ಡಿಎಂಕೆ ಬಿರುಸಿನ ಸಿದ್ಧತೆ ನಡೆಸುತ್ತಿದ್ದು, ಇದೇ 11ರಂದು ಪಕ್ಷ ಪ್ರಣಾಳಿಕೆಯನ್ನು ಬಿಡುಗಡೆ ಮಾಡಲಿದೆ. ಮಾರ್ಚ್ 7ರಂದು ತಿರುಚಿನಾಪಳ್ಳಿಯಲ್ಲಿ ನಡೆಯಲಿರುವ ಬೃಹತ್ ಸಮಾರಂಭದಲ್ಲಿ ಪಕ್ಷದ ಅಧ್ಯಕ್ಷ ಎಂ.ಕೆ. ಸ್ಟಾಲಿನ್ ಅವರು ಮುಂದಿನ 10 ವರ್ಷಗಳ ಮುನ್ನೋಟ ಹೊಂದಿರುವ ‘ವಿಷನ್ ಡಾಕ್ಯುಮೆಂಟ್’ ಬಿಡುಗಡೆ ಮಾಡಲಿದ್ದಾರೆ. ಪ್ರಣಾಳಿಕೆಯನ್ನು ಪಕ್ಷದ ಹೀರೋ ಎಂದು ಸ್ಟಾಲಿನ್ ಕರೆದಿದ್ದಾರೆ. ಉದ್ಯೋಗ ಸೃಷ್ಟಿಗೆ ಪ್ರಣಾಳಿಕೆಯಲ್ಲಿ ಆದ್ಯತೆ ನೀಡುವ ಸಾಧ್ಯತೆಯಿದೆ ಎನ್ನಲಾಗಿದೆ.

ಚುನಾವಣೆ ಉದ್ದೇಶದಿಂದ ಶ್ರೀ ಎಂಗೆ ಭೂಮಿ ಮಂಜೂರು: ಕಾಂಗ್ರೆಸ್ ಆರೋಪ

‘ಸಿಪಿಎಂ–ಆರ್‌ಎಸ್‌ಎಸ್ ಒಳಮೈತ್ರಿ’

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಯೋಗಿ ಶ್ರೀ ಎಂ ಅವರ ಸತ್ಸಂಗ ಫೌಂಡೇಷನ್‌ಗೆ ತಿರುವನಂತಪುರದಲ್ಲಿ ನಾಲ್ಕು ಎಕರೆ ಭೂಮಿಯನ್ನು ಭೋಗ್ಯಕ್ಕೆ ನೀಡುವ ಕೇರಳ ಸರ್ಕಾರದ ನಿರ್ಧಾರವು ರಾಜಕೀಯ ಕೆಸರೆರಚಾಟಕ್ಕೆ ಕಾರಣವಾಗಿದೆ. ಚುನಾವಣೆಯನ್ನು ಎದುರಿಸಲು ಆಡಳಿತಾರೂಢ ಸಿಪಿಎಂ, ಆರ್‌ಎಸ್‌ಎಸ್ ಜತೆ ಕೈಜೋಡಿಸಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಯೋಗ ಕೇಂದ್ರ ನಡೆಸಲು ತಿರುವನಂತಪುರದ ಬಳಿ 4 ಎಕರೆ ಜಾಗ ಬೇಕು ಎಂದು ಶ್ರೀ ಎಂ ಅವರು ಈಚೆಗಷ್ಟೇ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು. ಈ ಮನವಿಯನ್ನು ಸರ್ಕಾರ ಕಳೆದ ವಾರ ಪುರಸ್ಕರಿಸಿತ್ತು. 4 ಎಕರೆ ಜಾಗವನ್ನು 10 ವರ್ಷಗಳ ಅವಧಿಗೆ ಭೋಗ್ಯಕ್ಕೆ ಮಂಜೂರು ಮಾಡಿತ್ತು. ಈ ಜಾಗವನ್ನು ಯೋಗ ಕೇಂದ್ರ ನಡೆಸಲು ಮಾತ್ರ ಬಳಸಬೇಕು ಎಂಬ ಷರತ್ತನ್ನು ಸರ್ಕಾರ ಹಾಕಿದೆ.

ಸರ್ಕಾರದ ಈ ನಿರ್ಧಾರದ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ, ಕಾಂಗ್ರೆಸ್ ಅಭಿಯಾನ ಆರಂಭಿಸಿದೆ.

ಆಡಳಿತಾರೂಢ ಎಲ್‌ಡಿಎಫ್‌ನಲ್ಲಿ ಪ್ರಧಾನ ಪಕ್ಷವಾಗಿರುವ ಸಿಪಿಎಂ ಮತ್ತು ಆರ್‌ಎಸ್‌ಎಸ್ ಮಧ್ಯೆ ಶಾಂತಿಮಾತುಕತೆಗೆ ಶ್ರೀ ಎಂ ಅವರು ಮಧ್ಯಸ್ಥಿಕೆ ವಹಿಸಿದ್ದರು. ಸಿಪಿಎಂ ಮತ್ತು ಆರ್‌ಎಸ್‌ಎಸ್ ಕಾರ್ಯಕರ್ತರ ಹತ್ಯೆಗಳನ್ನು ನಿಲ್ಲಿಸುವ ಉದ್ದೇಶದಿಂದ ಈ ಶಾಂತಿ ಮಾತುಕತೆ ನಡೆಸಲಾಗಿತ್ತು. ಸಿಪಿಎಂ-ಆರ್‌ಎಸ್‌ಎಸ್-ಬಿಜೆಪಿ ಕೈಜೋಡಿಸುವಲ್ಲಿ ಶ್ರೀ ಎಂ ಅವರು ಮಧ್ಯಸ್ಥಿಕೆ ವಹಿಸಿದ್ದಾರೆ. ಹೀಗಾಗಿಯೇ ಸರ್ಕಾರ ಅವರಿಗೆ ಜಾಗವನ್ನು ಮಂಜೂರು ಮಾಡಿದೆ. ಆರ್‌ಎಸ್‌ಎಸ್‌ಗೆ ಹತ್ತಿರವಾಗುವ ಉದ್ದೇಶದಿಂದಲೇ ಸರ್ಕಾರ ಈ ಕ್ರಮ ತೆಗೆದುಕೊಂಡಿದೆ ಎಂದು ವಿರೋಧ ಪಕ್ಷದ ನಾಯಕ ರಮೇಶ್ ಚೆನ್ನಿತ್ತಲ ಆರೋಪಿಸಿದ್ದಾರೆ.

ಈ ಆರೋಪವನ್ನು ಸಿಪಿಎಂ ಅಲ್ಲಗಳೆದಿದೆ. ಶ್ರೀ ಎಂ ಅವರು ಸಹ ಈ ಆರೋಪವನ್ನು ನಿರಾಕರಿಸಿದ್ದಾರೆ.

ಕ್ರೈಸ್ತರ ಮತ ಸೆಳೆಯಲು ಆರ್‌ಎಸ್‌ಎಸ್-ಬಿಜೆಪಿ ತಂತ್ರ: ಕೇರಳದಲ್ಲಿ ಕ್ರೈಸ್ತರ ಮತಗಳನ್ನು ಸೆಳೆಯಲು ಆರ್‌ಎಸ್‌ಎಸ್-ಬಿಜೆಪಿ ಸಿದ್ಧತೆ ನಡೆಸಿವೆ. ಈ ಸಂಬಂಧ ಈಗಾಗಲೇ ಕೇರಳದ ಪ್ರಮುಖ ಚರ್ಚ್‌ಗಳ ಜತೆ ಆರ್‌ಎಸ್‌ಎಸ್-ಬಿಜೆಪಿ ನಾಯಕರು ಮಾತುಕತೆ ನಡೆಸಿದ್ದಾರೆ. ಮಲಂಕರ ಚರ್ಚ್, ಆರ್‌ಎಸ್‌ಎಸ್ ನಾಯಕರನ್ನು ಬುಧವಾರ ಮಾತುಕತೆಗೆ ಕರೆದಿತ್ತು.

ಜಾಗ ನೀಡಿ ಎಂದು ಶ್ರೀ ಎಂ ಅವರು ಮನವಿ ಮಾಡಿ ಒಂದು ತಿಂಗಳೂ ಕಳೆದಿಲ್ಲ. ಆದರೆ ಪಿಣರಾಯಿ ವಿಜಯನ್ ಅವರ ಸರ್ಕಾರವು ಅತ್ಯಂತ ಕ್ಷಿಪ್ರವಾಗಿ ಜಮೀನು ಮಂಜೂರು ಮಾಡಿದೆ
ವಿ.ಟಿ.ಬಲರಾಂ, ಕಾಂಗ್ರೆಸ್ ಶಾಸಕ

ಶ್ರೀ ಎಂ ಅವರೇ ಮಾತುಕತೆಯನ್ನು ಆರಂಭಿಸಿದ್ದರು. ಆರ್‌ಎಸ್‌ಎಸ್ ಮತ್ತು ಬಿಜೆಪಿ ಜತೆ ಕೈಜೋಡಿಸುವ ಮಾತುಕತೆಯಾಗಿರಲಿಲ್ಲ
ಪಿ.ಜಯರಾಜನ್, ಸಿಪಿಎಂ ಹಿರಿಯ ನಾಯಕ

ಆ ಮಾತುಕತೆಗಳಲ್ಲಿ ಯಾವುದೇ ರಾಜಕೀಯ ಕಾರ್ಯಸೂಚಿ ಇರಲಿಲ್ಲ, ಅದು ಶಾಂತಿ ಮಾತುಕತೆಯಾಗಿತ್ತು. ನಮಗೆ ಜಮೀನು ಮಂಜೂರು ಮಾಡುವಲ್ಲಿ ಯಾವುದೇ ರಾಜಕೀಯ ನಡೆದಿಲ್ಲ
ಶ್ರೀ ಎಂ, ಸತ್ಸಂಗ ಪ್ರತಿಷ್ಠಾನದ ಸಂಸ್ಥಾಪಕ

ಅಸ್ಸಾಂನಲ್ಲಿ ಕಾಂಗ್ರೆಸ್ ‘ಮಹಾ ಮೈತ್ರಿ’

ಪ್ರಜಾವಾಣಿ ವಾರ್ತೆ

ಗುವಾಹಟಿ: 2016ರಲ್ಲಿ ಅಸ್ಸಾಂನಲ್ಲಿ ಅಧಿಕಾರ ಹಿಡಿದ ಬಿಜೆಪಿಯನ್ನು ಶತಾಯಗತಾಯ ಸೋಲಿಸಬೇಕೆಂಬ ಉದ್ದೇಶದಿಂದ ಕಾಂಗ್ರೆಸ್ ರಾಜ್ಯದಲ್ಲಿ ಆರು ರಾಜಕೀಯ ಪಕ್ಷಗಳ ಜತೆಗೆ ಮೈತ್ರಿ ಮಾಡಿಕೊಂಡಿದೆ. ಬಿಜೆಪಿ ವಿರೋಧಿ ಎಲ್ಲಾ ಮತಗಳನ್ನು ಧ್ರುವೀಕರಣಗೊಳಿಸುವ ಪ್ರಯತ್ನ ಆರಂಭಿಸಿದೆ.

2005ರಿಂದಲೇ ತನ್ನ ವಿರೋಧಿಯಾಗಿದ್ದ, ಬದ್ರುದ್ದೀನ್ ಅಜ್ಮಲ್ ನೇತೃತ್ವದ ಎಐಯುಡಿಎಫ್ ಜತೆಗೆ ಮೈತ್ರಿ ಮಾಡಿಕೊಳ್ಳುವಲ್ಲಿ ಕಾಂಗ್ರೆಸ್ ಯಶಸ್ವಿಯಾಗಿದೆ. ಅದಲ್ಲದೆ, ಎಡಪಂಥೀಯ ಪಕ್ಷಗಳು ಹಾಗೂ ಇನ್ನೊಂದು ಪ್ರಾದೇಶಿಕ ಪಕ್ಷದ ಜತೆಗೆ ಮೈತ್ರಿ ಮಾಡಿಕೊಂಡು ‘ಮಹಾ ಮೈತ್ರಿ’ ರಚಿಸಿಕೊಂಡಿದೆ. ಇದಾದ ಬಳಿಕ, ಬೋಡೊಲ್ಯಾಂಡ್ ಪೀಪಲ್ಸ್ ಫ್ರಂಟ್ (ಬಿಪಿಎಫ್) ಅನ್ನೂ ಕೂಟದೊಳಕ್ಕೆ ಸೆಳೆದುಕೊಂಡಿದೆ.

ಕಾಂಗ್ರೆಸ್ ಜತೆಗಿನ 8 ವರ್ಷಗಳ ಮೈತ್ರಿಗೆ ಮಂಗಳ ಹಾಡಿದ್ದ ಬಿಪಿಎಫ್, 2016ರಲ್ಲಿ ಬಿಜೆಪಿ ಜತೆ ಕೈಜೋಡಿಸಿತ್ತು. ಬಿಜೆಪಿಯು ಈ ಬಾರಿ ಪ್ರಾದೇಶಿಕ ಪಕ್ಷಗಳಾದ ಎಜಿಪಿ ಹಾಗೂ ಯುಪಿಪಿಎಲ್‌ಗಳ ಜತೆ ಮೈತ್ರಿ ಮಾಡಿಕೊಂಡು ಕಣಕ್ಕಿಳಿದಿದೆ. ಬಿಜೆಪಿ ಮೈತ್ರಿಯ ಜತೆಗೆ ಕಾಂಗ್ರೆಸ್‌ನ ಮಹಾ ಮೈತ್ರಿಯು ಶಕ್ತಿಶಾಲಿಯಾಗಿ ಗೋಚರಿಸುತ್ತಿದ್ದರೂ, ಅಷ್ಟಕ್ಕೆ ಸಮಾಧಾನಗೊಳ್ಳದೆ, ಹೊಸ ಪಕ್ಷಗಳಾದ ಅಸ್ಸಾಂ ಜತಿಯಾ ಪರಿಷದ್ (ಎಜೆಪಿ) ಹಾಗೂ ಅಖಿಲ್ ಗೊಗೊಯಿ ನೇತೃತ್ವದ ರಾಯ್ಜೋರ್ ದಳವನ್ನೂ ಮೈತ್ರಿಯೊಳಗೆ ಸೇರಿಸುವ ಪ್ರಯತ್ನವನ್ನು ಮುಂದುವರಿಸಿದೆ. ‘ನಮ್ಮ ಮಹಾ ಮೈತ್ರಿಯು ಬಿಜೆಪಿಯನ್ನು ಸೋಲಿಸಿ ಅಸ್ಸಾಂನಲ್ಲಿ ಮುಂದಿನ ಸರ್ಕಾರವನ್ನು ರಚಿಸಲಿದೆ’ ಎಂಬ ವಿಶ್ವಾಸವನ್ನು ಎಐಸಿಸಿ ಕಾರ್ಯದರ್ಶಿ ಅನಿರುದ್ಧ್ ಸಿಂಗ್ ವ್ಯಕ್ತಪಡಿಸಿದ್ದಾರೆ.

ಮುಸ್ಲಿಂ ಮತಗಳ ಒಗ್ಗಟ್ಟು: ‘ಮಹಾ ಮೈತ್ರಿಯಲ್ಲಿ ಎಐಯುಡಿಎಫ್ ಸೇರಿಕೊಂಡಿರುವುದರಿಂದ ಮುಸ್ಲಿಂ ಮತಗಳು (ಸುಮಾರು ಶೇ 30ರಷ್ಟು) ವಿಭಜನೆಯಾಗುವುದು ತಪ್ಪಿದೆ. ಈ ಕಾರಣಕ್ಕಾಗಿಯೇ ಬಿಜೆಪಿಯು ಅಜ್ಮಲ್ ಅವರನ್ನು ‘ನುಸುಳುಕೋರರ ರಕ್ಷಕ’ ಎಂದು ಬಿಂಬಿಸುತ್ತಿದೆ’ ಎಂದು ಕಾಂಗ್ರೆಸ್ ಆರೋಪಿಸಿದೆ.

2016ರಲ್ಲಿ ಮುಸ್ಲಿಂ ಮತಗಳು ವಿಭಜನೆಯಾಗಿದ್ದರಿಂದ ಬಿಜೆಪಿಗೆ ಹಲವು ಕ್ಷೇತ್ರಗಳನ್ನು ಗೆಲ್ಲಲು ಸಾಧ್ಯವಾಗಿತ್ತು. ಕೆಲವು ಕ್ಷೇತ್ರಗಳಲ್ಲಿ ಎಡಪಕ್ಷಗಳ ಸ್ಪರ್ಧೆಯೂ ಬಿಜೆಪಿಗೆ ಸಹಾಯಕವಾಗಿತ್ತು. ಈ ಬಾರಿ ಮಹಾ ಮೈತ್ರಿಯು ಕಣಕ್ಕಿಳಿಸುವ ಅಭ್ಯರ್ಥಿಗಳ ಗೆಲುವು ಖಚಿತ ಎಂದು ಅಸ್ಸಾಂನ ಕಾಂಗ್ರೆಸ್ ಮುಖಂಡರು ಹೇಳುತ್ತಿದ್ದಾರೆ.

ಅಸ್ಮಿತೆಯ ಪ್ರಶ್ನೆ: ಅಸ್ಸಾಂನ ಅಸ್ಮಿತೆಯನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಈ ಬಾರಿ ಕಣಕ್ಕೆ ಇಳಿಯುತ್ತಿದೆ. 2014ರ ಲೋಕಸಭೆ ಹಾಗೂ 2016ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿಯು ಇದೇ ವಿಚಾರವನ್ನಿಟ್ಟುಕೊಂಡು ಸ್ಪರ್ಧಿಸಿತ್ತು. ‘ಬಾಂಗ್ಲಾದ ನುಸುಳುಕೋರರನ್ನು ತಡೆಯುವಲ್ಲಿ ಕಾಂಗ್ರೆಸ್ ವಿಫಲವಾಗಿದೆ. ವಿದೇಶಿ ನುಸುಳುಕೋರರ ಮತಗಳಿಂದ ಕಾಂಗ್ರೆಸ್ ಗೆಲ್ಲುತ್ತಾ ಬಂದಿದೆ’ ಎಂದು ಬಿಜೆಪಿ ಆರೋಪಿಸಿತ್ತು. ಈಗ ಅದೇ ವಿಚಾರವನ್ನಿಟ್ಟುಕೊಂಡು ಕಾಂಗ್ರೆಸ್ ಮತಯಾಚಿಸುತ್ತಿದೆ.

‘ಸಿಎಎ ಜಾರಿ ಮಾಡುವ ಮೂಲಕ ಬಾಂಗ್ಲಾದೇಶದ ಹಿಂದೂಗಳಿಗೆ ಪೌರತ್ವ ನೀಡಲು ಬಿಜೆಪಿ ಮುಂದಾಗಿದೆ. ಇದು ಅಸ್ಸಾಂನ ಅಸ್ಮಿತೆಗೆ ಧಕ್ಕೆ ಉಂಟುಮಾಡಲಿದೆ’ ಎಂದು ಪ್ರಿಯಾಂಕಾ ಗಾಂಧಿ ಈಚೆಗೆ ಚುನಾವಣಾ ರ‍್ಯಾಲಿಯೊಂದರಲ್ಲಿ ಹೇಳಿದ್ದಾರೆ.

ಬಿಪಿಎಫ್ ಸವಾಲು: ಈಚೆಗೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿಯು 2016ರಿಂದ ತನ್ನ ಮಿತ್ರಪಕ್ಷವಾಗಿದ್ದ ಬೋಡೊಲ್ಯಾಂಡ್ ಪೀಪಲ್ಸ್ ಫ್ರಂಟ್ ಅನ್ನು ದೂರವಿಟ್ಟಿತ್ತು. ಆ ಪಕ್ಷ ಈಗ ಮಹಾ ಮೈತ್ರಿಯಲ್ಲಿ ಸೇರಿಕೊಂಡಿದೆ. ‘2016ರ ಚುನಾವಣೆಯಲ್ಲಿ ಬೋಡೊಲ್ಯಾಂಡ್ ಪ್ರದೇಶದ ಹೊರಗೆ ಸುಮಾರು 12 ಸ್ಥಾನಗಳನ್ನು ಗೆಲ್ಲಲು ನಾನು ಬಿಜೆಪಿಗೆ ನೆರವಾಗಿದ್ದೆ. ಈ ಬಾರಿ ಆ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ನೆರವು ನೀಡುತ್ತೇನೆ’ ಎಂದು ಬಿಪಿಎಫ್ ಮುಖ್ಯಸ್ಥ ಹಗ್ರಾಮ ಹೇಳಿದ್ದಾರೆ.

ದಿನದ ಬೆಳವಣಿಗೆ

- ಪಶ್ಚಿಮ ಬಂಗಾಳದಲ್ಲಿ ನೀಡುತ್ತಿರುವ ಕೋವಿಡ್-19 ಲಸಿಕೆಗಳ ಬಾಟಲಿ, ಬಾಕ್ಸ್, ಲಸಿಕೆ ಪ್ರಮಾಣಪತ್ರ ಮತ್ತು ಬ್ಯಾನರ್‌ಗಳ ಮೇಲೆ ಪ್ರಧಾನಿ ನರೇಂದ್ರ ಮೋದಿ ಅವರ ಚಿತ್ರವಿದೆ. ಇದು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆ ಎಂದು ಟಿಎಂಸಿಯು ಚುನಾವಣಾ ಆಯೋಗಕ್ಕೆ ದೂರು ನೀಡಿದೆ. ಲಸಿಕೆ ಕಾರ್ಯಕ್ರಮವು ಚುನಾವಣೆ ಘೋಷಣೆಯಾಗುವುದಕ್ಕೆ ಮುನ್ನವೇ ಆರಂಭವಾಗಿದೆ. ಹೀಗಾಗಿ ಅದು ನೀತಿ ಸಂಹಿತೆಯ ಉಲ್ಲಂಘನೆ ಅಲ್ಲ ಎಂದು ಬಿಜೆಪಿ ಹೇಳಿದೆ
- ಮೊದಲ ಹಂತದಲ್ಲಿ ಚುನಾವಣೆ ಎದುರಿಸಲಿರುವ ರಾಜ್ಯಗಳಲ್ಲಿ ಅಭ್ಯರ್ಥಿಗಳನ್ನು ಅಂತಿಮಗೊಳಿಸಲು ಬಿಜೆಪಿ ಕಾರ್ಯಕಾರಿಣಿಯು ಗುರುವಾರ ಸಭೆ ನಡೆಸಲಿದೆ. ಮಾರ್ಚ್ 27ರಂದು ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ನಡೆಯಲಿರುವ ಮೊದಲ ಹಂತದ ಚುನಾವಣೆಗೆ ಅಭ್ಯರ್ಥಿಗಳನ್ನು ಈ ಸಭೆಯಲ್ಲಿ ಅಂತಿಮಗೊಳಿಸಲಾಗುತ್ತದೆ
- ಅಸ್ಸಾಂನ 47 ಕ್ಷೇತ್ರಗಳಿಗೆ ಮಾರ್ಚ್ 27ರಂದು ನಡೆಯಲಿರುವ ಮೊದಲ ಹಂತದ ಚುನಾವಣೆಗೆ ಅಧಿಸೂಚನೆ ಹೊರಡಿಸಿದ ಚುನಾವಣಾ ಆಯೋಗ. ಅಸ್ಸಾಂನ ಉತ್ತರ ಮತ್ತು ಈಶಾನ್ಯದ ಜಿಲ್ಲೆಗಳಲ್ಲಿ ಮತದಾನ ನಡೆಯಲಿದೆ. 80 ಲಕ್ಷಕ್ಕೂ ಹೆಚ್ಚು ಮತದಾರರು ಈ ಹಂತದಲ್ಲಿ ತಮ್ಮ ಹಕ್ಕು ಚಲಾಯಿಸಲಿದ್ದಾರೆ
- ಅಸ್ಸಾಂ ಚುನಾವಣೆಯಲ್ಲಿ ಮಿತ್ರಪಕ್ಷಗಳ ಜತೆ ಸೀಟು ಹಂಚಿಕೆ ಸಂಬಂಧ ಬಿಜೆಪಿ ನಾಯಕರು ಸಭೆ ನಡೆಸಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ದೆಹಲಿಯ ನಿವಾಸದಲ್ಲಿ ಸಭೆ ನಡೆದಿದೆ



ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೈಲಾಶ್ ವಿಜಯವರ್ಗೀಯ ರಾಜ್ಯ ಬಿಜೆಪಿ ಅಧ್ಯಕ್ಷ ದಿಲೀಪ್ ಘೋಷ್, ರಾಷ್ಟ್ರೀಯ ಉಪಾಧ್ಯಕ್ಷ ಮುಕುಲ್ ರಾಯ್ ಅವರು ಕೋಲ್ಕತ್ತದಲ್ಲಿ ಬುಧವಾರ ಸಭೆ ನಡೆಸಿದರು

ಜಾರಕಿಹೊಳಿ ರಾಜೀನಾಮೆ

ಒಂದನೇ ಪುಟದಿಂದ...

ಬಾಲಚಂದ್ರ ಜಾರಕಿಹೊಳಿ ಅವರನ್ನು ತಮ್ಮ ನಿವಾಸಕ್ಕೆ ಕರೆಸಿಕೊಂಡ ಯಡಿಯೂರಪ್ಪ, ರಮೇಶ ಅವರ ರಾಜೀನಾಮೆಗೆ ಸೂಚಿಸಿದರು ಎಂದು ಮೂಲಗಳು ತಿಳಿಸಿವೆ.

ಬಳಿಕ ರಮೇಶ ಜಾರಕಿಹೊಳಿ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುತ್ತಿರುವುದಾಗಿ ಮುಖ್ಯಮಂತ್ರಿಗೆ ಪತ್ರ ರವಾನಿಸಿದರು. ಅದನ್ನು ಸ್ವೀಕರಿಸಿದ ಯಡಿಯೂರಪ್ಪ, ತಕ್ಷಣವೇ ರಾಜ್ಯಪಾಲರಿಗೆ ಕಳುಹಿಸಿದರು. ರಾಜ್ಯಪಾಲ ವಜುಭಾಯಿ ವಾಲಾ ಅವರು ರಮೇಶ ಅವರ ರಾಜೀನಾಮೆಯನ್ನು ಅಂಗೀಕರಿಸಿ ಅಧಿಸೂಚನೆ ಹೊರಡಿಸಿದರು.

‘ರಾಜೀನಾಮೆ ನೀಡುವ ಸಂದರ್ಭದಲ್ಲಿ ರಮೇಶ ಜಾರಕಿಹೊಳಿ ಯಾವುದೇ ಬೇಡಿಕೆಗಳನ್ನು ಇಟ್ಟಿಲ್ಲ. ಮತ್ತೆ ಸಚಿವ ಸ್ಥಾನ ನೀಡಬೇಕು ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಒತ್ತಾಯಿಸಿದ್ದಾರೆ ಎಂಬುದರಲ್ಲಿ ಯಾವುದೇ ಹುರುಳಿಲ್ಲ’ ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ಸ್ಪಷ್ಟಪಡಿಸಿವೆ.

ಗುರುವಾರದಿಂದ ವಿಧಾನಮಂಡಲ ಅಧಿವೇಶನ ಆರಂಭವಾಗಲಿದ್ದು, ಒಂದು ವೇಳೆ ರಮೇಶ ಜಾರಕಿಹೊಳಿ ರಾಜೀನಾಮೆ ನೀಡದೇ ಇದ್ದಲ್ಲಿ, ವಿರೋಧಪಕ್ಷಗಳು ಭಾರಿ ಗದ್ದಲ ಎಬ್ಬಿಸುವ ಸಾಧ್ಯತೆ ಇತ್ತು. ಅದಕ್ಕಾಗಿ ಕಾಂಗ್ರೆಸ್ ಪಕ್ಷ ತಯಾರಿ ನಡೆಸಿಕೊಂಡಿತ್ತು.

‘ಜನಧ್ವನಿ’ಯಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ಧರಾಮಯ್ಯ ಕಿಡಿ

‘ಇಂಥಾ ಮಾನಗೆಟ್ಟ ಸರ್ಕಾರ ಬೇಕಾ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆ ಸಚಿವ (ರಮೇಶ ಜಾರಕಿಹೊಳಿ) ರಾಜೀನಾಮೆ ಕೊಟ್ಟಿದ್ದಾನಂತೆ. ಆದರೆ, ಆತನ ಸಹೋದರ ಮುಖ್ಯಮಂತ್ರಿ ಬಳಿ ನಮ್ಮ ಅಣ್ಣನ ರಾಜೀನಾಮೆ ಪಡೆದುಕೊಂಡ್ರೆ ನಿಮ್ಮ ಸಿ.ಡಿ ರಿಲೀಸ್ ಮಾಡ್ತೀನಿ ಎಂದು ಹೇಳ್ತಾನಂತೆ. ಇಂಥ ಮಾನಗೆಟ್ಟ ಸರ್ಕಾರ ಬೇಕಾ?’ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ಧರಾಮಯ್ಯ ಆಕ್ರೋಶ ಹೊರಹಾಕಿದರು.

ದೇವನಹಳ್ಳಿಯಲ್ಲಿ ನಡೆದ ಕಾಂಗ್ರೆಸ್ ‘ಜನಧ್ವನಿ’ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಅದನ್ನು (ಸಿ.ಡಿ) ನೋಡೋಕೆ ನನಗೆ ಅಸಹ್ಯವಾಗುತ್ತದೆ. ಹೇಳುವುದಕ್ಕೂ ನಾಚಿಕೆಯಾಗುತ್ತದೆ. ಈಗ ಆ ಸಚಿವ ರಾಜೀನಾಮೆ ಕೊಟ್ಟಿದ್ದಾನಂತೆ’ ಎಂದರು.

ಇದೇ ವೇಳೆ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ ಅವರು, ‘ಬಡವರಿಂದ ಸುಲಿಗೆ ಮಾಡುತ್ತಿರುವ ಬಿಜೆಪಿ ಸರ್ಕಾರಕ್ಕೆ ಬಡವರ ಮೇಲೆ ಕಾಳಜಿ ಇಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಪ್ರತಿಯೊಬ್ಬರಿಗೂ 10 ಕೆ.ಜಿ ಅಕ್ಕಿ ಕೊಡುತ್ತೇವೆ’ ಎಂದರು.

‘ಸರ್ಕಾರದಲ್ಲಿ ಭ್ರಷ್ಟಾಚಾರ ಮುಗಿಲು ಮುಟ್ಟಿದೆ. ಇಬ್ಬರು ಮುಖ್ಯಮಂತ್ರಿಗಳನ್ನಿಟ್ಟುಕೊಂಡು ಸರ್ಕಾರ ನಡೆಸಲಾಗುತ್ತಿದೆ. ಒಬ್ಬ ಯಡಿಯೂರಪ್ಪ, ಮತ್ತೊಬ್ಬ ವಿಜಯೇಂದ್ರ’ ಎಂದೂ ವ್ಯಂಗ್ಯವಾಡಿದರು.

ಕಾಂಗ್ರೆಸ್‌ನಿಂದ ‘ಜನಧ್ವನಿ’: ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳ ಜನ ವಿರೋಧಿ ನೀತಿಗಳ ಬಗ್ಗೆ ಜನಾಭಿಪ್ರಾಯ ರೂಪಿಸಿ, ರಾಜ್ಯದಲ್ಲಿ ಪಕ್ಷದ ಬಲವರ್ಧನೆಗೆ ಮುಂದಾಗಿರುವ ಕೆಪಿಸಿಸಿ, ಪಕ್ಷದ ಶಾಸಕರು ಇಲ್ಲದ ವಿಧಾನಸಭಾ ಕ್ಷೇತ್ರಗಳಲ್ಲಿ ಬುಧವಾರದಿಂದ (ಮಾರ್ಚ್ 3) ‘ಜನ ಧ್ವನಿ’ ಜಾಥಾ ಹಮ್ಮಿಕೊಂಡಿದೆ. ಬೆಂಗಳೂರು ಗ್ರಾಮಾಂತರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ವ್ಯಾಪ್ತಿಯಲ್ಲಿ ಬುಧವಾರ ಜಾಥಾ ನಡೆಯಿತು.

ಕ್ವೀನ್ಸ್ ರಸ್ತೆಯಲ್ಲಿರುವ ಕೆಪಿಸಿಸಿ ಕಚೇರಿ ಮುಂಭಾಗದಲ್ಲಿ ಬೆಳಿಗ್ಗೆ ಜಾಥಾಕ್ಕೆ ಚಾಲನೆ ನೀಡಲಾಯಿತು. ಈ ವೇಳೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್, ಈಶ್ವರ ಖಂಡ್ರೆ, ರಾಮಲಿಂಗಾರೆಡ್ಡಿ, ಧ್ರುನಾರಾಯಣ್ ಇದ್ದರು. ಆದರೆ, ಇನ್ನೊಬ್ಬ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ಗೈರಾದರು.

ಬಳಿಕ ವಿಶೇಷ ವಾಹನದಲ್ಲಿ ಕಾಂಗ್ರೆಸ್ ನಾಯಕರು ದೇವನಹಳ್ಳಿಗೆ ಪ್ರಯಾಣ ಬೆಳೆಸಿದರು. ಅಲ್ಲಿ ಮೆರವಣಿಗೆ ಮೂಲಕ ಜನನಿಬಿಡ ಪ್ರದೇಶದಲ್ಲಿ ಸಾಗಿದರು. ಮಧ್ಯಾಹ್ನ 3 ಗಂಟೆಗೆ ಚಿಕ್ಕಬಳ್ಳಾಪುರದಲ್ಲಿ ಜನಜಾಗೃತಿ ಜಾಥಾ ನಡೆಸಿದರು. ಕಾರ್ಯಕ್ರಮಕ್ಕೆ ವಿಶೇಷ ಕಳೆ ನೀಡಲು ಡೊಳ್ಳು ಕುಣಿತ ಸೇರಿದಂತೆ ಹಲವು ಜನಪದ ಕಲೆಗಳ ಪ್ರದರ್ಶನವೂ ಇತ್ತು.

ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ನೀಡಿದ್ದ ಭರವಸೆ ಈಡೇರಿಸಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಸಂಪೂರ್ಣ ವಿಫಲವಾಗಿದೆ
ಸಿದ್ದರಾಮಯ್ಯ, ವಿಧಾನಸಭಾ ವಿರೋಧ ಪಕ್ಷದ ನಾಯಕ

ಜನರ ನಡುವೆ ಇರಬೇಕು. ಜನರ ಭಾವನೆ ತಿಳಿಯಬೇಕು. ಅವರ ಬದುಕು ಉಳಿಸಬೇಕು ಎನ್ನುವ ಕಾರಣಕ್ಕೆ ಜನಧ್ವನಿ ಯಾತ್ರೆ ಹಮ್ಮಿಕೊಂಡಿದ್ದೇವೆ
ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ



ಬೆಂಗಳೂರಿನಿಂದ ಹೊರಟ ‘ಜನಧ್ವನಿ ಜಾಥಾ’. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ವಾಹನದಲ್ಲಿದ್ದಾರೆ –ಪ್ರಜಾವಾಣಿ ಚಿತ್ರ

‘ಸರ್ಕಾರದ ಜತೆ ಭಿನ್ನಮತ ದೇಶದ್ರೋಹ ಅಲ್ಲ’

ನವದೆಹಲಿ: ಸರ್ಕಾರದ ಜತೆ ಭಿನ್ನಮತ ಹೊಂದುವುದು ದೇಶದ್ರೋಹ ಅಲ್ಲ ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ಕಾಶ್ಮೀರದ ವಿಶೇಷಾಧಿಕಾರ ರದ್ದತಿಗೆ ಸಂಬಂಧಿಸಿದಂತೆ ಎನ್‌ಸಿ ಮುಖ್ಯಸ್ಥ ಫಾರೂಕ್ ಅಬ್ದುಲ್ಲಾ ನೀಡಿದ್ದ ಹೇಳಿಕೆಯ ವಿರುದ್ಧ ಸಲ್ಲಿಕೆಯಾಗಿದ್ದ ದೂರನ್ನು ಕೋರ್ಟ್ ವಜಾ ಮಾಡಿದೆ.

ಭಿನ್ನಾಭಿಪ್ರಾಯವನ್ನು ದೇಶದ್ರೋಹ ಎಂದು ಕರೆಯಲಾಗದು ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಹೇಮಂತ್ ಗುಪ್ತಾ ಅವರ ನ್ಯಾಯಪೀಠ ಹೇಳಿತು. 370ನೇ ವಿಧಿಯನ್ನು ಮರುಸ್ಥಾಪಿಸಲು ಅಬ್ದುಲ್ಲಾ ಅವರು ಪಾಕಿಸ್ತಾನ ಮತ್ತು ಚೀನಾದ ಸಹಾಯವನ್ನು ಕೋರಿದ್ದಾರೆ ಎಂಬ ಆರೋಪವನ್ನು ದೃಢೀಕರಿಸಲು ವಿಫಲವಾದ ಅರ್ಜಿದಾರ ರಜತ್ ಶರ್ಮಾ ಅವರ ಮೇಲೆ ನ್ಯಾಯಾಲಯವು ₹50,000 ದಂಡ ವಿಧಿಸಿತು.

ಸಂವಿಧಾನದ 370ನೇ ವಿಧಿಯನ್ನು ಚೀನಾದ ಸಹಾಯದಿಂದ ಕಾಶ್ಮೀರ ಕಣಿವೆಯಲ್ಲಿ ಪುನಃಸ್ಥಾಪಿಸಲಾಗುವುದು ಎಂದು ಫಾರೂಕ್ ಅಬ್ದುಲ್ಲಾ ಅವರು ಸಂದರ್ಶನವೊಂದರಲ್ಲಿ ಹೇಳಿದ್ದರು ಎಂದು ವರದಿಯಾಗಿತ್ತು.



ಸುಭಾಷಿತ

ನಡೆದಷ್ಟೂ ದಾರಿ ಇದೆ, ಪಡೆದಷ್ಟೂ ಭಾಗ್ಯವಿದೆ- ಇದೇ ಜಗತ್ತು ನಮಗೆ ನೀಡುವ ಸಂದೇಶ.

-ವಿ.ಕೃ.ಗೋಕಾಕ್

ರಮೇಶ ಜಾರಕಿಹೊಳಿ ಪ್ರಕರಣ ಸಮಗ್ರ ತನಿಖೆಗೆ ಆದೇಶಿಸಿ

ಕೆಲಸ ಕೊಡಿಸುವ ಆಮಿಷವೊಡ್ಡಿ ಒಬ್ಬ ಯುವತಿಯನ್ನು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂಬ ಗಂಭೀರ ಆರೋಪದ ಹಿನ್ನೆಲೆಯಲ್ಲಿ ರಾಜ್ಯ ಜಲಸಂಪನ್ಮೂಲ ಸಚಿವ ರಮೇಶ ಜಾರಕಿಹೊಳಿ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದ ಆಡಿಯೊ ಮತ್ತು ವಿಡಿಯೊ ತುಣುಕುಗಳು ಮಂಗಳವಾರ ದೃಶ್ಯಮಾಧ್ಯಮಗಳಲ್ಲಿ ಪ್ರಸಾರವಾದ ಪರಿಣಾಮವಾಗಿ ರಾಜ್ಯ ರಾಜಕಾರಣದಲ್ಲಿ ಕೋಲಾಹಲ ಉಂಟಾಗಿತ್ತು. ಸಿ.ಡಿ.ಯಲ್ಲಿ ಅಸಭ್ಯ ಸಂಭಾಷಣೆ ಮತ್ತು ದೃಶ್ಯಗಳಿವೆ. ಸಂತ್ರಸ್ತೆಯ ಪರವಾಗಿ ಸಾಮಾಜಿಕ ಕಾರ್ಯಕರ್ತರೊಬ್ಬರು ಇದಕ್ಕೆ ಸಂಬಂಧಿಸಿ ಬೆಂಗಳೂರಿನ ಪೊಲೀಸ್ ಠಾಣೆಯೊಂದರಲ್ಲಿ ದೂರು ನೀಡಿದ್ದಾರೆ. 'ನಾನು ತಪ್ಪು ಮಾಡಿಲ್ಲ. ರಾಜೀನಾಮೆ ಕೊಡುವ ಪ್ರಶ್ನೆಯೇ ಇಲ್ಲ' ಎಂದು ಮಂಗಳವಾರ ರಾತ್ರಿ ಹೇಳಿದ್ದ ಸಚಿವರು, ವಿರೋಧ ಪಕ್ಷಗಳ ಮತ್ತು ಸ್ವಪಕ್ಷೀಯರ ಒತ್ತಡಕ್ಕೆ ಮಣಿದು ಬುಧವಾರ ಬೆಳಿಗ್ಗೆ ರಾಜೀನಾಮೆ ನೀಡಿದ್ದಾರೆ. ರಾಜೀನಾಮೆ ನೀಡುವ ಮೂಲಕ, ಅವರು ಪಕ್ಷಕ್ಕೆ ಹಾಗೂ ಸರ್ಕಾರಕ್ಕೆ ಇನ್ನೂ ಹೆಚ್ಚಿಗೆ ಆಗಬಹುದಾಗಿದ್ದ ಮುಜುಗರವನ್ನು ತಪ್ಪಿಸಿದ್ದಾರೆ. ವಿರೋಧ ಪಕ್ಷಗಳಿಗೆ ಈ ಪ್ರಕರಣವು ದೊಡ್ಡ ಅಸ್ತ್ರವಾಗಿ ಒದಗಿಬಂದಿತ್ತು. ವಿಧಾನಮಂಡಲದ ಅಧಿವೇಶನ ಗುರುವಾರದಿಂದ ಆರಂಭವಾಗಲಿದೆ. ಅಲ್ಲಿ ಆಡಳಿತಾರೂಢ ಪಕ್ಷವು ಮುಖ ಮುಚ್ಚಿಕೊಳ್ಳಬೇಕಾದ ಪರಿಸ್ಥಿತಿ ಎದುರಾಗುತ್ತಿತ್ತು. ರಾಜೀನಾಮೆಯಿಂದಾಗಿ ಇಕ್ಕಟ್ಟಿನ ಸ್ಥಿತಿ ತುಸು ಸಡಿಲವಾಗಬಹುದು. ಆದರೆ, ರಾಜೀನಾಮೆಯಿಂದ ಈ ಪ್ರಕರಣಕ್ಕೆ ತಾರ್ಕಿಕ ಅಂತ್ಯ ದೊರೆತಂತಾಗದು. 'ಇದು ನನ್ನ ವ್ಯಕ್ತಿತ್ವಕ್ಕೆ ಮಸಿ ಬಳಿಯಲು ರಾಜಕೀಯ ವಿರೋಧಿಗಳು ಮಾಡಿರುವ ಪಿತೂರಿ. ಯಾವುದೋ ವಿಡಿಯೊ ಮತ್ತು ಆಡಿಯೊ ವಿರೂಪಗೊಳಿಸಿ ನನ್ನ ತೇಜೋವಧೆ ಮಾಡಲಾಗಿದೆ. ಈ ಬಗ್ಗೆ ಸಿಐಡಿ ಅಥವಾ ಸಿಬಿಐ ತನಿಖೆ ನಡೆಸಬೇಕು' ಎಂದು ರಮೇಶ ಜಾರಕಿಹೊಳಿ ಮಂಗಳವಾರ ಹೇಳಿರುವ ಮಾತಿಗೆ ಬದ್ಧರಾಗಿರಬೇಕು. ಈ ಪ್ರಕರಣದ ಸಮಗ್ರ ತನಿಖೆಗೆ ಸರ್ಕಾರ ಆದೇಶಿಸಬೇಕು.



ಈ ಪ್ರಕರಣದಲ್ಲಿ ಗೊಂದಲ, ಅನುಮಾನ ಕೊನೆಗೊಳಿಸಲು ಸರ್ಕಾರವು ಉನ್ನತ ಮಟ್ಟದ ತನಿಖೆ ನಡೆಸಬೇಕು. ತನಿಖೆಗೆ ಕಾಲಮಿತಿ ನಿಗದಿಗೊಳಿಸಬೇಕು. ವರದಿ ಪಡೆದು ಸತ್ಯಾಂಶವನ್ನು ಜನರ ಮುಂದಿಡಬೇಕು

ಸಚಿವರು, ಶಾಸಕರು ಹೀಗೆ ಲೈಂಗಿಕ ಹಗರಣಗಳಲ್ಲಿ ಸಿಕ್ಕಿಬೀಳುವುದು, ಆ ಬಳಿಕ ರಾಜೀನಾಮೆ ಕೊಡುವುದು ಇದು ಮೊದಲೇನೂ ಅಲ್ಲ. ತಮ್ಮದು ಶಿಸ್ತಿನ ಪಕ್ಷ ಎಂದು ಹೇಳಿಕೊಳ್ಳುವ ಬಿಜೆಪಿ ವರಿಷ್ಠರಿಗೆ ಈಗಿನ ಪ್ರಕರಣ ನುಂಗಲಾರದ ತುತ್ತಾಗಿರುವುದು ಸುಳ್ಳೇನೂ ಅಲ್ಲ. ಸದನದಲ್ಲಿ ಮೊಬೈಲ್ ಫೋನ್‌ನಲ್ಲಿ ಕಾಮಪ್ರಚೋದಕ ದೃಶ್ಯಗಳಿದ್ದ ವಿಡಿಯೊ ನೋಡಿದ ಆರೋಪದಡಿ, ದೂರವಾಣಿಯಲ್ಲಿ ಮಹಿಳೆಯೊಬ್ಬರ ಜೊತೆಗೆ ಲೈಂಗಿಕತೆಗೆ ಸಂಬಂಧಿಸಿದ ಸಂಭಾಷಣೆ ನಡೆಸಿದ ಹಾಗೂ ಮಹಿಳೆಯೊಬ್ಬರ ಜೊತೆ ವಿವಾಹೇತರ ಸಂಬಂಧ ಹೊಂದಿದ್ದ ಆರೋಪ ಹೊತ್ತು ಸಚಿವರು, ಜನಪ್ರತಿನಿಧಿಗಳು ರಾಜೀನಾಮೆ ನೀಡಿದ ಉದಾಹರಣೆಗಳಿವೆ. ಕೆಲವರು ತನಿಖೆಯ ಬಳಿಕ ಆರೋಪಮುಕ್ತರಾಗಿ ಮತ್ತೆ ಅಧಿಕಾರಕ್ಕೆ ಬಂದ ಉದಾಹರಣೆಯೂ ಇದೆ. ರಮೇಶ ಜಾರಕಿಹೊಳಿ ಮೇಲೆ ಬಂದಿರುವ ಈ ಆರೋಪ 'ಹನಿಟ್ರ್ಯಾಪ್' ಪ್ರಕರಣ ಎಂಬ ವಾದವೂ ಇದೆ. 'ಈ ರೀತಿ ಮಾಧ್ಯಮಗಳಲ್ಲಿ ವಿಡಿಯೊಗಳನ್ನು ಹರಿಬಿಟ್ಟು ಜನಪ್ರತಿನಿಧಿಗಳ ತೇಜೋವಧೆ ನಡೆಸುವ ಪ್ರಯತ್ನಗಳು ಹೆಚ್ಚಾಗುತ್ತಿವೆ. ಇಂಥವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂಬ ಮಾತು ಕೂಡ ಇದೆ. ಇಂತಹ ಗೊಂದಲ, ಅನುಮಾನ ಕೊನೆಗೊಳಿಸಲು ಸರ್ಕಾರವು ಉನ್ನತ ಮಟ್ಟದ ತನಿಖೆ ನಡೆಸಬೇಕು. ತನಿಖೆಯನ್ನು ವೃಥಾ ವಿಳಂಬ ಮಾಡದೆ ಕಾಲಮಿತಿಯಲ್ಲಿ ಪೂರ್ಣಗೊಳಿಸಿ ವರದಿಯನ್ನು ಪಡೆಯಬೇಕು. ತನಿಖೆಯು ಪ್ರಕರಣಗಳನ್ನು ಮುಚ್ಚಿಹಾಕುವ ಸಾಧನ ಕೂಡ ಆಗಬಾರದು. ಸಾರ್ವಜನಿಕ ಜೀವನದಲ್ಲಿ ಇರುವವರು ವೈಯಕ್ತಿಕ ಚಾರಿತ್ರ್ಯ ಮತ್ತು ನಡವಳಿಕೆಗಳ ಬಗ್ಗೆ ಎಚ್ಚರದಿಂದ ಇರಬೇಕು. ನೈತಿಕವಾಗಿ ಅವರು ಸಮಾಜಕ್ಕೆ ಮಾದರಿ ಆಗಿರಬೇಕು ಎಂದು ಸಾರ್ವಜನಿಕರು ಬಯಸುವುದರಲ್ಲಿ ತಪ್ಪೇನಿಲ್ಲ. ಸಂಪೂರ್ಣ ಸತ್ಯ ಜನರಿಗೆ ತಿಳಿಯಬೇಕು. ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ಆಗಬೇಕು. ಇದೊಂದು 'ಹನಿಟ್ರ್ಯಾಪ್' ಪ್ರಕರಣ ಎಂದಾದಲ್ಲಿ, ಅದರ ಹಿಂದಿರುವ ವ್ಯಕ್ತಿಗಳು ಯಾರು, ಅವರ ಉದ್ದೇಶ ಏನಿತ್ತು ಎಂಬುದು ಬಹಿರಂಗವಾಗಬೇಕು. ರಮೇಶ ಅವರು ಅಧಿಕಾರಾರೂಢ ಪಕ್ಷದ ಜೊತೆ ಇರುವವರು. ಈ ಪ್ರಕರಣದ ತನಿಖೆಯ ಸಂದರ್ಭದಲ್ಲಿ ತನಿಖಾಧಿಕಾರಿಗಳು ಮುಕ್ತವಾಗಿ ಕೆಲಸ ನಿರ್ವಹಿಸುವಂತಹ ವಾತಾವರಣ ಸೃಷ್ಟಿಸಿಕೊಡುವ ಹೊಣೆ ಸರ್ಕಾರದ್ದು.

ದಿನದ ಟ್ವೀಟ್

ಉತ್ತಮ ನಡತೆ ರೂಪಿಸಿಕೊಳ್ಳಿ



ನಮ್ಮ ಸುತ್ತಮುತ್ತ ನಡೆಯುತ್ತಿರುವುದನ್ನು ಓದುತ್ತಿದ್ದೇವೆ ಮತ್ತು ಕೇಳುತ್ತಿದ್ದೇವೆ. ಇದನ್ನೆಲ್ಲ ನೋಡಿದಾಗ ನಾನು ನಿಮಗೆ ಹೇಳುವುದಿಷ್ಟೆ: ಹುಡುಗಿಯೊಬ್ಬಳು ಕತ್ತಲ ಕೋಣೆಯಲ್ಲಿ ಸಹ ನಿಮ್ಮೊಂದಿಗೆ ಸುರಕ್ಷಿತ ಭಾವದಿಂದ ಇರುವಂತಹ ರೀತಿಯಲ್ಲಿ ನಿಮ್ಮ ನಡತೆಯನ್ನು ರೂಪಿಸಿಕೊಳ್ಳಿ.

ಸಿದ್ಧಾರ್ಥ್ ಶುಕ್ಲಾ, ನಟ, ರೂಪದರ್ಶಿ

25 ವರ್ಷಗಳ ಹಿಂದೆ

ಸೋಮವಾರ, 4-3-1996

- **ಕ್ರಿಕೆಟ್ ಪ್ರೇಮಿಗಳಿಗೆ ಪೊಲೀಸ್ ಲಾಠಿ**

ಬೆಂಗಳೂರು, ಮಾರ್ಚ್ 3– ಕಂಬಳಿ ಹೊದಿಕೆ ಹೊದ್ದು ರಾತ್ರಿಯಿಂದಲೇ ರಸ್ತೆಯ ಮಗ್ಗುಲಿನಲ್ಲಿ ಬೀಡು ಬಿಟ್ಟಿದ್ದ ಸಹಸ್ರಾರು ಕ್ರಿಕೆಟ್ ಪ್ರೇಮಿಗಳು ಟಿಕೆಟ್ ಸಿಗದೆ ನಿರಾಶರಾದರು. ತಮಗಾದ ಅನ್ಯಾಯವನ್ನು ಪ್ರತಿಭಟಿಸಿ ನೂರಾರು ಜನ ಕಬ್ಬಿಣದ ಗೇಟುಗಳನ್ನು ಮುರಿದು ಕ್ರೀಡಾಂಗಣದ ಒಳಗೆ ನುಗ್ಗಿದರು. ಉದ್ರಿಕ್ತ ಕ್ರಿಕೆಟ್ ಪ್ರೇಮಿಗಳನ್ನು ನಿಯಂತ್ರಿಸಲು ಪೊಲೀಸರು ಲಾಠಿ ಪ್ರಹಾರ ಮಾಡಿದರು.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಇಂದು ರಣರಂಗವಾಗಿತ್ತು. ಮುಂದಿನ ಶನಿವಾರ ಇಲ್ಲಿ ನಡೆಯಲಿರುವ ವಿಲ್ಸ್ ವಿಶ್ವಕಪ್ ಒಂದು ದಿನದ ಕ್ರಿಕೆಟ್ ಪಂದ್ಯದಲ್ಲಿ ಭಾರತ–ಪಾಕಿಸ್ತಾನ ತಂಡಗಳು ಆಡುವುದು ಬಹುತೇಕ ಖಚಿತವಾಗಿದೆ. ಅದರಿಂದಾಗಿ ಟಿಕೆಟ್‌ಗಳಿಗೆ ಬೇಡಿಕೆ ಹೆಚ್ಚಿತ್ತು.

- **ಜನತಾದಳ ಲಿಂಗಾಯತ ಶಾಸಕರ ಅಸಮಾಧಾನ**

ಬೆಂಗಳೂರು, ಮಾರ್ಚ್ 3– ಸರ್ಕಾರದಲ್ಲಿ ತಮಗೆ ಸೂಕ್ತ ಸ್ಥಾನಮಾನ ದೊರಕುತ್ತಿಲ್ಲ, ಉದ್ದೇಶಪೂರ್ವಕವಾಗಿ ತಮ್ಮನ್ನು ನಿರ್ಲಕ್ಷಿಸುತ್ತಿದ್ದಾರೆ ಎಂಬ ದೂರುಗಳು ಈಚೆಗೆ ನಗರದಲ್ಲಿ ನಡೆದ ಜನತಾದಳದ ಲಿಂಗಾಯತ ಶಾಸಕರ ಸಭೆಯಲ್ಲಿ ಕೇಳಿ ಬಂದವು.

ಈ ಸರ್ಕಾರ ತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಪ್ರತಿಯೊಂದು ಹಂತದಲ್ಲಿಯೂ ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ತರುವಂಥ ಘಟನೆಗಳು ಆಡಳಿತದಲ್ಲಿ ನಡೆಯುತ್ತಿವೆ ಎಂದೂ ಆಡಳಿತ ಪಕ್ಷದ ಶಾಸಕರು ಆಕ್ರೋಶ ವ್ಯಕ್ತಪಡಿಸಿದರು ಎನ್ನಲಾಗಿದೆ.

50 ವರ್ಷಗಳ ಹಿಂದೆ

ಗುರುವಾರ, 4-3-1971

- **ಗಾಳಿ ಎಷ್ಟು, ಗಟ್ಟಿ ಮತವೆಷ್ಟು? ಸಾಕ್ಷಾತ್ ಸಮೀಕ್ಷೆ ಸಮಾರೋಪ**

(ಎಸ್.ವಿ.ಜಯಶೀಲ ರಾವ್)

ಬೆಂಗಳೂರು, ಮಾರ್ಚ್ 3– ಲೋಕಸಭಾ ಚುನಾವಣೆಯ ಮಹಾ ಕಾಳಗದಲ್ಲಿ ಬೀಸುತ್ತಿರುವ 'ಇಂದಿರಾ ಗಾಳಿ' ತನ್ನ ಒಲವಿಗೆ ಸಿಕ್ಕಿರುವ ಮತದಾರರನ್ನು ಸಾಕಷ್ಟು ಸಂಖ್ಯೆಯಲ್ಲಿ ಮತಗಟ್ಟೆಗಳಿಗೆ ಕೊಂಡೊಯ್ದಲ್ಲಿ, ಮೈತ್ರಿಕೂಟದ ಪ್ರಬಲ ಶಕ್ತಿಯನ್ನು ವಿರೋಧಿಸುತ್ತಿರುವ ಆಡಳಿತ ಕಾಂಗ್ರೆಸ್, ಬಹುಮತ ಪಡೆಯುವ ಸಂಭವವಿದೆ.

ಆಡಳಿತ ಕಾಂಗ್ರೆಸ್ ಪರ ಎದ್ದಿರುವ ಅಲೆಯನ್ನು, ರಾಜ್ಯದ 27 ಲೋಕಸಭೆ ಕ್ಷೇತ್ರಗಳಲ್ಲಿ ಗುರುವಾರ 13 ಕ್ಷೇತ್ರಗಳಲ್ಲಿ ಮತದಾನ ಆರಂಭವಾಗುವ ಮುನ್ನ ತಡೆದು ಹಿಂದಕ್ಕೆ ತಳ್ಳಲಾಗಿದೆಯೆಂಬ ವಿಶ್ವಾಸ ಹಾಗೂ ಸಮಾಧಾನ ಮೈತ್ರಿಕೂಟಕ್ಕಿದೆ.

ಆಡಳಿತ ಕಾಂಗ್ರೆಸ್ಸಿಗೆ ಬದಲಾಗಿ ಬಹುಮತದ ಜಯ ತಮಗೆ ಲಭಿಸುವುದೆಂದೂ ಮೈತ್ರಿಕೂಟ ಹೇಳುತ್ತಿದೆ.

- **ನಗರದಲ್ಲೂ ಚಿಲ್ಲರೆಗೆ ಬರ**

ಬೆಂಗಳೂರು, ಮಾರ್ಚ್ 3– 'ದಯವಿಟ್ಟು ಚಿಲ್ಲರೆ ಕೊಡಿ'– ನಗರದ ಅನೇಕ ಅಂಗಡಿಗಳಲ್ಲಿ, ಹೋಟೆಲುಗಳಲ್ಲಿ ಎದ್ದು ಕಾಣುವ ಬೋರ್ಡು ಇದು. ಹಿಂದೊಮ್ಮೆ ಬಂದ ಗಿರಾಕಿಯನ್ನು ಏನೂ ಕೊಳ್ಳದೆ ಹೋಗದಂತೆ ಮಾಡುತ್ತಿದ್ದ ಚಾಕಚಕ್ಯತೆ, ಚಾತುರ್ಯ ಮಾಯ. ಕಾರಣ ಇದ್ದಕ್ಕಿದ್ದಂತೆ ವಹಿವಾಟಿನಿಂದ ಚಿಲ್ಲರೆ ಮಾಯ.

ಅಂಗಡಿ, ಹೋಟೆಲುಗಳ ಗಲ್ಲಾದಲ್ಲಿ ತುಂಬಿರುತ್ತಿದ್ದ ಬಟ್ಟಲುಗಳೆಲ್ಲ ಖಾಲಿ. ಚಿಲ್ಲರೆ ತಂದುಕೊಟ್ಟವರಿಗೆ ಹಲವೆಡೆ ಕಮಿಷನ್ ನೀಡುವಷ್ಟರ ಮಟ್ಟಿಗೆ ಅದರ ಅಭಾವದ ಬಿಸಿ ತಟ್ಟಿದೆ. ಅನೇಕ ಅಂಗಡಿಗಳಲ್ಲಿ ಚಿಲ್ಲರೆ ಇಲ್ಲದೆ ಗುರುತಿನ ಗಿರಾಕಿಗಳಿಗೆ ಚೀಟಿಯಲ್ಲಿ ಅದನ್ನು ಬರೆದು ಕೊಡುವ ಪ್ರವೃತ್ತಿ ಹೆಚ್ಚಾಗಿದೆ.

ಕೇಂದ್ರ ಸರ್ಕಾರ ವಿವಿಧ ಕ್ಷೇತ್ರಗಳಲ್ಲಿ ಖಾಸಗೀಕರಣದ ವಿಶಿಷ್ಟ ಅವಕಾಶಗಳನ್ನು ತೆರೆದಿಟ್ಟಿದೆ

ಹೂಡಿಕೆ ಹಿಂತೆಗೆತ: ಹಿನ್ನಡೆಯೇ ಹೆಚ್ಚು!



ವಿಶ್ಲೇಷಣೆ

ಪ್ರೊ. ಜಿ.ವಿ. ಜೋಶಿ

ಸಾರ್ವಜನಿಕ ವಲಯದಲ್ಲಿರುವ ಉದ್ಯಮಗಳ ಒಡೆತನವು ಖಾಸಗಿ ವ್ಯಕ್ತಿಗಳಿಗೆ ಅಥವಾ ಸಂಸ್ಥೆಗಳಿಗೆ ಹಸ್ತಾಂತರಗೊಂಡಾಗ ಅದನ್ನು ಖಾಸಗೀಕರಣ ಎಂದು ಪರಿಗಣಿಸುವುದೇ ಹೆಚ್ಚು. ವಾಸ್ತವದಲ್ಲಿ ಖಾಸಗೀಕರಣ ಮತ್ತು ಸರ್ಕಾರದ ಹೂಡಿಕೆ ಹಿಂತೆಗೆತವನ್ನು ಸ್ವಲ್ಪ ಭಿನ್ನವಾದ ಪ್ರಕ್ರಿಯೆಗಳೆಂದೇ ಪರಿಭಾವಿಸಬಹುದು. ಹೂಡಿಕೆ ಹಿಂತೆಗೆತ ಭಾಗಶಃ ಖಾಸಗೀಕರಣ ಅಷ್ಟೆ, ಖಾಸಗೀಕರಣದ ಒಂದು ಪ್ರಮುಖ ಪರಿಣಾಮ ಎಂದು ಹೇಳಿದರೂ ಸರಿಯೇ. ಆದರೂ ಭಾರತ ಮತ್ತು ಪಾಕಿಸ್ತಾನದಲ್ಲಿ ಖಾಸಗೀಕರಣವೆಂದರೆ, ಸರ್ಕಾರದ ಹೂಡಿಕೆ ಹಿಂತೆಗೆತವೆಂದು ಪರಿಗಣಿಸಿಬಿಡುವ ರೂಢಿ ಬೆಳೆದಿದ್ದು, ಅಷ್ಟರಮಟ್ಟಿಗಾದರೂ ಉಭಯ ರಾಷ್ಟ್ರಗಳು ಸ್ನೇಹಿತರೆಂದು ತಿಳಿಯುವ ವಿಸ್ಮಯಕಾರಿ ಅವಕಾಶ ಸೃಷ್ಟಿಯಾಗಿದೆ!

ಬ್ರಿಟನ್‌ನ ಪ್ರಧಾನಿಯಾಗಿದ್ದ ಮಾರ್ಗರೇಟ್ ಥ್ಯಾಚರ್ ಅವರು ಖಾಸಗಿ ರಂಗದ ಆರಾಧಕರೆಂದು ವಿಶ್ವದಾದ್ಯಂತ ಪ್ರಚಾರ ಪಡೆದ, ಅಮೆರಿಕದ ಅಧ್ಯಕ್ಷರಾಗಿದ್ದ ರೊನಾಲ್ಡ್ ರೇಗನ್ ಅವರ ಆಪ್ತರಾಗಿದ್ದರು. 1999ರಲ್ಲಿ ಖಾಸಗೀಕರಣದ ಅಲೆಗಳನ್ನೇ ಥ್ಯಾಚರ್ ತಮ್ಮ ದೇಶದಲ್ಲಿ ಸೃಷ್ಟಿಸಿದ್ದರು. ವಿಮಾನಯಾನ, ಟೆಲಿಕಮ್ಯುನಿಕೇಷನ್, ನೀರು ಪೂರೈಕೆ, ವಿದ್ಯುತ್ ಸರಬರಾಜು- ಹೀಗೆ ಅನೇಕ ಪ್ರಮುಖ ವಲಯಗಳನ್ನು ಖಾಸಗೀಕರಣ ಕಬಳಿಸಿಬಿಟ್ಟಿತು. ಹೀಗಾಗಿ ಬೆಲೆಗಳು ಏರುತ್ತಲೇ ಹೋಗಿ ಅಲ್ಲಿ ಜನಸಾಮಾನ್ಯರು ನೋವು ಕಾಣುವಂತಾಯಿತು.

ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಥ್ಯಾಚರ್‌ವಾದದ ಪ್ರಭಾವ ಹರಡಿಕೊಂಡಿದ್ದರಿಂದ ಭಾರತವೂ ಸೇರಿದಂತೆ ಅನೇಕ ರಾಷ್ಟ್ರಗಳಲ್ಲಿ ಬಡಜನ ಬಳಲುವಂತಾಗಿದೆಯೆಂದು ನಮ್ಮಲ್ಲಿನ ಕೆಲವು ಆರ್ಥಿಕ ತಜ್ಞರು ವಾದಿಸಿದ್ದಾರೆ. ಕ್ಷಮತೆಗೂ ಒಡೆತನಕ್ಕೂ ನೇರ ಸಂಬಂಧವಿಲ್ಲವೆಂದು ತೋರಿಸುವ ಭಾರತದ ಸ್ಥಿತಿಗತಿಗೂ ಅನ್ವಯಿಸುವ ವಿಶ್ವ ಬ್ಯಾಂಕಿನ ವರದಿ ಬಂದಿದ್ದು ಆಗಲೇ. ಖಾಸಗೀಕರಣದ ಹಿತರಕ್ಷಣೆ ವಾದ ಭಾರತದಲ್ಲಿ ದಾಪುಗಾಲು ಹಾಕಲು ಥ್ಯಾಚರ್ ವಾದದ ಪ್ರಭಾವ ಕಾರಣವೆಂಬ ವಾದವೂ ಇದೆ.

ಮನಮೋಹನ್ ಸಿಂಗ್ ಅವರು ಕೇಂದ್ರ ಹಣಕಾಸು ಸಚಿವರಾಗಿದ್ದಾಗ, ಆರ್ಥಿಕ ಸುಧಾರಣೆಗಳನ್ನು ಸಾರಿದ 1991 ಜುಲೈ 24ರ ತಮ್ಮ ಐತಿಹಾಸಿಕ ಮುಂಗಡ ಪತ್ರದಲ್ಲಿ, ನೋವಿಲ್ಲದೆ ಯಾವುದೇ ಬದಲಾವಣೆ ಸಾಧ್ಯವಿಲ್ಲವೆಂದು ಹೇಳಿದ್ದರು. ಅವರ ಹೇಳಿಕೆಯು ಹೂಡಿಕೆ ಹಿಂತೆಗೆತದಿಂದ ಆಗಬಹುದಾದ ಹೆಚ್ಚಿನ ನೋವಿನ ಮುನ್ಸೂಚನೆಯಾಗಿತ್ತು. ಸ್ವಾತಂತ್ರ್ಯಾನಂತರ ರಾಷ್ಟ್ರೀಕರಣದ ಹಾದಿಯಲ್ಲಿ ಸಾಗಿದ್ದ ದೇಶದಲ್ಲಿ ಖಾಸಗೀಕರಣ ಕಷ್ಟವೆಂಬ ಪರಿಜ್ಞಾನ ಅವರಿಗಿತ್ತು. ಮನಮೋಹನ ಸಿಂಗ್ ಮತ್ತು ಕೇಂದ್ರ ವಾಣಿಜ್ಯ ಸಚಿವರಾಗಿದ್ದ ಪಿ.ಚಿದಂಬರಂ ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದ ಆಗಿನ ಲೋಕಸಭಾ ಸದಸ್ಯರ ಮುಂದೆ ಖಾಸಗೀಕರಣದ ವಾದ್ಯ ಬಾರಿಸುವಾಗ ಪಟ್ಟ ಕಷ್ಟ ಅಷ್ಟಿಷ್ಟಲ್ಲ.

1991-92ರಿಂದ 2000-01ರ ಅವಧಿಯಲ್ಲಿ ಹೂಡಿಕೆ ಹಿಂತೆಗೆತದಿಂದ ₹ 54,300 ಕೋಟಿ ಸಂಗ್ರಹವಾಗಬಹುದೆಂಬ ನಿರೀಕ್ಷೆಯೇನೋ ಇತ್ತು. ಆದರೆ ಸಂಗ್ರಹವಾಗಿದ್ದು ಕೇವಲ ₹ 20,078 ಕೋಟಿ! ಹೂಡಿಕೆ ಹಿಂತೆಗೆತ ಸೃಷ್ಟಿಸಿದ ಸಮಸ್ಯೆಗಳಿಗೆ ಸೂಕ್ತವಾದ ಪರಿಹಾರಗಳನ್ನು ಒದಗಿಸುವ ಕೆಲಸ ಮಾತ್ರ ಇನ್ನೂ ಆಗಿಲ್ಲ. ಖಾಸಗೀಕರಣದ ರಣವಾದ್ಯ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಮೂರನೆಯ ಬಜೆಟ್ ರೂಪದಲ್ಲಿ ಈಗ ಮೊಳಗುತ್ತಿರುವಾಗ, ಬಡವರ ಹಿತರಕ್ಷಣೆಯ ವಿಚಾರ ಬದಿಗೆ ಸರಿದಿದೆ. ಬಡ ವಿರಾಟನ ಕೇಳುವವರಾರ್ ದ್ರೋಣ ಸಮರದಲಿ?

ಪ್ರಣವ್ ಮುಖರ್ಜಿ ಅವರು ಮನಮೋಹನ ಸಿಂಗ್ ಅವರ ನೇತೃತ್ವದ ಸಂಪುಟದಲ್ಲಿ ಹಣಕಾಸು ಸಚಿವರಾಗಿದ್ದಾಗ ಹೂಡಿಕೆ ಹಿಂತೆಗೆತದ ವಿಚಾರಕ್ಕೆ ಸಂಬಂಧಿಸಿದಂತೆ ಅಳೆದೂ ತೂಗಿ ಮಾತನಾಡುತ್ತಿದ್ದರು. 2009-10ರ ಬಜೆಟ್ ಭಾಷಣದಲ್ಲಿ 'ಸಾರ್ವಜನಿಕ ಉದ್ಯಮಗಳು ರಾಷ್ಟ್ರದ ಸಂಪತ್ತು. ಆದರೂ ಅವುಗಳಲ್ಲಿ ಜನಸಮುದಾಯದ ಪಾಲ್ಗೊಳ್ಳುವಿಕೆಯನ್ನು, ಹೂಡಿಕೆ ಹಿಂತೆಗೆತವನ್ನು ಹೆಚ್ಚಿಸುವ ಅಗತ್ಯವಿದೆ' ಎಂದಿದ್ದರು. ಅವರಿಂದ ಬ್ಯಾಂಕುಗಳನ್ನು ಮತ್ತು ವಿಮಾ ಕಂಪನಿಗಳನ್ನು ಸಾರ್ವಜನಿಕ ರಂಗದಲ್ಲಿ ಮುಂದುವರಿಸುವ ಆಶ್ವಾಸನೆ ದೊರಕಿತ್ತು. ಇಷ್ಟಾದರೂ ಹೂಡಿಕೆ ಹಿಂತೆಗೆತದ ವಿಷಯದಲ್ಲಿ ಪ್ರಣವ್ ಅವರಿಗೆ ಯಶಸ್ಸು ಸಿಗಲಿಲ್ಲ.

2011-12ನೇ ಸಾಲಿನಲ್ಲಿ ಹೂಡಿಕೆ ಹಿಂತೆಗೆತದ ಮೂಲಕ ಅವರು ₹ 40,000 ಕೋಟಿ ಸಂಗ್ರಹಿಸುವ ಗುರಿ ಹೊಂದಿದ್ದರೆ, ಸಂಗ್ರಹವಾಗಿದ್ದು ಕೇವಲ ₹ 19,418 ಕೋಟಿ. 2012-13ನೇ ಸಾಲಿನಲ್ಲಿ ಅವರು ಗುರಿಯನ್ನು ₹ 30,000 ಕೋಟಿಗೆ ತಗ್ಗಿಸಿಬಿಟ್ಟರು. ಹೀಗೆ ಹೂಡಿಕೆ ಹಿಂತೆಗೆತದಲ್ಲಿ ಸರಣಿ ಸೋಲಿನ ಅನುಭವಗಳನ್ನೇ ಪಡೆದಿದ್ದ ಪ್ರಣವ್ ಮುಂದೆ ರಾಷ್ಟ್ರಪತಿ ಭವನ ಸೇರಿದರು. ಪ್ರಣವ್ ನಂತರ ಕೇಂದ್ರ ಹಣಕಾಸು ಸಚಿವರಾದ ಪಿ.ಚಿದಂಬರಂ ಹೂಡಿಕೆ ಹಿಂತೆಗೆತದ ಮೂಲಕ ಆದಾಯ ಸಂಗ್ರಹಿಸುವಲ್ಲಿ ಎಣಿಸಿದಂತೆ ಯಶಸ್ಸು ಪಡೆದರಾದರೂ ಅದನ್ನು, ಬಿರಿದು ನಿಂತಿದ್ದ ವಿತ್ತೀಯ ಕೊರತೆ ತುಂಬಿಕೊಳ್ಳಲು ಬಳಸಿದರೇ ಹೊರತು ಮೂಲ ಸೌಕರ್ಯದ ಸೃಷ್ಟಿಗೆ ಉಪಯೋಗಿಸುವ ಕೆಲಸ ಮಾಡುವ ಗೋಜಿಗೆ ಹೋಗಲಿಲ್ಲ.



2014ರಲ್ಲಿ ವಿತ್ತೀಯ ಕ್ರೋಡೀಕರಣದ ಹಾದಿಯಲ್ಲಿ ಸಾಗಿದ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಸಂಪನ್ಮೂಲ ಸಂಗ್ರಹಕ್ಕಾಗಿ ಹೂಡಿಕೆ ಹಿಂತೆಗೆತವನ್ನು ಆಯ್ಕೆ ಮಾಡಿಕೊಂಡಿದೆ ಎಂದು ಆಗ ಹಣಕಾಸು ಸಚಿವರಾಗಿದ್ದ ಅರುಣ್ ಜೇಟ್ಲಿ ಸಾರಿದ್ದರು. 2016ರ ಆಗಸ್ಟ್ 16ರಂದು ಪ್ರಧಾನಿ ಮೋದಿ ನೇತೃತ್ವದಲ್ಲಿ ಆರ್ಥಿಕ ವ್ಯವಹಾರಗಳ ಕ್ಯಾಬಿನೆಟ್ ಸಮಿತಿ ಸಭೆ ಸೇರಿ ಹೂಡಿಕೆ ಹಿಂತೆಗೆತದ ವಿಧಾನಗಳನ್ನು ಸರಳಗೊಳಿಸಿತು. 2016-17ನೇ ಸಾಲಿನಲ್ಲಿ ಹೂಡಿಕೆ ಹಿಂತೆಗೆತದ ಮೂಲಕ ಗಳಿಸಿದ ಆದಾಯ ₹ 46,246 ಕೋಟಿಯಷ್ಟಾಗಿದ್ದು ಆಗ ಯಶಸ್ಸಿನ ದಾಖಲೆ. 2017-18ರ ಸಾಲಿನ ಬಜೆಟ್ ಭಾಷಣದಲ್ಲಿ ಜೇಟ್ಲಿ ತಮ್ಮ ಮುಂದಿನ ಮಹತ್ವಾಕಾಂಕ್ಷೆಯುಳ್ಳ ಯೋಜನೆಯನ್ನು ಸಾರಿದಾಗ ಅವರ ಪಕ್ಷದ ಸಂಸದರಿಂದ ಹರ್ಷೋದ್ಗಾರ. ಮುಂದೆ ಸರಿಯಾದ ಯೋಜನೆಯಿಲ್ಲದ ನೋಟುಗಳ ರದ್ದತಿ ಮತ್ತು ದೋಷಪೂರಿತ ಜಿಎಸ್‌ಟಿಯಿಂದಾಗಿ ಆ ಹರ್ಷೋದ್ಗಾರ ಬೇಗನೇ ಹಳೆಯ ಕಥೆಯಾಗಿ ಹೋಯಿತಲ್ಲ!

ನಿರ್ಮಲಾ ಸೀತಾರಾಮನ್ ತಮ್ಮ 2020-21ನೇ ಸಾಲಿನ ಮುಂಗಡ ಪತ್ರದಲ್ಲಿ ಭಾರತೀಯರ ಅತ್ಯಂತ ವಿಶ್ವಾಸಾರ್ಹ ಕಾರ್ಪೊರೇಷನ್ ಎಂದು ಹೆಸರು ಮಾಡಿದ ಜೀವ ವಿಮಾ ನಿಗಮದಲ್ಲಿ (ಎಲ್‌ಐಸಿ) ಸರ್ಕಾರ ಹೊಂದಿರುವ ಪಾಲನ್ನು ಮಾರಾಟ ಮಾಡುವ ನಿರ್ಧಾರ ಸಾರಿ ಆಶ್ಚರ್ಯ ಹುಟ್ಟಿಸಿದರು. ದೇಶದಲ್ಲಿ ವಿಮಾ ಮಾರುಕಟ್ಟೆಯಲ್ಲಿ ಎಲ್‌ಐಸಿಯ ಪಾಲು ಇಷ್ಟೊಂದು ದೊಡ್ಡದಾಗಿರುವಾಗ ತನ್ನ ಈ ನಿರ್ಧಾರದಿಂದ, ಪಾಲಿಸಿ ಪಡೆದಿರುವ ಅಸಂಖ್ಯಾತ ಜನಸಾಮಾನ್ಯರ ಹಿತರಕ್ಷಣೆ ಮಾಡುವ ಜವಾಬ್ದಾರಿ ಸರ್ಕಾರದ ಮೇಲೆ ಇದ್ದೇ ಇದೆ.

ನಿರ್ಮಲಾ 2020-21ರ ಬಜೆಟ್‌ನಲ್ಲಿ ಹೂಡಿಕೆ ಹಿಂತೆಗೆತದ ಮೂಲಕ ₹ 2.1 ಲಕ್ಷ ಕೋಟಿಯಷ್ಟು ಹಣ ಸಂಗ್ರಹಿಸುವ ಗುರಿ ಹೊಂದಿದ್ದರು. ಸಂಗ್ರಹಿಸಿದ್ದು ಕೇವಲ ₹ 15,220 ಕೋಟಿಯೆಂದು 2020-21ರ ಆರ್ಥಿಕ ಸಮೀಕ್ಷೆ ವರದಿ ಮಾಡಿ, ಕೊರೊನಾದ ಪ್ರತಾಪಕ್ಕೆ ಸಾಕ್ಷಿಯಾಗಿತ್ತು. 2021-22ನೇ ಹಣಕಾಸು ವರ್ಷದಲ್ಲಿ ಹೂಡಿಕೆ ಹಿಂತೆಗೆತದ ಮೂಲಕ ₹ 1.75 ಲಕ್ಷ ಕೋಟಿಯಷ್ಟು ಆದಾಯ ಸಂಗ್ರಹಿಸುವ ಗುರಿ ಹಣಕಾಸು ಸಚಿವೆಯದ್ದು. 2020ರ ಆರ್ಥಿಕ ಸಮೀಕ್ಷೆ ಹೆಚ್ಚಿನ ಲಾಭ, ಕ್ಷಮತೆಯ ಸಾಧನೆ, ಸ್ಪರ್ಧಾತ್ಮಕ ಶಕ್ತಿಯ ಸಂಪಾದನೆ ಮತ್ತು ವೃತ್ತಿಪರತೆಯಲ್ಲಿ ಹೆಚ್ಚಳವು ಹೂಡಿಕೆ ಹಿಂತೆಗೆತದಿಂದ ಸಾಧ್ಯವೆಂದು ಘೋಷಿಸಿ, ಕೇಂದ್ರ ಸರ್ಕಾರಕ್ಕೆ ಬೇಕಾದ ಹಸಿರು ನಿಶಾನೆ ಹಾರಿಸಿದೆ.

2021-22ನೇ ವರ್ಷದ ಮುಂಗಡ ಪತ್ರದ 3ನೇ ಅನುಬಂಧದಲ್ಲಿ ನಿರ್ಮಲಾ ಖಡಕ್ ಆದ ಹೂಡಿಕೆ ಹಿಂತೆಗೆತದ ಯೋಜನೆಯನ್ನು ನೀಡಿದ್ದಾರೆ. ಆಯಕಟ್ಟಿನ ಕ್ಷೇತ್ರಗಳಾದ ಅಣುಶಕ್ತಿ, ರಕ್ಷಣೆ, ಸಾಗಾಟ ಮತ್ತು ಟೆಲಿಕಮ್ಯುನಿಕೇಷನ್, ಶಕ್ತಿ, ಪೆಟ್ರೋಲಿಯಂ, ಬ್ಯಾಂಕಿಂಗ್, ವಿಮೆ ಮತ್ತು ಹಣಕಾಸು ಸೇವೆಗಳಲ್ಲಿ ಖಾಸಗೀಕರಣದ ಅವಕಾಶಗಳನ್ನು ಅವರು ತಿಳಿಸಿದ್ದಾರೆ. ಇತರ ಕ್ಷೇತ್ರಗಳಲ್ಲಿರುವ ಖಾಸಗೀಕರಣದ ಅವಕಾಶಗಳನ್ನೂ ವಿಶಿಷ್ಟ ರೀತಿಯಲ್ಲಿ ತಿಳಿಸಲಾಗಿದೆ. ಖಾಸಗೀಕರಣ ಸಾಧ್ಯವಿಲ್ಲವೆಂದಾದರೆ, ನಿರುದ್ಯೋಗ ಸಮಸ್ಯೆ ತೀವ್ರವಾಗಿರುವಾಗಲೇ ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಉದ್ದಿಮೆಗಳನ್ನು ಮುಚ್ಚೇಬಿಡುವ ನೋವಿನ ವಿಚಾರವೂ ಪ್ರಕಟವಾಗಿದೆ!

ಚುರುಮುರಿ



ಪರ್ಯಾಯ ಬೆಟ್ಟ

• ಸಿ.ಎನ್.ರಾಜು

ಚಟ್ನಹಳ್ಳಿ ಗ್ರಾಮಸ್ಥರೊಂದಿಗೆ ಶಾಸಕರು ಸರ್ಕಾರಿ ಸಾಹೇಬರ ಬಳಿ ನಿಯೋಗ ಬಂದಿದ್ದರು. 'ಸಾರ್, ಚಟ್ನಹಳ್ಳಿಯಲ್ಲಿ ಜಿಲೆಟಿನ್ ಸೌಂಡ್ ಜಾಸ್ತಿಯಾಗಿದೆ, ಜನ ಹೆದರಿಕೊಂಡಿದ್ದಾರೆ' ಅಂದರು ಶಾಸಕರು.

'ಹಾಗಂತ, ಸೌಂಡ್‌ಪ್ರೂಫ್ ಜಿಲೆಟಿನ್ ಇದೆಯೇನ್ರೀ?' ಸಾಹೇಬ್ರು ಕೇಳಿದ್ರು.

'ಹಾಗಲ್ಲಾ ಸಾರ್, ಕಲ್ಲುಗಣಿಗಾರಿಕೆಯವರು ಊರಿನ ಬೆಟ್ಟ ಸಿಡಿಸಿ ನಾಶ ಮಾಡುತ್ತಿದ್ದಾರೆ, ಇದನ್ನು ತಡೆಯಿರಿ' ಎಂದರು ಶಾಸಕರು.

'ಅದರ ಗುತ್ತಿಗೆಯನ್ನು ನೀವೇ ಅಲ್ಲವೇನ್ರೀ ಪಡೆದಿರೋದು...' ಸಾಹೇಬ್ರು ಕಣ್ಣು ಮಿಟುಕಿಸಿದರು.

'ಮೆಲ್ಲಗೆ ಮಾತನಾಡಿ ಸಾರ್, ಊರಿನವರಿಗೆ ಗೊತ್ತಾಗೋದು ಬೇಡ' ಪಿಸುಗುಟ್ಟಿದರು ಶಾಸಕರು.

'ಗಣಿಗಾರಿಕೆಯವರು ಊರಿನ ಬೆಟ್ಟ ಒಡೆದು ನಾಶ ಮಾಡುತ್ತಿದ್ದಾರೆ, ಬೆಟ್ಟ ಉಳಿಸಿ' ಗ್ರಾಮಸ್ಥರು ಕೋರಿದರು.

'ಬೆಟ್ಟ ಕಡಿಯದಿದ್ದರೆ ಅಭಿವೃದ್ಧಿ ಕೆಲಸಕ್ಕೆ ಜಲ್ಲಿ, ಕಲ್ಲು, ಎಂ.ಸ್ಯಾಂಡ್ ಬ್ಯಾಡವೇನ್ರೀ' ಸಾಹೇಬ್ರು ಪ್ರಶ್ನೆ ಮಾಡಿದ್ರು.

'ಏನಾದ್ರೂ ಮಾಡಿ, ನಮ್ಮೂರಿಗೊಂದು ಬೆಟ್ಟ ಬೇಕೇಬೇಕು...' ಗ್ರಾಮಸ್ಥರು ಹಟಕ್ಕೆ ಬಿದ್ದರು. ಸಾಹೇಬ್ರು ತಲೆ ಕೆಡಿಸಿಕೊಂಡರು, 'ಇದಕ್ಕೆ ಪರ್ಯಾಯ ವ್ಯವಸ್ಥೆ ಏನು ಮಾಡಬಹುದೂರೀ?' ಅಧಿಕಾರಿಗಳನ್ನು ಕೇಳಿದರು.

'ಇರುವ ಬೆಟ್ಟವನ್ನು ಒಡೆದು, ಅದೇ ಜಾಗದಲ್ಲಿ ಪ್ಲಾಸ್ಟಿಕ್ ಬೆಟ್ಟ ನಿರ್ಮಿಸಬಹುದು ಸಾರ್. ನಮ್ಮಲ್ಲಿ ಬೆಟ್ಟದಷ್ಟು ಪ್ಲಾಸ್ಟಿಕ್ ತ್ಯಾಜ್ಯ ಇದೆ. ಅದನ್ನೆಲ್ಲಾ ಚಟ್ನಹಳ್ಳಿಯಲ್ಲಿ ಬೆಟ್ಟವಾಗಿ ನಿರ್ಮಾಣ ಮಾಡಿ, ಅಲ್ಲಿ ದೇವಸ್ಥಾನ, ಮೆಟ್ಟಿಲು, ಉದ್ಯಾನವನ ನಿರ್ಮಾಣ ಮಾಡಿದರೆ, ಪ್ಲಾಸ್ಟಿಕ್ ಬೆಟ್ಟವು ಪ್ರವಾಸಿ ತಾಣ, ಶ್ರದ್ಧಾ ಕೇಂದ್ರವಾಗಿ ಪ್ರವಾಸೋದ್ಯಮ ಅಭಿವೃದ್ಧಿಯಾಗುತ್ತದೆ...' ಎಂದರು ಅಧಿಕಾರಿ.

'ಕಲ್ಲಿನದೋ ಪ್ಲಾಸ್ಟಿಕ್‌ದೋ ಒಂದು ಬೆಟ್ಟ ನಿರ್ಮಾಣ ಮಾಡಿ, ಅದರ ಪ್ರಾಜೆಕ್ಟ್ ರಿಪೋರ್ಟ್ ಕೊಡಿ' ಸಾಹೇಬ್ರು ಆದೇಶ ಮಾಡಿದರು.

ಬೆಟ್ಟ ನಿರ್ಮಾಣವಾಗಿ, ನಮ್ಮೂರು ಪ್ರವಾಸಿ ತಾಣವಾಗಿ ಪ್ರಸಿದ್ಧವಾಗುತ್ತದೆ ಎಂದುಕೊಳ್ಳುತ್ತಾ ಗ್ರಾಮಸ್ಥರು ಖುಷಿಯಿಂದ ಹೊರಟರು.

ಸಂಗತ

ಪ್ರಾಣಿಪ್ರೇಮದಲ್ಲಿ ಮಾನವಕ್ಷೇಮ

ವನ್ಯಜೀವಿಗಳನ್ನು ಮನುಷ್ಯ ತುಚ್ಛವಾಗಿ ಕಾಣುವುದು ಆಘಾತಕಾರಿ ಮತ್ತು ಅಪಾಯಕಾರಿ ವಿಷಯವಾಗಿದೆ

• ಡಾ. ಎಂ.ವೆಂಕಟಸ್ವಾಮಿ

ಅಳಿವಿನ ಅಂಚಿನಲ್ಲಿರುವ ವನ್ಯಜೀವಿಗಳು ಮತ್ತು ಸಸ್ಯ ಪ್ರಭೇದಗಳ ಬಗ್ಗೆ ಜನಜಾಗೃತಿ ಮೂಡಿಸುವ ಸಲುವಾಗಿ, ಮಾರ್ಚ್ 3 ಅನ್ನು ವಿಶ್ವ ವನ್ಯಜೀವಿ ದಿನವನ್ನಾಗಿ ಆಚರಿಸಲು ವಿಶ್ವಸಂಸ್ಥೆಯು 2013ರಲ್ಲಿ ನಿರ್ಧರಿಸಿತು. ಅದರಂತೆ, ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆಗಾಗಿನ ಈ ವರ್ಷದ ಘೋಷವಾಕ್ಯ 'ಅರಣ್ಯ ಮತ್ತು ಜೀವನೋಪಾಯ: ಜನ ಮತ್ತು ಭೂಗ್ರಹ'.

ಅರಣ್ಯ ಹಾಗೂ ಅದರ ಸುತ್ತಲಿನ ಪ್ರದೇಶದೊಂದಿಗೆ ಐತಿಹಾಸಿಕ ಸಂಬಂಧ ಹೊಂದಿರುವ ಸ್ಥಳೀಯ ಸಮುದಾಯಗಳ ಜೀವನೋಪಾಯವನ್ನು ಉಳಿಸಿಕೊಳ್ಳುವಲ್ಲಿ ಅರಣ್ಯಗಳು, ಅರಣ್ಯ ಪ್ರಭೇದಗಳು ಮತ್ತು ಪರಿಸರ ವ್ಯವಸ್ಥೆ ಅತಿ ಮುಖ್ಯ ಪಾತ್ರವನ್ನು ವಹಿಸಿವೆ. ಭೂಮಿಯ ಮೇಲಿನ ಎಲ್ಲಾ ಪರಿಸರ ವಲಯಗಳು ಅದ್ಭುತ ಜೀವಿಗಳಿಂದ ತುಂಬಿಕೊಂಡಿವೆ. ಗಾಳಿಯಲ್ಲಿ ಹಾರಾಡುವ ಪಕ್ಷಿಗಳಿಂದ ಹಿಡಿದು ಸಾಗರಗಳಲ್ಲಿನ ದೈತ್ಯ ತಿಮಿಂಗಿಲಗಳವರೆಗೆ ವನ್ಯಜೀವಿಗಳು ಅತ್ಯಂತ ಅಸಾಮಾನ್ಯ ಮತ್ತು ಅನಿರೀಕ್ಷಿತ ವಲಯಗಳಲ್ಲಿ ಬದುಕು ನಡೆಸುತ್ತಿವೆ.

ಭೂಮಿಯ ಮೇಲೆ ಪ್ರಾಣಿಗಳ ಸಂಖ್ಯೆಗೆ ಹೋಲಿಸಿದರೆ ಮನುಷ್ಯನ ಸಂಖ್ಯೆ ಅತಿ ಹೆಚ್ಚಾಗಿ ಬೆಳೆಯುತ್ತಿದೆ. ಆದರೆ ಭೂಮಿಯ ಮೇಲೆ ಮನುಷ್ಯ ಮಾತ್ರ ಮುಖ್ಯವಲ್ಲ. ವನ್ಯಜೀವಿಗಳನ್ನು ಮನುಷ್ಯ ತುಚ್ಛವಾಗಿ ಕಾಣುವುದು ಆಘಾತಕಾರಿ ಮತ್ತು ಅಪಾಯಕಾರಿ ವಿಷಯವಾಗಿದೆ.

ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಎಲ್ಲಾ ರೀತಿಯ ವನ್ಯಜೀವಿಗಳನ್ನೂ ಬೇಟೆಯಾಡಿ ಅಳಿವಿನ ಅಂಚಿಗೆ ತಳ್ಳುತ್ತಿದ್ದಾನೆ. ಮನುಷ್ಯ ಇಲ್ಲದೇ ಇದ್ದರೆ ಭೂಮಿಗೆ ಏನೂ ತೊಂದರೆ ಇಲ್ಲ. ಆದರೆ ಅದೇ ಭೂಮಿಯ ಮೇಲಿರುವ ಜೀವಜಾಲದ ಪಿರಮಿಡ್ ಅನ್ನು ನಾಶಪಡಿಸಿದಲ್ಲಿ ಮನುಷ್ಯ ಖಂಡಿತ ಉಳಿಯಲಾರ. ಅದಕ್ಕೆ ಈಗ ಭೂಮಿಯ ಮೇಲೆ ಸ್ಫೋಟಗೊಂಡಿರುವ ಕೋವಿಡ್-19 ಒಂದು ಉದಾಹರಣೆ ಮಾತ್ರ.

ವನ್ಯಜೀವಿಗಳ ಬಗ್ಗೆ ಕಾಳಜಿ ವಹಿಸುವುದು ಹಿಂದೆಂದಿಗಿಂತ ಇಂದು ತುರ್ತು ಅಗತ್ಯವಾಗಿದೆ. ನೂರಾರು ಪ್ರಭೇದಗಳು ಅಳಿವಿನ ಅಂಚಿನಲ್ಲಿದ್ದು, ಪ್ರತಿವರ್ಷ ಹತ್ತಾರು ಪ್ರಭೇದಗಳು ಅಳಿಸಿ ಹೋಗುತ್ತಿವೆ. ಹೀಗಾಗಿ, ಅಳಿವಿನ ಅಂಚಿನಲ್ಲಿರುವ ಪ್ರಾಣಿ ಹಾಗೂ ಸಸ್ಯ ಪ್ರಭೇದಗಳನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳಬೇಕು, ಇಲ್ಲವಾದರೆ ಜಗತ್ತು ಮತ್ತೆ ಎಂದಿಗೂ ಅವುಗಳನ್ನು ಕಾಣುವುದಿಲ್ಲ ಎಂದು ಈ ಕುರಿತ ಜಾಗತಿಕ ಒಪ್ಪಂದ (ಕನ್ವೆನ್ಷನ್ ಆನ್ ಇಂಟರ್‌ನ್ಯಾಷನಲ್ ಟ್ರೇಡ್ ಇನ್ ಎನ್‌ಡೇಂಜರ್ಡ್ ಸ್ಪೀಶೀಸ್– ಸಿಐಟಿಇಎಸ್) ಒತ್ತಿ ಹೇಳಿದೆ.

ಜಗತ್ತಿನಾದ್ಯಂತ 20 ಕೋಟಿಯಿಂದ 35 ಕೋಟಿಯಷ್ಟು ಜನರು ಅರಣ್ಯ ಪ್ರದೇಶಗಳಲ್ಲಿ ಮತ್ತು ಅವುಗಳ ಸುತ್ತಮುತ್ತ ವಾಸಿಸುತ್ತಿದ್ದಾರೆ. ಅರಣ್ಯ ಪರಿಸರ ಮತ್ತು ಅರಣ್ಯ ಪ್ರಭೇದಗಳು ಒದಗಿಸುವ ಆಹಾರ, ಆಶ್ರಯ, ಶಕ್ತಿ, ಔಷಧಿ ಮತ್ತು ಮೂಲಭೂತ ಅಗತ್ಯಗಳಂತಹ ವಿವಿಧ ಪರಿಸರ ವ್ಯವಸ್ಥೆಯ ಸೇವೆಗಳನ್ನು ಇವರು ಅವಲಂಬಿಸಿದ್ದಾರೆ. ಸ್ಥಳೀಯ ಜನರು- ಜನಸಮುದಾಯಗಳು ಮತ್ತು ಅರಣ್ಯ, ವನ್ಯಜೀವಿ ಪ್ರಭೇದಗಳು ಮತ್ತು ಪರಿಸರ ವ್ಯವಸ್ಥೆಯ ಸೇವೆಗಳ ನಡುವಿನ ಸಹಜೀವನವನ್ನು ಇಲ್ಲಿ ನೋಡಬಹುದಾಗಿದೆ. ಜಗತ್ತಿನ ಸರಿಸುಮಾರು ಶೇ 28ರಷ್ಟು ಭೂಪ್ರದೇಶಗಳು ಸ್ಥಳೀಯ ಜನಸಮುದಾಯಗಳ ಆಡಳಿತದಲ್ಲಿವೆ. ಇದರಲ್ಲಿ ಅತ್ಯಂತ ಸಮೃದ್ಧ ಅರಣ್ಯಗಳೂ ಸೇರಿವೆ. ಇವು ಅವರ ಆರ್ಥಿಕ ಮತ್ತು ವೈಯಕ್ತಿಕ ಯೋಗಕ್ಷೇಮಕ್ಕೆ ಮಾತ್ರ ಸೀಮಿತವಾಗಿಲ್ಲ, ಅವರ ಸಾಂಸ್ಕೃತಿಕ- ನಾಗರಿಕತೆಯ ಹೆಗ್ಗುರುತುಗಳೂ ಆಗಿವೆ.



ಅರಣ್ಯಗಳು, ಅರಣ್ಯ ಪ್ರಭೇದಗಳು ಮತ್ತು ಅವುಗಳ ಮೇಲೆ ಅವಲಂಬಿತವಾಗಿರುವ ಜೀವನೋಪಾಯಗಳಿಗೆ ಪ್ರಸ್ತುತ ಹವಾಮಾನ ವೈಪರೀತ್ಯದಿಂದ ಅಪಾರ ಧಕ್ಕೆ ಉಂಟಾಗುತ್ತಿದೆ. ಹವಾಮಾನ ಬದಲಾವಣೆ, ಜೀವವೈವಿಧ್ಯದ ನಷ್ಟ ಮತ್ತು ಈಗ ಕಾಣಿಸಿಕೊಂಡಿರುವ ಮಹಾ ಸಾಂಕ್ರಾಮಿಕ ಕೋವಿಡ್-19ರಿಂದ ಇಡೀ ಜಗತ್ತಿನಲ್ಲಿ ಸಾಮಾಜಿಕ ಪಲ್ಲಟಗಳಾಗಿವೆ ಮತ್ತು ಆರ್ಥಿಕ ನಷ್ಟ ಉಂಟಾಗಿದೆ.

ಅರಣ್ಯ- ವನ್ಯಜೀವಿ ನಿರ್ವಹಣಾ ಮಾದರಿಗಳು, ಮಾನವ ಯೋಗಕ್ಷೇಮ, ಅರಣ್ಯಗಳ ದೀರ್ಘಕಾಲೀನ ಸಂರಕ್ಷಣೆಯನ್ನು ಉತ್ತೇಜಿಸಲು ವಿಶ್ವಸಂಸ್ಥೆ ಪ್ರಯತ್ನಿಸುತ್ತಿದೆ. ಸಸ್ಯಗಳು ಮತ್ತು ಅವುಗಳನ್ನು ಉಳಿಸಿಕೊಳ್ಳುವ ಪರಿಸರ ವ್ಯವಸ್ಥೆ, ಈ ನಿರ್ಣಾಯಕ ನೈಸರ್ಗಿಕ ವ್ಯವಸ್ಥೆಯೊಂದಿಗೆ ಹೆಚ್ಚು ಸುಸ್ಥಿರ ಸಂಬಂಧಗಳನ್ನು ಸ್ಥಾಪಿಸಲು ಸಾಂಪ್ರದಾಯಿಕ ಅಭ್ಯಾಸಗಳು ಹಾಗೂ ಜ್ಞಾನದ ಮೌಲ್ಯವನ್ನು ಉತ್ತೇಜಿಸಬೇಕಿದೆ. ಪರಿಸರದ ಬಗ್ಗೆ ನಾವು ಆಸಕ್ತಿ ಉಳ್ಳವರಾದರೆ, ವನ್ಯಪ್ರಾಣಿಗಳ ಈ ವಿಶ್ವ ದಿನದ ಮಹತ್ವವನ್ನು ಅರಿತು ಅರ್ಥಪೂರ್ಣವಾಗಿ ಅದನ್ನು ಆಚರಣೆಗೆ ತರಬೇಕಾಗಿದೆ.

ಅರಣ್ಯ ಮತ್ತು ವನ್ಯಪ್ರಾಣಿಗಳ ಪರಿಸರ ವೈವಿಧ್ಯವು ಮಾನವಕ್ಷೇಮ ಹಾಗೂ ಸುಸ್ಥಿರ ಅಭಿವೃದ್ಧಿಗೆ ಮುಖ್ಯವಾಗುತ್ತದೆ. ಈ ಭೂಮಿ ನಿರಂತರವಾಗಿ ನಮ್ಮ ಯೋಗಕ್ಷೇಮವನ್ನು ಕಾಪಾಡುತ್ತಾ ಬಂದಿದೆ. ವಿಶ್ವ ವನ್ಯಜೀವಿ ದಿನಾಚರಣೆ ಎಂದರೆ ನಮಗೆ ಮೊದಲು ಕಾಣಿಸುವುದು ಸ್ಥಳೀಯ ಮೃಗಾಲಯಗಳು ಮತ್ತು ಸಸ್ಯಶಾಸ್ತ್ರೀಯ ತೋಟಗಳು. ಇವು ನಮಗೆ ಜೀವವೈವಿಧ್ಯದ ಬಗ್ಗೆ ನೆನಪಿಸುತ್ತವೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಮಕ್ಕಳಿಗೆ ಅರಣ್ಯ ಮತ್ತು ವನ್ಯಜೀವಿಗಳ ಪ್ರಾಮುಖ್ಯವನ್ನು ವಿವರಿಸಿ ಹೇಳಬೇಕಾಗಿದೆ.

ಶಾಲಾ ಮಕ್ಕಳಿಗೆ ಹೊರಾಂಗಣ ವಿಹಾರದೊಂದಿಗೆ ಅರಣ್ಯ- ವನ್ಯಜೀವಿ ಪರಿಸರದ ಸಂಪರ್ಕವನ್ನು ಏರ್ಪಡಿಸಿ, ಅವರಲ್ಲಿ ಕುತೂಹಲ, ಆಸಕ್ತಿಯನ್ನು ಹುಟ್ಟಿಸಬೇಕಿದೆ. ಹೀಗೆ ಅರಣ್ಯ ಮತ್ತು ವನ್ಯಜೀವಿಗಳನ್ನು ಉಳಿಸಿಕೊಳ್ಳುವ ಮೂಲಕ ನಮ್ಮನ್ನು ನಾವು ಉಳಿಸಿಕೊಳ್ಳಬೇಕಿದೆ.

ವಾಚಕರ ವಾಣಿ

ನೀರು ಶುದ್ಧೀಕರಣ: ಗಂಭೀರವಾಗಿ ಪರಿಗಣಿಸಿ

ಕೊಳಚೆ ನೀರನ್ನು ಶುದ್ಧೀಕರಿಸದಿದ್ದರೆ ಜಲಮೂಲಗಳು ಎಷ್ಟು ಅಪಾಯಕಾರಿ ಸ್ಥಿತಿ ಎದುರಿಸಬೇಕಾಗುತ್ತದೆ ಎಂಬುದನ್ನು ವಿವರಿಸಿರುವ ಸಂಪಾದಕೀಯವನ್ನು (ಪ್ರ.ವಾ., ಮಾರ್ಚ್ 2) ಓದಿ ಆಘಾತವಾಯಿತು. ಪಂಚಭೂತಗಳಲ್ಲಿ ಒಂದಾದ ನೀರನ್ನು ದೈವೀಸ್ವರೂಪ ಎನ್ನುತ್ತೇವೆ. ಆದರೆ ಅಂಧಕಾರದ ಮಿಂಚಿನ ಓಟದಲ್ಲಿ ಪರಿಸರವನ್ನು ವೇಗವಾಗಿ ವಿನಾಶದ ಅಂಚಿಗೆ ತರುತ್ತಿದ್ದೇವೆ. ಉತ್ಪಾದನೆಯಾಗುತ್ತಿರುವ ಕೊಳಚೆ ನೀರಿನಲ್ಲಿ ಕೇವಲ ಶೇ 45ರಷ್ಟು ನೀರು ಶುದ್ಧವಾಗುತ್ತಿದೆ. ಇದಕ್ಕೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಮುಂದೊಂದು ದಿನ ಇಂದಿನ ಪೆಟ್ರೋಲ್ ಬೆಲೆಯನ್ನು ನೀರಿಗೆ ತೆರಬೇಕಾಗುತ್ತದೆ. ಯಾವ ಕೈಗಾರಿಕೆಗಳು ನೀರನ್ನು ಬಳಸಿಕೊಳ್ಳುತ್ತವೋ ಅವೇ ಕೈಗಾರಿಕೆಗಳು ನೀರನ್ನು ಶುದ್ಧೀಕರಿಸುವ ಹೊಣೆಯನ್ನು ಹೊತ್ತುಕೊಳ್ಳುವಂತೆ ಆಗಬೇಕು.

ಶೈಲಾ ನಾಗರಾಜ್, ಹಾನಗಲ್

ಯಾವ ವೃತ್ತಿ ಯಾರಿಗೂ ಮೀಸಲಲ್ಲ

'ಅರ್ಚಕ ವೃತ್ತಿಯನ್ನೂ ಬ್ರಾಹ್ಮಣರಿಂದ ಕಿತ್ತುಕೊಳ್ಳುವ ಪ್ರಯತ್ನ ನಡೆಯುತ್ತಿದೆ' ಎಂದು ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದ್ದಾರೆ (ಪ್ರ.ವಾ., ಮಾರ್ಚ್ 1). ಅವರ ಈ ಬೇಸರಕ್ಕೆ ಅರ್ಥವೇ ಇಲ್ಲ. ಏಕೆಂದರೆ ಇಂದು ಇಂಥ ವೃತ್ತಿ ಇಂಥದ್ದೇ ಜಾತಿಯವರಿಗೆ ಮೀಸಲು ಎಂಬುದಾಗಿ ಉಳಿದಿಲ್ಲ. ಸರ್ಕಾರದ ಆಡಳಿತದಲ್ಲಿರುವ ಮುಜರಾಯಿ ದೇವಸ್ಥಾನಗಳೇ ಅಲ್ಲದೆ ಅನೇಕ ಖಾಸಗಿ ದೇವಸ್ಥಾನಗಳಲ್ಲೂ ಬ್ರಾಹ್ಮಣೇತರರು ಅರ್ಚಕ ವೃತ್ತಿಗೆ ಬೇಕಾದ ವೈದಿಕ ವಿದ್ಯೆಯನ್ನು ಕಲಿತು ಅರ್ಚಕರಾಗಿ ವೃತ್ತಿಯನ್ನು ನಿರ್ವಹಿಸುತ್ತಿದ್ದಾರೆ.

ವಂಶಪರಂಪರಾಗತ ಕುಲಕಸುಬುಗಳನ್ನು ಇಂದು ನೂರಕ್ಕೆ ನೂರು ಆಯಾ ಕುಲದವರೇ ಮಾಡುತ್ತಿಲ್ಲ. ನಿರ್ದಿಷ್ಟ ವೃತ್ತಿಗೆ ಬೇಕಾದ ಅರ್ಹತೆಯನ್ನು ಹೊಂದಿದ, ಆಸಕ್ತಿಯುಳ್ಳ ಯಾರು ಬೇಕಾದರೂ ಯಾವ ವೃತ್ತಿಯನ್ನಾದರೂ ನಿರ್ವಹಿಸಲು ಸಂವಿಧಾನ ಅವಕಾಶ ಮಾಡಿಕೊಟ್ಟಿದೆ. ನಾವು ಜಾತ್ಯತೀತ ನೀತಿಯನ್ನು ಒಪ್ಪಿಕೊಂಡು ಏಳು ದಶಕಗಳೇ ಕಳೆದಿದ್ದರೂ ಅರ್ಚಕ ವೃತ್ತಿ ಕೇವಲ ಬ್ರಾಹ್ಮಣರಿಗೇ ಮೀಸಲು ಎಂಬ ಧೋರಣೆ ಸಂವಿಧಾನ ವಿರೋಧಿಯಾಗುತ್ತದೆ.

ಎನ್.ವಿ.ಅಂಬಾಮಣಿ ಮೂರ್ತಿ, ಬೆಂಗಳೂರು

ಬದುಕಿದ್ದಾಗ ಮನ ಮಿಡಿದಿದ್ದರೆ...

ಶ್ರೀರಂಗಪಟ್ಟಣ ತಾಲ್ಲೂಕಿನ ರಾಂಪುರ ಗ್ರಾಮದಲ್ಲಿ ಯಾವುದೇ ಪಗಾರ ಸಿಗದಿದ್ದರೂ ಹಲವು ವರ್ಷಗಳಿಂದ ಬೀದಿ ಗುಡಿಸುವ ಕೆಲಸವನ್ನು ಮಾಡುತ್ತಿದ್ದ ರಂಗಯ್ಯ ಎಂಬ ಪೌರಕಾರ್ಮಿಕ ಮೃತಪಟ್ಟಿದ್ದು, ಅವರಿಗೆ ಊರವರು ಸಕಲ ಮರ್ಯಾದೆಯೊಂದಿಗೆ ಅಂತಿಮ ವಿದಾಯ ಹೇಳಿದ್ದಾಗಿ ವರದಿಯಾಗಿದೆ (ಪ್ರ.ವಾ., ಮಾರ್ಚ್ 3). ಈ ಕಾರ್ಯಕ್ಕೆ ಆ ಊರಿನವರು ಅಭಿನಂದನಾರ್ಹರು. ಆದರೆ ರಂಗಯ್ಯ ಪಗಾರ ಇಲ್ಲದೆ ನಿಷ್ಠೆಯಿಂದ ದುಡಿಯುತ್ತಿದ್ದ ಸಂದರ್ಭದಲ್ಲಿ, ಅಂದರೆ ಬದುಕಿದ್ದಾಗ ಆತನಿಗೆ ಏನಾದರೂ ಆರ್ಥಿಕಾನುಕೂಲ ಕಲ್ಪಿಸಿದ್ದರೆ, ಊರವರು ಅವರ ಮೇಲೆ ಇಟ್ಟಿದ್ದ ಪ್ರೀತಿ ಸಾರ್ಥಕವಾಗುತ್ತಿತ್ತು.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ನೈತಿಕವಾಗಿ ಸಮರ್ಥನೀಯವಲ್ಲದ ನಡೆ

ರಾಜ್ಯದ ಇಬ್ಬರು ಸಚಿವರಿಗೆ ಸಂಬಂಧಪಟ್ಟ ಈಗಿನ ಬೆಳವಣಿಗೆಗಳು ವಿಭಿನ್ನ ರೀತಿಯವಾದರೂ, ಇವುಗಳಿಗೆ ಅವರು ಪ್ರತಿಕ್ರಿಯಿಸಿರುವ ರೀತಿ ಮತ್ತು ಅವರ ಧೋರಣೆಗಳು ನೈತಿಕತೆಯ ನೆಲೆಯಿಂದ ಸಮರ್ಥನೀಯವಲ್ಲ. ಒಬ್ಬರು, ಲೈಂಗಿಕ ಪ್ರಕರಣದಲ್ಲಿ ಆರೋಪ ಎದುರಿಸುತ್ತಿದ್ದಾರೆ. ಮತ್ತೊಬ್ಬರು, ಕೋವಿಡ್ ಲಸಿಕೆ ಪಡೆಯಲು ತಮ್ಮ ಸ್ಥಾನಬಲ ದುರ್ಬಳಕೆ ಮಾಡಿಕೊಂಡರೆಂಬ ಟೀಕೆಗಳು ಕೇಳಿಬಂದಿವೆ. ಕೆಲಸದ ಆಮಿಷವೊಡ್ಡಿ ಒಬ್ಬ ಯುವತಿಯನ್ನು ಲೈಂಗಿಕವಾಗಿ ಬಳಸಿಕೊಂಡ ಆರೋಪ ಹೊತ್ತ ರಮೇಶ ಜಾರಕಿಹೊಳಿ ಅವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಕೆಯಾಗಿರುವುದು ಅವರನ್ನು ಮತ್ತಷ್ಟು ಪೇಚಿಗೆ ಸಿಲುಕಿಸಿದೆ. ವಿಡಿಯೊದಲ್ಲಿ ಎಡಿಟ್ ಮಾಡಿ ಅನ್ಯರ ಮುಖಕ್ಕೆ ತಮ್ಮ ಮುಖವನ್ನು ಸೇರಿಸಲಾಗಿದೆ, ಇದು ತಮಗೆ ಕಳಂಕ ಹಚ್ಚುವ ಕಿಡಿಗೇಡಿತನ ಎಂದು ಈಗ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿರುವ ಅವರು ವಾದಿಸಿದ್ದಾರೆ.

ಮಂತ್ರಿಯಾಗಿ ತಾವು ಗಣ್ಯಾತಿಗಣ್ಯರು ಎಂದು ಭಾವಿಸಿರುವ ಬಿ.ಸಿ.ಪಾಟೀಲ ಅವರು, ಸರ್ಕಾರಿ ವೈದ್ಯಕೀಯ ಸಿಬ್ಬಂದಿಯನ್ನೇ ತಮ್ಮ ಮನೆಗೆ ಕರೆಸಿಕೊಂಡು ಕೋವಿಡ್ ಲಸಿಕೆ ಹಾಕಿಸಿಕೊಂಡಿದ್ದಾರೆ. ಲಸಿಕೆಯನ್ನು ಹಾಕಿಸಿಕೊಳ್ಳಲು ಅಪೇಕ್ಷಿಸುವವರು ಮೊದಲು ಕ್ರಮಪ್ರಕಾರ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು, ನಂತರ ಗೊತ್ತುಮಾಡಿದ ಸ್ಥಳಕ್ಕೆ ಹೋಗಿಯೇ ಚುಚ್ಚುಮದ್ದು ಹಾಕಿಸಿಕೊಳ್ಳಬೇಕು ಎಂಬುದು ಮಾರ್ಗಸೂಚಿಯಲ್ಲಿನ ನಿರ್ದೇಶನ. ಆದರೆ ನಮ್ಮ ಮಂತ್ರಿಮಹಾಶಯರು ಈ ಕ್ರಮವನ್ನು ಅನುಸರಿಸದೆ, ಮಾರ್ಗಸೂಚಿ ಬಗ್ಗೆ ತಮಗೆ ತಿಳಿದಿರಲಿಲ್ಲ ಎಂದು ಸಮಜಾಯಿಷಿ ನೀಡಿದ್ದಾರೆ. ಕೋವಿಡ್ ಪಿಡುಗಿನ ಅವಾಂತರ, ಲಸಿಕೆ ಸಿದ್ಧವಾಗಿದ್ದು, ಮೊದಲ ಹಂತದ ಲಸಿಕೆ ನೀಡುವಿಕೆ, ಎರಡನೇ ಹಂತದ ಲಸಿಕೆ ನೀಡಿಕೆ ಪ್ರಾರಂಭ, ಅಲ್ಲಿ ಅನುಸರಿಸಬೇಕಾದ ಕ್ರಮ ಎಲ್ಲವೂ ಸಾಮಾನ್ಯರಿಗೂ ತಿಳಿದಿರುವಾಗ ಸಚಿವರಿಗೆ ಮಾತ್ರ ಈ ಯಾವುದೂ ತಿಳಿಯದು! ಎಂಥಾ ಮುಗ್ಧತೆ. ಇಲ್ಲಿ ಗಮನಿಸಬೇಕಾದ ಇನ್ನೊಂದು ವಿಷಯವೆಂದರೆ, ಸರ್ಕಾರಿ ಸೇವೆಯಲ್ಲಿರುವ ವೈದ್ಯರು ತಮಗೆ ಕರೆ ಬಂದಾಗ, ಮಾರ್ಗಸೂಚಿ ಇರುವುದನ್ನು ಸಚಿವರ ಗಮನಕ್ಕೆ ತರದೆ, ಅದನ್ನು ಕಡೆಗಣಿಸಿ ಅವರ ನಿವಾಸಕ್ಕೆ ಹೋಗಿದ್ದು ತಪ್ಪು. ಮೇಲಧಿಕಾರಿಗಳು ಇದನ್ನು ಗಂಭೀರವಾಗಿ ಪರಿಗಣಿಸಿ ಅವರ ವಿರುದ್ಧ ಶಿಸ್ತುಕ್ರಮಕ್ಕೆ ಮುಂದಾಗಬೇಕು.

ನೈತಿಕತೆಯ ನೆಲೆಯಲ್ಲಿ ಈ ಇಬ್ಬರು ಮುಖಂಡರ ಧೋರಣೆ ಸರ್ವಥಾ ಮಾನ್ಯವಲ್ಲ. ಉತ್ತರದಾಯಿತ್ವದ ಸ್ಥಾನದಲ್ಲಿರುವವರು ನೈತಿಕತೆಗೆ ಹೊರತಾಗಿ ನಡೆದುಕೊಳ್ಳುವುದರಿಂದ ತಮಗೂ ತಾವು ಪ್ರತಿನಿಧಿಸುವ ಸರ್ಕಾರಕ್ಕೂ ಶೋಭೆ ತರುವುದಿಲ್ಲ ಎನ್ನುವುದನ್ನು ಅರಿಯದಷ್ಟು ಮುಗ್ಧರಾಗಿರಬಲ್ಲರೆಂದು ಊಹಿಸುವುದೂ ಸಾಧ್ಯವಿಲ್ಲ!

ಸಾಮಗ ದತ್ತಾತ್ರಿ, ಬೆಂಗಳೂರು

ದೂರದೃಷ್ಟಿ ಇರಬಹುದೇ?!

ಅಸ್ಸಾಂನ ಚಹಾ ತೋಟಗಳಲ್ಲಿ
ಕೂಲಿಯಾಳುಗಳ ಜೊತೆ ಚಹಾ
ಎಲೆ ಬಿಡಿಸಿದ್ದಾರೆ ಪ್ರಿಯಾಂಕಾ ಗಾಂಧಿ,
ಬಹುಶಃ ಭವಿಷ್ಯ ನುಡಿದಿರಲೂಬಹುದು
ಬಲ್ಲವರು 'ಮುಂದೆ ಒಳ್ಳೆಯದಾಗುತ್ತೆ'
ಚಹಾದಿಂದ ಎಂದು!
ಹಿಂದೆ ಚಹಾ ಮಾರಿದವರ ತಾಜಾ
ಉದಾಹರಣೆ ಕಣ್ಣ ಮುಂದಿದೆ ತಾನೇ?!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಸೋತು ಸೊರಗಿರುವ ಕಾಂಗ್ರೆಸ್ ಪಕ್ಷವು ಹಿರಿಯ ಮುಖಂಡರ ಒಳಜಗಳದಿಂದಾಗಿ ಇನ್ನಷ್ಟು ದುರ್ಬಲವಾಗಿದೆ. ಸೆಡ್ಡು ಹೊಡೆದು ನಿಂತಿರುವ ಹಲವು ಮುಖಂಡರನ್ನು ನಿಯಂತ್ರಿಸಲು ನಾಯಕತ್ವಕ್ಕೆ ಸಾಧ್ಯವಾಗುತ್ತಿಲ್ಲ. ನಾಲ್ಕು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ಚುನಾವಣೆ ಘೋಷಣೆಯಾಗಿದೆ. ಈ ಸಂದರ್ಭದಲ್ಲಿಯೂ ಪಕ್ಷದಲ್ಲಿ ಒಗ್ಗಟ್ಟು ಕಾಣಿಸುತ್ತಿಲ್ಲ. ಈ ಕಿತ್ತಾಟವು ಫಲಿತಾಂಶದ ಮೇಲೆ ಪರಿಣಾಮ ಬೀರುವ ಸಾಧ್ಯತೆಯೂ ಇದೆ

ಕಾಂಗ್ರೆಸ್ ಒಳಜಗಳದ ಕೋಲಾಹಲ



ಜಮ್ಮುವಿನಲ್ಲಿ 'ಭಿನ್ನಮತ'ದ ನಾಯಕರ ಸಭೆ: ಗುಲಾಂ ನಬಿ ಆಜಾದ್ ಆನಂದ್ ಶರ್ಮಾ, ಕಪಿಲ್ ಸಿಬಲ್ ಭೂಪಿಂದರ್ ಸಿಂಗ್ ಹೂಡಾ, ರಾಜ್ ಬಬ್ಬರ್ ಭಾಗಿಯಾಗಿದ್ದರು ಪಿಟಿಐ ಚಿತ್ರ

ಜಮ್ಮು ರ‍್ಯಾಲಿಯ ಏಟು, ತಿರುಗೇಟು

ರಾಜ್ಯಸಭೆಯಿಂದ ನಿವೃತ್ತರಾಗಿರುವ ಕಾಂಗ್ರೆಸ್ ನಾಯಕ ಗುಲಾಂ ನಬಿ ಆಜಾದ್ ಅವರನ್ನು ಭೇಟಿ ಮಾಡಲು ಕಾಂಗ್ರೆಸ್‌ನ ಕೆಲವು ಮುಖಂಡರು ಫೆಬ್ರುವರಿ 27ರ ಶನಿವಾರ ಜಮ್ಮುವಿನಲ್ಲಿ ರ‍್ಯಾಲಿ ನಡೆಸಿದ್ದರು. 2020ರ ಆಗಸ್ಟ್‌ನಲ್ಲಿ ಕಾಂಗ್ರೆಸ್‌ನ ನಾಯಕತ್ವ ಬದಲಾವಣೆಗೆ ಆಗ್ರಹಿಸಿ ಪತ್ರ ಬರೆದಿದ್ದ 23 ನಾಯಕರಲ್ಲಿ, 8 ಮಂದಿ ಈ ರ‍್ಯಾಲಿಯಲ್ಲಿ ಹಾಜರಿದ್ದರು. ಆಜಾದ್, ಆನಂದ್ ಶರ್ಮಾ, ಕಪಿಲ್ ಸಿಬಲ್, ಭೂಪಿಂದರ್ ಸಿಂಗ್ ಹೂಡಾ, ಮನೀಶ್ ತಿವಾರಿ, ರಾಜ್ ಬಬ್ಬರ್ ಮತ್ತು ವಿವೇಕ್ ತಂಖಾ ಅವರು ಈ ರ‍್ಯಾಲಿಯಲ್ಲಿ ಭಾಗಿಯಾಗಿದ್ದರು.

ರ‍್ಯಾಲಿಯಲ್ಲಿ ಮಾತನಾಡಿದ್ದ ಮುಖಂಡರು, ಆಜಾದ್ ಅವರನ್ನು ರಾಜ್ಯಸಭೆಯ ಸದಸ್ಯರಾಗಿ ಮುಂದುವರಿಸಬೇಕಿತ್ತು. ಆದರೆ, ಅವರನ್ನು ಪಕ್ಷವು ಕಡೆಗಣಿಸಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದರು. ಇದೇ ಸಭೆಯಲ್ಲಿ ಆನಂದ್ ಶರ್ಮಾ ಸಹ ಮಾತನಾಡಿದ್ದರು. ನಾವೆಲ್ಲರೂ ಕಾಂಗ್ರೆಸ್ ಪಕ್ಷದ ಬಾಡಿಗೆದಾರರಲ್ಲ. ಬದಲಿಗೆ ಕಾಂಗ್ರೆಸ್‌ನ ಸಹ-ಮಾಲೀಕರು. ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಪಕ್ಷವು ಕೋಮುವಾದಿ ಪಕ್ಷಗಳ ಜತೆ ಮೈತ್ರಿಮಾಡಿಕೊಂಡಿದೆ. ಇದು ಪಕ್ಷದ ಸಿದ್ಧಾಂತ, ಗಾಂಧಿವಾದ ಮತ್ತು ನೆಹರೂ ಧ್ಯೇಯಗಳಿಗೆ ವಿರುದ್ಧವಾದುದು. ಈ ಮೈತ್ರಿಗೂ ಮುನ್ನ ಪಕ್ಷದ ಕಾರ್ಯಕಾರಿಣಿಯಲ್ಲಿ ಒಪ್ಪಿಗೆ ಪಡೆಯಬೇಕಿತ್ತು ಎಂದಿದ್ದರು.

ಕಾಂಗ್ರೆಸ್‌ನ ಹಲವು ನಾಯಕರು ಈ ಆಕ್ಷೇಪಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ. ಆಯಾ ರಾಜ್ಯಗಳಲ್ಲಿ ಮಾಡಿಕೊಂಡಿರುವ ಮೈತ್ರಿ ಅಲ್ಲಿಗೆ ಸೀಮಿತವಾದುದು. ಕಾಂಗ್ರೆಸ್‌ನ ಸಿದ್ಧಾಂತ ಮತ್ತು ಈ ಪಕ್ಷಗಳ ಸಿದ್ಧಾಂತಗಳ ನಡುವೆ ಅಂತರವಿದೆ. ಈ ಪಕ್ಷಗಳ ಜತೆ ಮೈತ್ರಿ ಮಾಡಿಕೊಂಡಿರುವ ಕಾರಣಕ್ಕೆ, ಅವರ ಸಿದ್ಧಾಂತಗಳನ್ನು ಶೇ 100ರಷ್ಟೂ ಒಪ್ಪಿಕೊಂಡಿದ್ದೇವೆ ಎಂದರ್ಥವಲ್ಲ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಸ್ಪಷ್ಟನೆ ನೀಡಿದ್ದರು.

ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧಿರ್ ರಂಜನ್ ಚೌಧರಿ ಸಹ ಇದಕ್ಕೆ ಪ್ರತಿಕ್ರಿಯೆ ನೀಡಿದ್ದರು. ಪಶ್ಚಿಮ ಬಂಗಾಳದಲ್ಲಿ ಎಡಪಕ್ಷಗಳ ನೇತೃತ್ವದ ಮೈತ್ರಿಕೂಟದಲ್ಲಿ ಕಾಂಗ್ರೆಸ್ ಸಹ ಇದೆ. ಎಡಪಕ್ಷಗಳ ನಿರ್ಧಾರವನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಇದು ಕೋಮುವಾದವಲ್ಲ. ಪಕ್ಷದ ಹಿರಿಯ ನಾಯಕರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಹೊಗಳುತ್ತಾ ಸಮಯ ವ್ಯರ್ಥ ಮಾಡುವುದನ್ನು ನಿಲ್ಲಿಸಬೇಕು ಎಂದು ಅವರು ತಾಕೀತು ಮಾಡಿದ್ದರು.

'ಬಗ್ಗಿದವನಿಗೆ ಒಂದು ಗುದ್ದು ಜಾಸ್ತಿ' ಎಂಬ ಮಾತಿದೆ. ಸತತ ಸೋಲುಗಳಿಂದ ಕಂಗೆಟ್ಟಿರುವ ಕಾಂಗ್ರೆಸ್‌ಗೆ ಈಗ ಅದೇ ಸ್ಥಿತಿ ಎದುರಾಗಿದೆ. 2014ರ ಲೋಕಸಭಾ ಚುನಾವಣೆಯ ನಂತರ ಕಾಂಗ್ರೆಸ್ ಪಕ್ಷವು ಒಂದು ಶತಮಾನಕ್ಕೂ ಹೆಚ್ಚಿನ ತನ್ನ ಇತಿಹಾಸದಲ್ಲೇ ಕುಸಿದಿರದಷ್ಟು ಆಳಕ್ಕೆ ಕುಸಿದಿದೆ.



ರಾಹುಲ್ ಗಾಂಧಿ

2014ರ ಲೋಕಸಭಾ ಚುನಾವಣೆಯ ಸೋಲು ಒಂದೆಡೆಯಾದರೆ, ಆ ನಂತರ ನಡೆದ ವಿಧಾನಸಭಾ ಚುನಾವಣೆಗಳಲ್ಲೂ ಪಕ್ಷ ಒಂದೊಂದೇ ರಾಜ್ಯದಲ್ಲಿ ಅಧಿಕಾರ ಕಳೆದುಕೊಳ್ಳಬೇಕಾಯಿತು. ಗೆದ್ದಿದ್ದ ರಾಜ್ಯಗಳೂ 'ಪಕ್ಷಾಂತರ' ರಾಜಕಾರಣದಿಂದಾಗಿ ಕೈಜಾರಿದವು. ಫೆಬ್ರುವರಿ ತಿಂಗಳಲ್ಲಿ ಪುದುಚೇರಿ ಸರ್ಕಾರ ಪತನವಾದ ನಂತರ, ದಕ್ಷಿಣ ಭಾರತದ ಒಂದೇ ಒಂದು ರಾಜ್ಯದಲ್ಲೂ ಕಾಂಗ್ರೆಸ್ ಸರ್ಕಾರ ಇಲ್ಲದಂತಾಗಿದೆ. ಈಗ ಮಿತ್ರಪಕ್ಷಗಳೂ ಕಾಂಗ್ರೆಸ್‌ನಿಂದ ವಿಮುಖವಾಗುವಂಥ ಸ್ಥಿತಿ ನಿರ್ಮಾಣವಾಗಿದೆ.

ಭರವಸೆಯ ಹಲವು ನಾಯಕರು ಕಾಂಗ್ರೆಸ್ ತೊರೆದು ಆಗಲೇ ಬಿಜೆಪಿ ಸೇರಿದ್ದಾರೆ. ಜತೆಗೆ, ಪಕ್ಷದ ಹಲವು ಹಿರಿಯ ಮುಖಂಡರು ನಾಯಕತ್ವದ ವಿರುದ್ಧ ತಿರುಗಿ ಬಿದ್ದಿದ್ದಾರೆ. ಇದು ಕಾಂಗ್ರೆಸ್‌ನ ಸಂಕಷ್ಟಗಳನ್ನು ಇನ್ನಷ್ಟು ಹೆಚ್ಚಿಸಿದೆ.

'ಜಿ–23' ಹುಟ್ಟು

ಪಕ್ಷದ ನಾಯಕತ್ವ ಬದಲಾಗಬೇಕು, ರಚನಾತ್ಮಕವಾಗಿಯೂ ಪಕ್ಷದಲ್ಲಿ ಕೆಲವು ಬದಲಾವಣೆಗಳು ಆಗಬೇಕು ಎಂದು ಒತ್ತಾಯಿಸಿ 2020ರ ಆಗಸ್ಟ್ ತಿಂಗಳಲ್ಲಿ ಪಕ್ಷದ 23 ನಾಯಕರ ಗುಂಪು (ಜಿ–23) ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆಯಿತು. ನಾಯಕತ್ವ ಬಿಕ್ಕಟ್ಟು ಇನ್ನಷ್ಟು ತೀವ್ರಗೊಳ್ಳಲು ಇದು ಕಾರಣವಾಯಿತು ಎನ್ನಲಾಗಿದೆ.

'ಪತ್ರ ಪ್ರಸಂಗ' ನಡೆದ ಕೆಲವೇ ದಿನಗಳಲ್ಲಿ ವಿವಿಧ ಸಮಿತಿಗಳ ಪುನಾರಚನೆ ಮಾಡಿದ ಸೋನಿಯಾ, ಕೆಲವು ಹಿರಿಯ ನಾಯಕರನ್ನು ಪಕ್ಷದ ಹೊಣೆಯಿಂದ ದೂರವಿಟ್ಟು, ಅವರಿಗೆ ಸಂದೇಶ ರವಾನಿಸಿದರು. ಅದಾಗಿ ಸ್ವಲ್ಪ ಕಾಲ ಎಲ್ಲವೂ ಶಾಂತವಾದಂತೆ ಕಂಡುಬಂದರೂ ಐದು ವಿಧಾನಸಭೆಗಳಿಗೆ ಚುನಾವಣೆ ಘೋಷಣೆಯಾಗುತ್ತಿದ್ದಂತೆ ನಾಯಕತ್ವ ಬಿಕ್ಕಟ್ಟಿನ ವಿಚಾರ ಮತ್ತೆ ಮುನ್ನೆಲೆಗೆ ಬಂದಿದೆ. ಜಿ–23 ನಾಯಕರು ಜಮ್ಮುವಿನಲ್ಲಿ ಸಭೆಸೇರಿ 'ಕಾಂಗ್ರೆಸ್ ದುರ್ಬಲವಾಗಿದೆ' ಎಂದಿದ್ದಾರೆ.

'ಜಿ–23 ನಾಯಕರಿಗೆ ರಾಹುಲ್, ಪ್ರಿಯಾಂಕಾ, ಅಧಿರ್‌ರಂಜನ್ ಚೌಧರಿ ಮುಂತಾದ ನಾಯಕರು ಪ್ರತ್ಯುತ್ತರ ನೀಡಲು ಆರಂಭಿಸಿದ್ದಾರೆ. ಸಮಸ್ಯೆ ಬಗೆಹರಿಯುವ ಲಕ್ಷಣ ಇಲ್ಲ ಎಂಬುದನ್ನು ಈ ಬೆಳವಣಿಗೆಗಳು ತೋರಿಸುತ್ತವೆ. ಇದರ ಪರಿಣಾಮ ಮುಂಬರುವ ಚುನಾವಣೆಗಳ ಮೇಲೆ ಆಗಲಿದೆ' ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಿದ್ದಾರೆ.

ನಬಿಗೆ ಪ್ರಧಾನಿ ಹೊಗಳಿಕೆ

ಪ್ರಧಾನಿ ನರೇಂದ್ರ ಮೋದಿ ಅವರು ಕಾಂಗ್ರೆಸ್ ಮುಖಂಡ ಗುಲಾಂ ನಬಿ ಆಜಾದ್ ಬಗ್ಗೆ ಇತ್ತೀಚೆಗೆ ರಾಜ್ಯಸಭೆ ಕಲಾಪದಲ್ಲಿ ಮೆಚ್ಚುಗೆಯ ಮಾತುಗಳನ್ನಾಡಿದ್ದರು. ಆಜಾದ್ ನಿವೃತ್ತಿಯ ದಿನ ಮಾತನಾಡಿದ ಅವರು, 'ಪ್ರತಿಪಕ್ಷ ನಾಯಕ ಗುಲಾಂ ನಬಿ ಜೀ ಅವರ ಸ್ಥಾನವನ್ನು ತುಂಬುವುದು ಕಷ್ಟ. ಅವರು ಪಕ್ಷಕ್ಕಿಂತ ಮಿಗಿಲಾಗಿ ಇಡೀ ದೇಶದ ಬಗ್ಗೆ ಕಾಳಜಿ ಉಳ್ಳವರಾಗಿದ್ದರು' ಎಂದು ಹೇಳುತ್ತಾ ಮೋದಿ ಕೆಲಕಾಲ ಗದ್ಗದಿತರಾಗಿದ್ದರು. ಕಾಶ್ಮೀರದಲ್ಲಿ ಉಗ್ರರ ದಾಳಿಗೆ ಸಿಲುಕಿಕೊಂಡಿದ್ದ ಗುಜರಾತಿ ನಾಗರಿಕರ ರಕ್ಷಣೆಗೆ ಆಜಾದ್ ನೆರವಾಗಿದ್ದ ಕ್ಷಣವನ್ನು ಸ್ಮರಿಸಿದ್ದರು.

ಪ್ರಧಾನಿಗೆ ನಬಿ ಶ್ಲಾಘನೆ

ಇದಾದ ಕೆಲವೇ ದಿನಗಳಲ್ಲಿ ಪ್ರಧಾನಿಯನ್ನು ಗುಲಾಂ ನಬಿ ಹೊಗಳಿದರು. ಬೆಳೆದು ಬಂದ ಹಾದಿಯನ್ನು ಮರೆಯದ ಪ್ರಧಾನಿಯ ಮುಕ್ತ ಮಾತುಗಳನ್ನು ಪ್ರಶಂಸಿಸಿದರು. 'ಹಳ್ಳಿಯಿಂದ ಬಂದಿದ್ದಾಗಿ ಮೋದಿ ಹೇಳಿಕೊಂಡಿದ್ದಾರೆ. ಚಹಾ ಮಾರಾಟ ಮಾಡುತ್ತಿದ್ದುದಾಗಿಯೂ ಹೇಳಿದ್ದಾರೆ. ನನಗೆ ಮೋದಿ ಅವರ ಜತೆ ರಾಜಕೀಯ ಭಿನ್ನಾಭಿಪ್ರಾಯ ಇರಬಹುದು. ಆದರೆ ಅವರ ಮುಕ್ತ ಮಾತು ಇಷ್ಟವಾಯಿತು' ಎಂದು ಹೇಳಿದ್ದರು.

ಕಾಂಗ್ರೆಸ್ ಆಕ್ರೋಶ

ಮೋದಿ ಅವರನ್ನು ಹಾಡಿಹೊಗಳಿದ ನಬಿ ವಿರುದ್ಧ ಕಾಂಗ್ರೆಸ್ ನಿರೀಕ್ಷೆಯಂತೆಯೇ ಆಕ್ರೋಶ ವ್ಯಕ್ತಪಡಿಸಿತು. ಮೋದಿಯನ್ನು ಹೊಗಳುತ್ತಾ ಸಮಯ ವ್ಯರ್ಥಮಾಡುವುದನ್ನು ನಿಲ್ಲಿಸಿ ಎಂದು ಪಕ್ಷ ಸೂಚನೆ ನೀಡಿತು. ಅತ್ತ, ಜಮ್ಮು-ಕಾಶ್ಮೀರ ಕಾಂಗ್ರೆಸ್ ಘಟಕವು ನಬಿ ಆಜಾದ್ ಅವರನ್ನು ಪಕ್ಷದಿಂದ ಉಚ್ಚಾಟಿಸಿ ಎಂದು ಆಗ್ರಹಿಸಿದ ವಿದ್ಯಮಾನವೂ ನಡೆಯಿತು. ಕಾರ್ಯಕರ್ತರು ಜಮ್ಮುವಿನಲ್ಲಿ ಪ್ರತಿಭಟನೆ ನಡೆಸಿ, ಪ್ರತಿಕೃತಿ ದಹಿಸಿದರು.

ಬಿಜೆಪಿ ಟೀಕೆ

ನಬಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ ಕಾಂಗ್ರೆಸ್ ನಡೆಗೂ ಬಿಜೆಪಿ ಟೀಕೆ ಮಾಡಿದೆ. 'ಪ್ರಧಾನಿ ಮೋದಿ ಅವರನ್ನು ದ್ವೇಷಿಸುವುದು ಮಾತ್ರ ಕಾಂಗ್ರೆಸ್‌ನ ಕಾರ್ಯಸೂಚಿಯಾಗಿದೆ. ಮೋದಿಯನ್ನು ಹೊಗಳುವವರನ್ನು ಶಿಕ್ಷಿಸುವುದು ಕಾಂಗ್ರೆಸ್‌ನ ರಕ್ತದಲ್ಲಿಯೇ ಇದೆ' ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಟೀಕಿಸಿದರು.

ಜಾತ್ಯತೀತತೆ ದ್ವಂದ್ವದ ಬಂದಿ

ಒಳಗಿನ ಒಡಕು, ನಾಯಕತ್ವದ ಬಿಕ್ಕಟ್ಟಿನ ಜತೆಗೆ ಕಾಂಗ್ರೆಸ್ ಪಕ್ಷವನ್ನು ಕಾಡುತ್ತಿರುವ ಇನ್ನೊಂದು ದೊಡ್ಡ ಸಮಸ್ಯೆ ಜಾತ್ಯತೀತತೆಯ ದ್ವಂದ್ವ. ಒಂದೆಡೆ, ಹಿಂದುತ್ವವನ್ನೇ ಗಟ್ಟಿಯಾಗಿ ಹಿಡಿದುಕೊಂಡು ದಿನದಿಂದ ದಿನಕ್ಕೆ ಪ್ರಬಲವಾಗುತ್ತಿರುವ ಬಿಜೆಪಿ ಇದೆ; ಇನ್ನೊಂದೆಡೆ, ಕಾಂಗ್ರೆಸ್‌ನ ಅಲ್ಪಸಂಖ್ಯಾತ ಮತಬ್ಯಾಂಕ್ ಬಹುತೇಕ ಕರಗಿ ಹೋಗಿದೆ. ಅಸಾದುದ್ದೀನ್ ಒವೈಸಿ ನೇತೃತ್ವದ ಎಐಎಂಐಎಂ ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಐದು ಕ್ಷೇತ್ರಗಳನ್ನು ಗೆದ್ದಿದೆ. ಗುಜರಾತ್‌ನ ನಗರಪಾಲಿಕೆ ಚುನಾವಣೆಯಲ್ಲಿಯೂ ಈ ಪಕ್ಷ 17 ವಾರ್ಡ್‌ಗಳಲ್ಲಿ ಗೆದ್ದಿದೆ. ಅಲ್ಪಸಂಖ್ಯಾತ ಮತಬ್ಯಾಂಕ್ ಅನ್ನು ಕಾಂಗ್ರೆಸ್ ನೆಚ್ಚಿಕೊಳ್ಳಲು ಸಾಧ್ಯವಿಲ್ಲ ಎಂಬುದರ ಸ್ಪಷ್ಟ ಸೂಚನೆ ಇದು.

ಪಶ್ಚಿಮ ಬಂಗಾಳದಲ್ಲಿ ಅಬ್ಬಾಸ್ ಸಿದ್ದಿಕಿ ನೇತೃತ್ವದ ಇಂಡಿಯನ್ ಸೆಕ್ಯುಲರ್ ಫ್ರಂಟ್ (ಐಎಸ್‌ಎಫ್) ಜತೆಗಿನ ಮೈತ್ರಿಯನ್ನು ಕಾಂಗ್ರೆಸ್ ಪಕ್ಷ ಬಲವಾಗಿ ಸಮರ್ಥಿಸಿಕೊಳ್ಳುತ್ತಿದೆ. ಮಹಾರಾಷ್ಟ್ರದಲ್ಲಿ ಶಿವಸೇನಾ ಜತೆಗೆ ಮೈತ್ರಿ ಮಾಡಿಕೊಳ್ಳಲು ಕಾಂಗ್ರೆಸ್ ಕಳೆದ ವರ್ಷ ಹಿಂದೇಟು ಹಾಕಿತ್ತು. ರಾಷ್ಟ್ರ ರಾಜಕಾರಣದಲ್ಲಿನ ಅಸ್ತಿತ್ವ ಕಿರಿದಾಗುತ್ತಾ ಸಾಗಿದಂತೆ ಪಕ್ಷವು ಒಂದಕ್ಕೊಂದು ವ್ಯತಿರಿಕ್ತವಾದ ತೀರ್ಮಾನಗಳನ್ನು ತೆಗೆದುಕೊಳ್ಳುವ ಅನಿವಾರ್ಯದಲ್ಲಿದೆ.

ಐಎಸ್‌ಎಫ್ ಜತೆಗಿನ ಮೈತ್ರಿಯ ಬಗ್ಗೆ ಹಿರಿಯ ಮುಖಂಡ ಆನಂದ್ ಶರ್ಮಾ ಅವರ ವಿಮರ್ಶೆಯ ಬಗ್ಗೆ ರಾಜಕೀಯ ವಿಶ್ಲೇಷಕ ರಶೀದ್ ಕಿದ್ವಾಯಿ ಹೀಗೆ ಹೇಳುತ್ತಾರೆ: 'ಕಾಂಗ್ರೆಸ್ ಪಕ್ಷವು ತನ್ನ ದೀರ್ಘಾವಧಿ ಹಿತಾಸಕ್ತಿಗಳ ಬಗ್ಗೆ ಗಮನ ಹರಿಸಬೇಕು. ಜತೆಗೆ, ಈಗ, ಚುನಾವಣೆಯಲ್ಲಿಯೂ ಗೆಲ್ಲಬೇಕು. ಈ ಎರಡರ ನಡುವೆ ಒಂದು ರೀತಿಯ ಸಮತೋಲನ ಸಾಧಿಸಲೇಬೇಕು. ಕುಸಿದು ಹೋಗಿರುವ ಪಕ್ಷವು ಚುನಾವಣೆ ಗೆದ್ದು ಪ್ರಸ್ತುತತೆ ಉಳಿಸಿಕೊಳ್ಳಲು ವಾಸ್ತವಿಕ ನೆಲೆಗಟ್ಟಿನ ಮೈತ್ರಿಯನ್ನೂ ಮಾಡಿಕೊಳ್ಳಬೇಕು'.

ಜಾತ್ಯತೀತತೆಯ ದ್ವಂದ್ವದಲ್ಲಿ ಬಂದಿಯಾಗಿರುವ ಕಾಂಗ್ರೆಸ್ ಪಕ್ಷವು ಒಂದಕ್ಕೊಂದು ವಿರೋಧಾಭಾಸಕರವಾದ ಎರಡು ಅಥವಾ ಅದಕ್ಕಿಂತ ಹೆಚ್ಚು ದನಿಗಳಲ್ಲಿ ಮಾತಾಡುತ್ತಿದೆ. ಮಧ್ಯಮ ಮಾರ್ಗದ ಈ ಪಕ್ಷಕ್ಕೆ ವೈವಿಧ್ಯಮಯ ವರ್ಗಗಳನ್ನು ತಲುಪಲು ಇಂತಹ ಇಬ್ಬಂದಿತನವೇ ನೆರವಾಗುತ್ತದೆ. ಹಾಗಾಗಿ ಕಾಂಗ್ರೆಸ್ ಹಿಂದಿನಿಂದಲೂ ಹೀಗೆಯೇ ಇತ್ತು ಎನ್ನುವವರೂ ಇದ್ದಾರೆ. ಹಾಗಾಗಿಯೇ, ಜಾತ್ಯತೀತವಾದ ಗಟ್ಟಿ ನಿಲುವು ತಳೆಯಬೇಕು ಎಂದು ದಿಗ್ವಿಜಯ್ ಸಿಂಗ್ ಅವರಂತಹ ಮುಖಂಡರ ಒತ್ತಾಯವನ್ನು ಪಕ್ಷವು ಗಂಭೀರವಾಗಿ ಪರಿಗಣಿಸುವುದೇ ಇಲ್ಲ.

2014ರ ಲೋಕಸಭಾ ಚುನಾವಣೆ ಸೋಲಿನ ಬಳಿಕ, ಸೋಲಿಗೆ ಕಾರಣ ಹುಡುಕಲು ಎ.ಕೆ. ಆ್ಯಂಟನಿ ನೇತೃತ್ವದ ಸಮಿತಿಯನ್ನು ಕಾಂಗ್ರೆಸ್ ನೇಮಿಸಿತ್ತು. 'ಮುಸ್ಲಿಂ ಓಲೈಕೆ'ಯ ಹಣೆಪಟ್ಟಿಯೇ ಸೋಲಿನ ಮುಖ್ಯ ಕಾರಣಗಳಲ್ಲಿ ಒಂದು ಎಂದು ಈ ಸಮಿತಿಯ ವರದಿಯಲ್ಲಿ ಹೇಳಲಾಗಿತ್ತು. ನಂತರದ ವರ್ಷಗಳಲ್ಲಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು 'ಜನಿವಾರಧಾರಿ ಬ್ರಾಹ್ಮಣ', 'ಶಿವಭಕ್ತ' ಎಂದು ಬಿಂಬಿಸುವ ಯತ್ನಗಳೂ ನಡೆದವು. ಪಕ್ಷದ ಕೆಲವು ಮುಖಂಡರು ಉಲ್ಲೇಖಿಸಿದ್ದ 'ಹಿಂದೂ ಭಯೋತ್ಪಾದನೆ', 'ಕೇಸರಿ ಭಯೋತ್ಪಾದನೆ' ವಿಚಾರಗಳಿಂದ ಪಕ್ಷವು ದೂರ ಸರಿಯಿತು.

ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರ ತವರು ರಾಜ್ಯ ಗುಜರಾತ್‌ನಲ್ಲಿ ಎಐಎಂಐಎಂ ಪಕ್ಷವು ಕೆಲವು ಸ್ಥಾನಗಳನ್ನು ಗೆದ್ದಿರುವುದು ಮುಸ್ಲಿಮರು ಕಾಂಗ್ರೆಸ್ ಅನ್ನು ಬಿಟ್ಟು ಬೇರೆ ಆಯ್ಕೆಗಳ ಬಗ್ಗೆ ಯೋಚಿಸುತ್ತಿದ್ದಾರೆ ಎಂಬುದರ ಸೂಚನೆ. ಜತೆಗೆ, ಬಿಜೆಪಿಯನ್ನು ಸೋಲಿಸುವುದೇ ಮುಸ್ಲಿಮರ ಏಕೈಕ ಕಾರ್ಯಸೂಚಿ ಅಲ್ಲ ಎಂಬುದನ್ನೂ ಇದು ಹೇಳುತ್ತಿದೆ. ಉತ್ತರ ಪ್ರದೇಶ, ಬಿಹಾರದಂತಹ ದೊಡ್ಡ ರಾಜ್ಯಗಳಲ್ಲಿ ಮುಸ್ಲಿಂ ಮತಗಳು ಎಸ್‌ಪಿ, ಬಿಎಸ್‌ಪಿ, ಆರ್‌ಜೆಡಿ, ಜೆಡಿಯು ಪಾಲಾಗಿವೆ. ಇದು ಕಾಂಗ್ರೆಸ್‌ನ ಜಾತ್ಯತೀತತೆಯ ದ್ವಂದ್ವವನ್ನು ಇನ್ನಷ್ಟು ಹೆಚ್ಚಿಸಬಹುದು.

ವರದಿ: ಆನಂದ್‌ಶರ್ಮಾ, ಉದಯ ಯು., ಜಯಸಿಂಹ. ಆರ್. ಅಮೃತಕಿರಣ್ ಬಿ.ಎಂ.

ನ್ಯಾಯಮೂರ್ತಿಗಳು ಕ್ಷಮೆ ಕೇಳಲು ಒತ್ತಾಯ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯು ಅತ್ಯಾಚಾರ ಪ್ರಕರಣವೊಂದರ ವಿಚಾರಣೆ ನಡೆಸುವಾಗ, 'ಸಂತ್ರಸ್ತೆಯನ್ನು ವಿವಾಹವಾಗಲು ನೀನು ಸಿದ್ಧನಿದ್ದೀಯಾ' ಎಂದು ಆರೋಪಿಯಲ್ಲಿ ಪ್ರಶ್ನಿಸಿರುವುದು ಭಾರಿ ಟೀಕೆಗೆ ಕಾರಣವಾಗಿದೆ.

ಅನೇಕ ಗಣ್ಯರು, ಕಲಾವಿದರು, ಲೇಖಕರು ನ್ಯಾಯಮೂರ್ತಿಗಳಿಗೆ ಪತ್ರ ಬರೆದಿದ್ದು, 'ವಿಚಾರಣೆಯ ಸಂದರ್ಭದಲ್ಲಿ ಆಡಿದ್ದ ಮಾತುಗಳನ್ನು ಹಿಂತೆಗೆದುಕೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

ಈ ಕುರಿತು ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ ಅವರಿಗೆ ಪತ್ರ ಬರೆದಿರುವ ಸಿಪಿಎಂ ಪಾಲಿಟ್ ಬ್ಯೂರೊ ಸದಸ್ಯೆ ಬೃಂದಾ ಕಾರಟ್ ಅವರು, 'ಅತ್ಯಾಚಾರದಂಥ ಹೀನ ಕೃತ್ಯ ನಡೆಸುವವರ ಬೆಂಬಲಕ್ಕೆ ನ್ಯಾಯಾಂಗ ವ್ಯವಸ್ಥೆ ನಿಲ್ಲುತ್ತದೆ ಎಂಬ ಭಾವನೆ ಮೂಡಿಸುವ ಸಂದೇಶವನ್ನು ನ್ಯಾಯಾಲಯವು ರವಾನಿಸಬಾರದು' ಎಂದಿದ್ದಾರೆ.

'ಮಕ್ಕಳ ಮೇಲೆ ಅತ್ಯಾಚಾರ ನಡೆಸಿದವರಿಗೆ ಜಾಮೀನು ನೀಡುವುದಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸುವಾಗ ಕೇಳುವ ಪ್ರಶ್ನೆಗಳು, ಬಳಸುವ ಪದಗಳು ಹಾಗೂ ಕ್ರಿಯೆಗಳು ಗಂಭೀರ ಪರಿಣಾಮ ಉಂಟುಮಾಡುತ್ತವೆ. ದಯವಿಟ್ಟು ನಿಮ್ಮ ಮಾತುಗಳನ್ನು ಮರುಪರಿಶೀಲಿಸಬೇಕು ಮತ್ತು ಅವುಗಳನ್ನು ವಾಪಸ್ ಪಡೆಯಬೇಕು. ಮಾತ್ರವಲ್ಲದೆ, ಆರೋಪಿಗೆ ಕೆಳಹಂತದ ನ್ಯಾಯಾಲಯವು ಜಾಮೀನು ನೀಡಿರುವುದು ತಪ್ಪು ಎಂಬ ಬಾಂಬೆ ಹೈಕೋರ್ಟ್‌ನ ಔರಂಗಾಬಾದ್ ಪೀಠವು ನೀಡಿದ ತೀರ್ಪನ್ನು ಎತ್ತಿಹಿಡಿಯಬೇಕು' ಎಂದು ವೃಂದಾ ಅವರು ಮುಖ್ಯ ನ್ಯಾಯಮೂರ್ತಿಗೆ ಬರೆದ ಪತ್ರದಲ್ಲಿ ಮನವಿ ಮಾಡಿದ್ದಾರೆ.

'ಅತ್ಯಾಚಾರ ನಡೆದಾಗ ಬಾಲಕಿ 16 ವರ್ಷದವಳಾಗಿದ್ದಳು. ಆರೋಪಿಯು 10–12 ಬಾರಿ ಈ ಕೃತ್ಯವನ್ನು ನಡೆಸಿದ್ದಾನೆ, ಬೇಸತ್ತ ಬಾಲಕಿ ಆತ್ಮಹತ್ಯೆಯ ಪ್ರಯತ್ನ ನಡೆಸಿದ್ದಾಳೆ. ಇದನ್ನು 'ಒಪ್ಪಿಗೆ' ಎಂದು ಹೇಳಲು ಸಾಧ್ಯವೇ? ಏನೇ ಆಗಿದ್ದರೂ, ಸಂತ್ರಸ್ತೆಯು ಅಪ್ರಾಪ್ತ ವಯಸ್ಕಳಾಗಿದ್ದರೆ, 'ಒಪ್ಪಿಗೆ'ಯ ಲೈಂಗಿಕತೆಗೂ ಕಾನೂನಿನಲ್ಲಿ ಅವಕಾಶ ಇಲ್ಲ. ಹೀಗಿರುವಾಗ, ಇಂಥ ಪ್ರಶ್ನೆ ಸಂತ್ರಸ್ತೆಯ ಮನಸ್ಸಿನ ಮೇಲೆ ಬೀರಬಹುದಾದ ಪರಿಣಾಮದ ಬಗ್ಗೆಯೂ ನ್ಯಾಯಾಲಯ ಯೋಚಿಸಬೇಕು' ಎಂದು ಬೃಂದಾ ಹೇಳಿದ್ದಾರೆ.

'ಸಂತ್ರಸ್ತೆ ಒಪ್ಪಿದರೂ– ಒಪ್ಪದಿದ್ದರೂ, ಅತ್ಯಾಚಾರಿಯು ಆಕೆಯನ್ನು ಮದುವೆಯಾಗಲು ಒಪ್ಪಿದರೆ ಆತ ಜೈಲುಶಿಕ್ಷೆಯಿಂದ ಪಾರಾಗಬಹುದು ಎಂಬ ಸಂದೇಶ ಈ ಪ್ರಶ್ನೆಗಳಿಂದ ರವಾನೆಯಾಗುತ್ತಿದೆ. ನ್ಯಾಯಾಂಗ ವ್ಯವಸ್ಥೆಯು ಸಂತ್ರಸ್ತೆಯ ಹಿತಾಸಕ್ತಿಗಳನ್ನು ಕಾಪಾಡಬೇಕು. ದುರ್ದೈವವಶಾತ್ ಈ ಪ್ರಕರಣದಲ್ಲಿ ಅದಕ್ಕೆ ವಿರುದ್ಧವಾದದ್ದು ಸಂಭವಿಸಿದೆ' ಎಂದು ಅವರು ಪತ್ರದಲ್ಲಿ ಹೇಳಿದ್ದಾರೆ.

ಮಹಿಳಾ ಹಕ್ಕುಗಳ ಹೋರಾಟಗಾರರಾದ ಕವಿತಾ ಕೃಷ್ಣನ್, ಅನ್ನಿ ರಾಜಾ ಹಾಗೂ ಅಡ್ಮಿರಲ್ ಎಲ್. ರಾಮದಾಸ್, ಅರುಣಾ ರಾಯ್, ನಿಖಿಲ್ ಡೇ, ಪಮೇಲಾ ಫಿಲಿಪೋಸ್, ಆನಂದ್ ಸಹಾಯ್, ದೇವಕಿ ಜೈನ್, ಜಾನ್ ದಯಾಳ್ ಮುಂತಾದವರೂ ಮುಖ್ಯ ನ್ಯಾಯಮೂರ್ತಿಗೆ ಪತ್ರಬರೆದಿದ್ದು, ತಮ್ಮ ಹೇಳಿಕೆಗಾಗಿ ಕ್ಷಮೆ ಯಾಚಿಸಬೇಕು ಎಂದು ಒತ್ತಾಯಿಸಿದ್ದಲ್ಲದೆ ಮುಖ್ಯನ್ಯಾಯಮೂರ್ತಿ ಹುದ್ದೆಯಿಂದ ಕೂಡಲೇ ಕೆಳಗಿಳಿಯಬೇಕು ಎಂದು ಒತ್ತಾಯಿಸಿದ್ದಾರೆ. ವಿವಿಧ ಕ್ಷೇತ್ರಗಳ ಸುಮಾರು 4000 ಮಂದಿ ಪತ್ರಕ್ಕೆ ಸಹಿ ಹಾಕಿದ್ದಾರೆ.

ಪ್ರಕರಣದ ಹಿನ್ನೆಲೆ

ಮಹಿಳೆಯೊಬ್ಬರ ಮೇಲೆ ಬಾರಿಬಾರಿ ಅತ್ಯಾಚಾರ ನಡೆಸಿದ ಆರೋಪ ಎದುರಿಸುತ್ತಿದ್ದ ಸರ್ಕಾರಿ ನೌಕರನೊಬ್ಬನ ನಿರೀಕ್ಷಣಾ ಜಾಮೀನನ್ನು ಬಾಂಬೆ ಹೈಕೋರ್ಟ್ ರದ್ದು ಮಾಡಿದ್ದನ್ನು ಕುರಿತ ಮೇಲ್ಮನವಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಅವರು 'ನೀನು ಸಂತ್ರಸ್ತೆಯನ್ನು ಮದುವೆ ಆಗುವೆಯಾ' ಎಂದು ಆರೋಪಿಯನ್ನು ಪ್ರಶ್ನಿಸಿದ್ದರು.

'ಸಂತ್ರಸ್ತೆಯನ್ನು ವರಿಸಲು ಸಿದ್ಧವಿರುವುದಾದರೆ, ನಿನ್ನ ಬೇಡಿಕೆಯನ್ನು (ನಿರೀಕ್ಷಣಾ ಜಾಮೀನು) ಪರಿಗಣಿಸಲು ಸಿದ್ಧ, ಇಲ್ಲವಾದಲ್ಲಿ ನೀನು ಜೈಲಿಗೆ ಹೋಗಬೇಕಾಗುತ್ತದೆ. ಆಕೆಯನ್ನು ವಿವಾಹವಾಗಬೇಕು ಎಂದು ನಾವು ಒತ್ತಡ ಹೇರುತ್ತಿಲ್ಲ' ಎಂದು ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಹಾಗೂ ವಿ. ರಾಮಸುಬ್ರಮಣಿಯನ್ ಅವರನ್ನೊಳಗೊಂಡ ಪೀಠವು ಹೇಳಿತ್ತು.

ನ್ಯಾಯಾಲಯವು ಆರೋಪಿಗೆ ನಾಲ್ಕು ವಾರಗಳ ಕಾಲ ಬಂಧನದಿಂದ ರಕ್ಷಣೆ ಒದಗಿಸಿ, ಸಾಮಾನ್ಯ ಜಾಮೀನಿಗೆ ಅರ್ಜಿ ಸಲ್ಲಿಸಲು ಅನುಮತಿ ನೀಡಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ


9606038256

ಕೋವಿಡ್ ಲಸಿಕೆಯ ಎರಡನೇ ಹಂತದ ಅಭಿಯಾನ ಶುರುವಾಗಿದೆ. ಪ್ರಧಾನಿ, ರಾಷ್ಟ್ರಪತಿ, ಸಚಿವರು, ಶಾಸಕರು ಸೇರಿದಂತೆ ಗಣ್ಯರು ಲಸಿಕೆ ಪಡೆಯುತ್ತಿದ್ದಾರೆ. ಆದರೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳು ತಮಗೆ ಯಾವ ಲಸಿಕೆ ಬೇಕು ಎಂದು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ. ಕೋವಿಶೀಲ್ಡ್ ಅಥವಾ ಕೋವ್ಯಾಕ್ಸಿನ್‌ನಲ್ಲಿ ಒಂದನ್ನು ಆರಿಸಿಕೊಳ್ಳಬಹುದು ಎಂದು ರಾಷ್ಟ್ರೀಯ ಸುದ್ದಿಮಾಧ್ಯಮವೊಂದು ಟ್ವೀಟ್ ಮಾಡಿದೆ. ಬಳಿಕ ಅದನ್ನು ಅಳಿಸಿಹಾಕಿದೆ.



ಲಸಿಕೆಯಲ್ಲಿ ಆಯ್ಕೆ ಅವಕಾಶ ನೀಡಲಾಗಿಲ್ಲ ಎಂದು ಲಾಜಿಕಲ್ ಇಂಡಿಯನ್ಸ್ ವೆಬ್‌ಸೈಟ್ ವರದಿ ಮಾಡಿದೆ. ಎಎನ್‌ಐ ಟ್ವೀಟ್‌ಗಳನ್ನು ಆಧರಿಸಿ ಈ ಸ್ಪಷ್ಟನೆ ನೀಡಿದೆ. 'ಕೋವಿನ್ ಪೋರ್ಟಲ್ ಮೂಲಕವೇ ಎಲ್ಲರೂ ನೋಂದಣಿ ಮಾಡಿಕೊಳ್ಳಬೇಕು. ನೋಂದಣಿ ಮಾಡಿಕೊಂಡವರಿಗೆ ಆದ್ಯತೆಯ ಮೇರೆಗೆ ಲಸಿಕೆ ನೀಡುವ ಸಮಯ, ಸ್ಥಳ ನಿಗದಿಯಾಗುತ್ತದೆ. ನ್ಯಾಯಾಧೀಶರಿಗೆ ಲಸಿಕೆ ಆಯ್ಕೆಯ ಅವಕಾಶ ಇಲ್ಲ ಎಂದು ಇಲಾಖೆ ಸ್ಪಷ್ಟನೆ ನೀಡಿದೆ ಎಂದು ಎಎನ್‌ಐ ವರದಿ ಮಾಡಿದೆ.

ಗುಂಡಣ್ಣ



ದಿನ ಭವಿಷ್ಯ

ಗುರುವಾರ 4 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಪೂರ್ವಭಾದ್ರ ಷಷ್ಠೀ ಗಂ.48-20 (ರಾ. 2-01) ಗುರುವಾರ ನಿತ್ಯ ನಕ್ಷತ್ರ ವಿಶಾಖ ಗಂ. 52-56 (ರಾ. 6-51) ವ್ಯಾಘಾ ನಾಮ ಯೋಗ ಗಂ. 51-43 ಗರಜ ಕರಣ ಗಂ. 21-18 ವಿಷ. ಗಂ. 8-53 ಅಮೃತ ಗಂ. 31-13: ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 ಸೂರ್ಯೋದಯ: 6-39 ಸೂರ್ಯಾಸ್ತ: 6-25 ಅದೃಷ್ಟ ಸಂಖ್ಯೆ 7

ಮೇಷ: ಉದ್ಯೋಗದ ವಿಷಯದಲ್ಲಿ ಭಾಗ್ಯೋದಯವಾಗಲಿದೆ. ಮಿತ್ರರಿಂದ ಔದಾರ್ಯ. ಆರ್ಥಿಕ ಅಭಿವೃದ್ಧಿ. ಬಂಧುಗಳೊಂದಿಗೆ ಮನಸ್ತಾಪವಾಗುವ ಸಾಧ್ಯತೆ ಕಂಡುಬರುತ್ತಿದೆ. ಸಂಯಮದಿಂದ ಎಲ್ಲವೂ ನಿರಾಳವಾಗಲಿದೆ.

ವೃಷಭ: ವ್ಯವಹಾರದಲ್ಲಿ ಹೊಸ ಯೋಜನೆಯೊಂದನ್ನು ಪ್ರಾರಂಭಿಸುವ ಸಾಧ್ಯತೆ. ಹೊಸ ವ್ಯಕ್ತಿಯೊಬ್ಬರ ಪರಿಚಯವಾಗಲಿದೆ. ಹತ್ತಿ, ನಾರು ವಸ್ತುಗಳ ವ್ಯಾಪಾರಸ್ಥರಿಗೆ ವಿಶೇಷ ಲಾಭ ಸಾಧ್ಯತೆ. ಆರೋಗ್ಯದಲ್ಲಿ ವ್ಯತ್ಯಯ ಉಂಟಾದೀತು.

ಮಿಥುನ: ಗುತ್ತಿಗೆದಾರರಿಗೆ ಕಲ್ಲು, ಗಣಿ ಕೆಲಸಗಾರರಿಗೆ ಶ್ರೇಯಸ್ಸು. ವಾಹನಾದಿಗಳ ವ್ಯಾಪಾರದಲ್ಲಿ ಅಧಿಕ ಲಾಭ. ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಿ ಸಂಭ್ರಮಿಸಲಿದ್ದೀರಿ. ವ್ಯಾಜ್ಯಗಳು ಇತ್ಯರ್ಥವಾಗುವ ಸಾಧ್ಯತೆ.

ಕರ್ಕಾಟಕ: ಉದ್ಯೋಗದಲ್ಲಿ ವಿಶೇಷ ಅನುಕೂಲವಾಗಲಿದೆ. ಬಟ್ಟೆ, ಶೃಂಗಾರ ಸಾಮಗ್ರಿಗಳ ವ್ಯವಹಾರದಲ್ಲಿ ಉತ್ತಮ ಲಾಭ. ಚಿತ್ರನಟರು, ನಿರ್ಮಾಪಕರುಗಳಿಗೆ ಗೌರವಾದರಗಳು ದೊರಕಲಿವೆ. ಮಹಿಳಾ ರಾಜಕಾರಣಿಗಳಿಗೆ ಧನಾಗಮನ.

ಸಿಂಹ: ನಿವೇಶನ ಅಥವಾ ಜಮೀನು ಖರೀದಿ ಸಾಧ್ಯತೆ. ಪತ್ರ ವ್ಯವಹಾರಗಳಲ್ಲಿ ಎಚ್ಚರಿಕೆ ವಹಿಸುವುದು ಉತ್ತಮ. ನಾನಾ ಮೂಲಗಳಿಂದ ಸಂಪತ್ತನ್ನು ಕ್ರೋಢೀಕರಿಸಲಿದ್ದೀರಿ. ಲೋಹದ ವ್ಯಾಪಾರಿಗಳಿಗೆ ಅನುಕೂಲ.

ಕನ್ಯಾ: ಹಣಕಾಸು ಸಂಸ್ಥೆ ನಡೆಸುವವರಿಗೆ ಮತ್ತು ಬಟ್ಟೆ ವ್ಯಾಪಾರಿಗಳಿಗೆ ಹೆಚ್ಚಿನ ಅನುಕೂಲ. ಕಾರ್ಯನಿಮಿತ್ತ ದೂರ ಪ್ರಯಾಣ ಮಾಡಬೇಕಾದೀತು. ಕಲಾವಿದರುಗಳಿಗೆ ವಿಶೇಷ ಮನ್ನಣೆ. ಆರೋಗ್ಯದ ವಿಚಾರದಲ್ಲಿ ಕಾಳಜಿ ಅಗತ್ಯ.

ತುಲಾ: ನಿಮ್ಮ ಬುದ್ಧಿಮತ್ತೆ ಬೆಳಕಿಗೆ ಬರಲಿದೆ. ಸಾಮಾಜಿಕ ಪ್ರಶಂಸೆಗೆ ಪಾತ್ರರಾಗಲಿದ್ದೀರಿ. ವ್ಯವಹಾರದಲ್ಲಿ ಯಶಸ್ಸು. ದೇಹಾರೋಗ್ಯ ಉತ್ತಮಗೊಳ್ಳಲಿದೆ. ಆಹಾರಧಾನ್ಯಗಳ ವ್ಯಾಪಾರಸ್ಥರಿಗಳಿಗೆ ವಿಶೇಷ ಅನುಕೂಲ.

ವೃಶ್ಚಿಕ: ಲೆಕ್ಕ ಪರಿಶೋಧಕರಿಗೆ ಉತ್ತಮ ಆದಾಯದೊಂದಿಗೆ ಸಾಮಾಜಿಕ ಮನ್ನಣೆ ದೊರಕುವ ಸಾಧ್ಯತೆ. ಯುವಜನರು ಕಠಿಣ ಸ್ಪರ್ಧೆಗಳನ್ನು ಎದುರಿಸಬೇಕಾದೀತು. ನಿಮ್ಮ ವರ್ಚಸ್ಸಿಗೆ ಧಕ್ಕೆಯಾಗುವ ಪ್ರಸಂಗ ಎದುರಾಗುವ ಸಾಧ್ಯತೆ.

ಧನು: ಅಬಕಾರಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುವವರಿಗೆ ಬಿಡುವಿಲ್ಲದ ಕೆಲಸದೊಂದಿಗೆ ಮೇಲಧಿಕಾರಿಗಳಿಂದ ಪ್ರಶಂಸೆ. ಆರೋಗ್ಯದಲ್ಲಿ ಹೆಚ್ಚಿನ ವೈಪರಿತ್ಯ ಕಂಡುಬರಲಿದೆ. ಮಿತ್ರರಿಂದ ಸ್ವಲ್ಪಮಟ್ಟಿನ ಕಿರಿಕಿರಿ.

ಮಕರ: ನೌಕರಿಯಲ್ಲಿ ಪರಿಶ್ರಮದಿಂದಾಗಿ ಹೆಚ್ಚಿನ ಪ್ರಶಂಸೆ ಅಥವಾ ಪದೋನ್ನತಿಯ ಸಾಧ್ಯತೆ. ನಡವಳಿಕೆಯ ವಿಚಾರದಲ್ಲಿ ಹಿರಿಯರಿಂದ ವಿರೋಧ. ವಿಪರೀತ ಧನವ್ಯಯ. ಸಾಲದ ವಿಚಾರದಲ್ಲಿ ಎಚ್ಚರಿಕೆ ಅಗತ್ಯ.

ಕುಂಭ: ನೌಕರಿಯಲ್ಲಿರುವವರಿಗೆ ಅನಿರೀಕ್ಷಿತ ವರ್ಗಾವಣೆ ಅಥವಾ ಸ್ಥಾನ ಪಲ್ಲಟ ಸಾಧ್ಯತೆ. ಮನೆಯಲ್ಲಿ ಶುಭ ಸಮಾರಂಭ ಏರ್ಪಡಿಸಲಿದ್ದೀರಿ. ಅಲಂಕಾರಿಕ ವಸ್ತುಗಳ ಖರೀದಿ ಮಾಡಲಿದ್ದೀರಿ. ಸಂಗಾತಿಯಿಂದ ಉತ್ತಮ ಸಹಕಾರ.

ಮೀನ: ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕಾಗಿ ಸ್ಥಾನ ಬದಲಾವಣೆ ಸಾಧ್ಯತೆ. ರೈತಾಪಿವರ್ಗದವರಿಗೆ ಆತಂಕದ ಕ್ಷಣಗಳು ಎದುರಾದೀತು. ಉದ್ಯೋಗ ಮತ್ತು ವ್ಯವಹಾರಸ್ಥರಿಗೆ ಉನ್ನತಿ . ದೊಡ್ಡ ದೊಡ್ಡ ಸಾಹಸೀ ಕೆಲಸಕ್ಕೆ ಕೈಹಾಕಲಿದ್ದೀರಿ.

ನಿಮ್ಮ ಜನ್ಮದಿನ 4-ಮಾರ್ಚ್ ಈ ದಿನ ಅತ್ಯಂತ ಶುಭಕರ. ಬಂಧುಗಳ ಸಹಕಾರದಿಂದ ಉತ್ತಮ ವ್ಯಾಪಾರ, ವ್ಯವಹಾರವನ್ನು ನಡೆಸಲಿದ್ದೀರಿ. ವ್ಯಕ್ತಿ ನಿಷ್ಠೆಯಿಂದಾಗಿ ವಿಶ್ವಾಸವನ್ನು ಗಟ್ಟಿಗೊಳಿಸಿಕೊಳ್ಳಲಿದ್ದೀರಿ. ಮಹಿಳೆಯರಿಗೆ ಉತ್ತಮ ಉದ್ಯೋಗಾವಕಾಶಗಳು ದೊರಕಲಿದೆ. ದುಡುಕುತನದಿಂದಾಗಿ ಮಿತ್ರರಲ್ಲಿ ಒಡಕುಂಟಾದೀತು.

ಬೆರಗಿನ ಬೆಳಕು

ಗುರುರಾಜ ಕರಜಗಿ

ಅನುಭವ - ಸತ್ಯದ ಅಳತೆ

ಎನಿತೆನಿತು ವಿಕಾರ ಪರಿಣಾಮಗಳ ನಮ್ಮ |
ಮನಕಾಗಿಪುವೊ ಲೋಕರೂಪಶಕ್ತಿಗಳು ||
ಅನಿತನಿತು ಸತ್ಯತೆಯವಕ್ಕುಂಟು ಜೀವಿತದಿ |
ಅನುಭವವೆ ದಿಟದಳತೆ – ಮಂಕುತಿಮ್ಮ || 393 ||

ಪದ-ಅರ್ಥ: ಎನಿತೆನಿತ್ತು = ಎಷ್ಟೆಷ್ಟು, ಮನಕಾಗಿಪುವೊ = ಮನಕೆ + ಆಗಿಪುವೊ, ಸತ್ಯತೆಯವಕ್ಕುಂಟು = ಸತ್ಯತೆ + ಅವಕ್ಕೆ + ಉಂಟು, ಅನಿತನಿತು = ಅಷ್ಟಷ್ಟು, ದಿಟದಳತೆ = ದಿಟದ (ಸತ್ಯದ) + ಅಳತೆ

ವಾಚ್ಯಾರ್ಥ: ಲೋಕದ ರೂಪಗಳು, ಶಕ್ತಿಗಳು ಎಷ್ಟೆಷ್ಟು ವಿಕಾರಗಳನ್ನು ಪರಿಣಾಮಗಳನ್ನು ನಮ್ಮ ಮನಸ್ಸುಗಳಿಗೆ ಮುಟ್ಟಿಸುತ್ತವೊ, ಅಷ್ಟಷ್ಟೇ ಸತ್ಯತೆಯೂ ಅವುಗಳಲ್ಲಿದೆ. ನಮ್ಮ ಅನುಭವ ಸತ್ಯದ ಅಳತೆ.

ವಿವರಣೆ: ತಂದೆ ಅಸಾಧ್ಯ ಕುಡುಕ. ಮನೆಯಲ್ಲಿ ಬಡತನ. ಗಳಿಸಿ ಬಂದ ದುಡ್ಡೆಲ್ಲ ಗಡಂಗಿಗೇ. ಮನೆಗೆ ಬಂದು ಹೆಂಡತಿ ಮಕ್ಕಳಿಗೆ ಶಿಕ್ಷೆ. ಸದಾ ಕೂಗಾಟ, ಬಡಿದಾಟ. ಇದೇ ಮನೆಯ ವಾತಾವರಣ. ಅವನಿಗೆ ಇಬ್ಬರು ಮಕ್ಕಳು. ಒಬ್ಬ ದೊಡ್ಡವನಾಗಿ, ಓದಿ, ಸುಪ್ರೀಂಕೋರ್ಟಿನಲ್ಲಿ ನ್ಯಾಯಾಧೀಶನಾದ. ಮತ್ತೊಬ್ಬ ಸರಣಿ ಕೊಲೆಗಳನ್ನು ಮಾಡಿ, ಸಿಕ್ಕುಬಿದ್ದು, ಜೀವಾವಧಿ ಶಿಕ್ಷೆಯನ್ನು ಹೊಂದಿ ಜೈಲಿನಲ್ಲಿ ಕೊಳೆಯುತ್ತಿದ್ದ. ಒಬ್ಬ ಪರ್ತಕರ್ತನಿಗೆ ಇದು ಕುತೂಹಲದ ವಿಷಯವೆನ್ನಿಸಿ ಜೈಲಿನಲ್ಲಿದ್ದ ಕೊಲೆಗಾರನ ಸಂದರ್ಶನ ಮಾಡಿದ. ನೀನು ಯಾಕೆ ಹೀಗಾದೆ ಎಂದು ಕೇಳಿದ. ಆತ ಹೇಳಿದ, 'ಇದಕ್ಕೆ ನನ್ನ ತಂದೆಯೇ ಕಾರಣ. ದಿನದಿನವೂ ಕುಡಿದು ಬಂದು ಹಿಂಸೆಯನ್ನು ಮಾಡುತ್ತಿದ್ದ. ಅವನನ್ನು ಗಮನಿಸಿ, ಗಮನಿಸಿ ನಾನು ಅವನಂತೆಯೇ ಆದೆ'. ಪರ್ತಕರ್ತ ಸುಪ್ರೀಂಕೋರ್ಟಿನ ನ್ಯಾಯಾಧೀಶರನ್ನು ಸಂದರ್ಶಿಸಿ 'ನಿಮ್ಮ ಈ ಉನ್ನತ ಸಾಧನೆಗೆ ಏನು ಕಾರಣ?' ಎಂದು ಕೇಳಿದ. ಉತ್ತರ ಆಶ್ಚರ್ಯವನ್ನು ತಂದಿತ್ತು. 'ನನ್ನ ಸಾಧನೆಗೆ ನನ್ನ ತಂದೆಯೇ ಕಾರಣ. ಅವರು ನಿತ್ಯ ಮನಸ್ಸಿನ ಸ್ಥಿಮಿತವನ್ನು ಕಳೆದುಕೊಳ್ಳುತ್ತಿದ್ದುದು ಅವರಿಗೆ ದೊರೆತ ಸ್ನೇಹಿತರು ಮತ್ತು ಕುಡಿತವೇ ಕಾರಣವಾಗಿತ್ತು. ಅವೆರಡು ಇಲ್ಲದಿದ್ದರೆ ಅವರೂ ಚೆನ್ನಾಗಿಯೇ ಬದುಕುತ್ತಿದ್ದರು. ಆದ್ದರಿಂದ ನಾನು ಅವರ ಹಾಗೆ ಆಗಬಾರದೆಂದು ತೀರ್ಮಾನಿಸಿ ಒಳ್ಳೆಯ ಸ್ನೇಹಿತರು ಮತ್ತು ಒಳ್ಳೆಯ ವಿಚಾರಗಳನ್ನು ಆರಿಸಿಕೊಂಡೆ' ಎಂದರು.

ಇಬ್ಬರೂ ಬಂದಿದ್ದು ಒಂದೇ ವಾತಾವರಣದಿಂದ. ಆದರೆ ಪರಿಣಾಮ ಮಾತ್ರ ಪೂರ್ತಿ ಬೇರೆಯಾದದ್ದು. ಪ್ರಪಂಚದಲ್ಲಿರುವ ರೂಪಗಳು ಮತ್ತು ಶಕ್ತಿಗಳು ಸದಾಕಾಲ ನಮ್ಮ ಮನಸ್ಸಿನ ಮೇಲೆ ಪರಿಣಾಮಗಳನ್ನು ಮಾಡುತ್ತಲೇ ಇರುತ್ತವೆ. ಆ ಅನುಭವಗಳೇ ನಮಗೆ ಸತ್ಯದ ದರ್ಶನವನ್ನು ಮಾಡಿಸುತ್ತವೆ. ಬದುಕು ಮತ್ತು ಅನುಭವಗಳ ನಡುವೆ ಅನೂಹ್ಯವಾದ ಸ್ನೇಹವಿದೆ. ಇವುಗಳ ನಡುವಿನ ವಾಹಕ ಮನಸ್ಸು. ಮನಸ್ಸು ಲೋಕ ಜೀವನದ ಶಕ್ತಿಗಳನ್ನು ಹೇಗೆ ಸ್ವೀಕರಿಸುತ್ತದೆಯೋ ಅದೇ ನಮ್ಮ ಅನುಭವವಾಗುತ್ತದೆ. ನಮ್ಮ ಅನುಭವವೇ ನಮಗೆ ಸತ್ಯ. ಇಲ್ಲದಿದ್ದರೆ ಒಂದೇ ಘಟನೆ, ಬೇರೆ ಬೇರೆ ಪರಿಣಾಮಗಳನ್ನು ನೀಡುವುದು ಹೇಗೆ? ವ್ಯಕ್ತಿಗಳ ಮೇಲೆ ಪ್ರಪಂಚದ ಗುಣಭೇದಗಳು ಮಾಡುವ ಪರಿಣಾಮದಿಂದ ಜನತೆಯ ನಾನಾತ್ಮ-ವಂಶಗಳು, ಕುಲಗಳು, ಜಾತಿಗಳು, ಚಿಂತನೆಗಳು.

ಕಗ್ಗ ಈ ಮಾತನ್ನು ಒತ್ತುಕೊಟ್ಟು ಹೇಳುತ್ತದೆ. ನಮ್ಮ ಮನಸ್ಸಿಗಾದ ಪ್ರತಿಯೊಂದು ಅನುಭವವೂ ಸತ್ಯದರ್ಶನವೇ. ಪ್ರತಿಯೊಬ್ಬರಿಗೂ ಅವರವರ ಪ್ರಕೃತಿಯಂತೆ ಅನುಭವ ಬೇರೆ ಬೇರೆಯಾಗಿರುವುದರಿಂದ ಅವರ ಸತ್ಯದ ಅಳತೆಯೂ ಬೇರೆಯೇ. ಅನುಭವವೇ ಸತ್ಯದ ಅಳತೆ.

ಪದಬಂಧ 4526


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವೇದಗಳಲ್ಲಿ ಮೊದಲನೆಯದು (3)
4.ಭವದಲ್ಲಿ ಅಂತ್ಯವಾಗಿರುವ ಹುಟ್ಟು (3)
6.ಜವಾಬು ನೀಡಿ ವಹಿಸಿಕೊಂಡಿರುವ ಹೊಣೆಗಾರಿಕೆ (5)
7.ಭವನದ ಮೇಲಿಂದ ಕಾಣುತ್ತಿರುವ ಆಕಾಶ (2)
9.ಮಾನವನಲ್ಲಿ ಹೊಸತು ಕಾಣುತಿದೆಯೇ? (2)
10.ಗುರುವಿಗೆ ತಕ್ಕವನು ಈ ವಿದ್ಯಾರ್ಥಿ! (2)
11.ಸುಪ್ರಭಾತದ ಹೊತ್ತಿನಲ್ಲಿ ಬಂದಿಳಿದ ಮಗ (2)
13.ಅಳಿಯನನ್ನು ಮನೆಯಲ್ಲಿಯೇ ಇರಿಸಿಕೊಳ್ಳುವುದು (5)
16.ಮಡಿಕೆಗಳನ್ನೊಳಗೊಂಡ ಬುದ್ಧಿಯ ಅಂಗ (3)
17.ಒನಪು ತೋರಿದಾಗ ಬಂದಿರುವ ಸ್ಮರಣೆ (3)

ಮೇಲಿಂದ ಕೆಳಕ್ಕೆ

1.ವರ್ಷದ ಎರಡೆರಡು ತಿಂಗಳುಗಳ ಅವಧಿ (4)
2.ಅನುಜನೆದುರು ರಾಕ್ಷಸ ಪ್ರತ್ಯಕ್ಷನಾಗಿದ್ದಾನೆ? (3)
3.ಸಾಬೂನು ಬಳಸಲು ಹೇಳಿದ ನೆಪ? (3)
4.ಈತ ತಿರುಗಾಡುವವನು (3)
5.ಅರವತ್ತು ವರ್ಷದ ಹುಟ್ಟಿದ ಹಬ್ಬ (4)
8.ಮುಂದೆ ಬರಲಿರುವ ಕಾಲ (3)
9.ಸ್ವಪ್ನವಿಲ್ಲಿ ನಿಜವಾಗಿದೆಯಲ್ಲಾ? (3)
10.ತಲೆ ಬರಹ ಇಲ್ಲಿದೆ (4)
12.ಕನ್ನಡಿಗ ಧರಿಸಿದ ಹೆಲ್ಮೆಟ್! (4)
13.ಮರುಳನ ಹಿಡಿದಿರುವ ಉಸುಕು (3)
14.ಒಳ್ಳೆ ಅಥವಾ ಕೆಟ್ಟ ನಾತ (3)
15.ಮಾದರಿ ಇಲ್ಲಿ ಕಾಣುತ್ತಿದೆ (3)



4525ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ಉಪದ್ವ್ಯಾಪಿ 5.ಮಧುಕರಿ 6.ಗುರಿ 7.ದಸ್ತಗಿರಿ 10.ಕಟುನುಡಿ 12.ಷಷ್ಠಿ 14.ಉದಾಸೀನ 15.ಕಟಿಸೂತ್ರ

ಮೇಲಿಂದ ಕೆಳಕ್ಕೆ: 1.ಗಮಕ 2.ಮಕರಂದ 3.ಉಪಕಾರಿ 4.ಪಿತೂರಿ 6.ಗುಡ್ಡ 8.ಗಿಲೀಟು 9.ಸೃಷ್ಟಿ 10.ಕರಪತ್ರ 11.ಡಿಕ್ರಿದಾರ 12.ಷಡ್ಡಕ 13.ಘನತೆ

ಸುಡೊಕು 4912

	4		1		3	5		7
7			4				3	1
	3			5	7	4		
6	1				4			
			8	1	2	6		4
8	2						1	
		3		2		9		8
9			3		6		7	
4		1		8			6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4911 ಸುಡೊಕು

3	5	2	1	9	4	8	6	7
6	1	4	5	8	7	9	3	2
7	9	8	6	3	2	5	1	4
2	7	9	8	1	3	6	4	5
1	3	6	7	4	5	2	9	8
4	8	5	9	2	6	3	7	1
5	4	1	2	6	9	7	8	3
9	2	3	4	7	8	1	5	6
8	6	7	3	5	1	4	2	9


ಮ್ಯಾನ್ಮಾರ್‌ನ ಯಾಂಗೋನ್‌ನಲ್ಲಿ ಪ್ರತಿಭಟನಕಾರರ ಮೇಲೆ ಪೊಲೀಸರು ಅಶ್ರುವಾಯು ಸಿಡಿಸಿದರು (ರಾಯಿಟರ್ಸ್ ಚಿತ್ರ)

ಮ್ಯಾನ್ಮಾರ್: 33 ಮಂದಿ ಪ್ರತಿಭಟನಕಾರರ ಹತ್ಯೆ

ಯಾಂಗೂನ್ (ಎಪಿ): ಮಿಲಿಟರಿ ಆಡಳಿತ ವಿರೋಧಿಸಿ ಮ್ಯಾನ್ಮಾರ್ ದೇಶದ ವಿವಿಧೆಡೆ ಬುಧವಾರ ನಡೆದ ಪ್ರತಿಭಟನೆಗಳನ್ನು ಹತ್ತಿಕ್ಕಲು ನಡೆಸಿದ ಗುಂಡಿನ ದಾಳಿಗಳಲ್ಲಿ 33 ಮಂದಿ ಮೃತಪಟ್ಟಿದ್ದಾರೆ.

ಸಾಗಿಂಗ್ ಪ್ರಾಂತ್ಯದ ಮಾನಿವಾದಲ್ಲಿ ಕನಿಷ್ಠ 7 ಮಂದಿ ಮೃತಪಟ್ಟಿದ್ದಾರೆ. ದೇಶದ ಎರಡನೇ ದೊಡ್ಡ ನಗರ ಮಂಡಲೇಯಲ್ಲಿ ಇಬ್ಬರು ಭದ್ರತಾ ಪಡೆಗಳ ಗುಂಡಿಗೆ ಬಲಿಯಾಗಿದ್ದಾರೆ ಎಂದು ತುರ್ತು ಕಾರ್ಯ ನಿರ್ವಹಣೆ ನಡೆಸುವ ವೈದ್ಯರೊಬ್ಬರು ಹೇಳಿದರು.

ಮೈಂಗಿಯಾನ್‌ನಲ್ಲಿ ಸಹ ತೀವ್ರ ಸ್ವರೂಪದ ಪ್ರತಿಭಟನೆ ನಡೆದಿದ್ದು, ಗುಂಡಿನ ದಾಳಿಗೆ ಒಬ್ಬ ಯುವಕ ಮೃತಪಟ್ಟಿದ್ದಾನೆ ಎಂದು ವೈದ್ಯರು ಹೇಳಿದ್ದಾರೆ.

ಮ್ಯಾನ್ಮಾರ್‌ನಲ್ಲಿನ ಪರಿಸ್ಥಿತಿಯ ಬಗ್ಗೆ ವಿಶ್ವಸಂಸ್ಥೆ ಭದ್ರತಾ ಮಂಡಳಿ ಶುಕ್ರವಾರ ಸಭೆ ನಡೆಸುವ ಸಾಧ್ಯತೆ ಇದೆ. ಭಾನುವಾರ ನಡೆದ ಹಿಂಸಾಚಾರದ ಸಂದರ್ಭದಲ್ಲಿ 18 ಮಂದಿ ಮೃತಪಟ್ಟಿದ್ದರು.

ಗ್ರೀಸ್‌ನಲ್ಲಿ ಪ್ರಬಲ ಭೂಕಂಪ

ಅಥೆನ್ಸ್ (ಎಪಿ): ಕೇಂದ್ರ ಗ್ರೀಸ್‌ನಲ್ಲಿ ಬುಧವಾರ ಪ್ರಬಲ ಭೂಕಂಪ ಸಂಭವಿಸಿದ್ದು, ಸಾವು–ನೋವು ಉಂಟಾದ ವರದಿಯಾಗಿಲ್ಲ.

ರಿಕ್ಟರ್ ಮಾಪಕದಲ್ಲಿ ಭೂಕಂಪದ ತೀವ್ರತೆ 6.2 ದಾಖಲಾಗಿದೆ. ಲಾರಿಸ್ಸಾ ಪಟ್ಟಣದಿಂದ 22 ಕಿ.ಮೀ. ದೂರದಲ್ಲಿ ಭೂಕಂಪದ ಕೇಂದ್ರಬಿಂದು ಗುರುತಿಸಲಾಗಿದೆ. ಮಧ್ಯಾಹ್ನ 12.15ರ ವೇಳೆಗೆ ಭೂಕಂಪ ಸಂಭವಿಸಿದೆ ಎಂದು ಯುರೋಪಿಯನ್ ಮೆಡಿಟರೇನಿಯನ್ ಸೆಸ್ಮೋಲಾಜಿಕಲ್ ಕೇಂದ್ರವು ತಿಳಿಸಿದೆ.

ಅಫ್ಗಾನಿಸ್ತಾನ: ಮಾಧ್ಯಮದ ಮೂವರು ಮಹಿಳೆಯರ ಹತ್ಯೆ

ಕಾಬೂಲ್ (ಎಪಿ): ಪೂರ್ವ ಅಫ್ಗಾನಿಸ್ತಾನದಲ್ಲಿ ಸ್ಥಳೀಯ ರೇಡಿಯೊ ಮತ್ತು ಟಿ.ವಿ ಸ್ಟೇಷನ್‌ನಲ್ಲಿ ಕೆಲಸ ಮಾಡುತ್ತಿದ್ದ ಮೂವರು ಮಹಿಳೆಯರನ್ನು ಮಂಗಳವಾರ ಗುಂಡಿಕ್ಕಿ ಹತ್ಯೆ ಮಾಡಿದ್ದು, ಇದರ ಹೊಣೆಯನ್ನು ಇಸ್ಲಾಮಿಕ್ ಸ್ಟೇಟ್ ಸಂಘಟನೆ ಹೊತ್ತುಕೊಂಡಿದೆ.

'ಮಂಗಳವಾರ ಪ್ರತ್ಯೇಕ ದಾಳಿಯಲ್ಲಿ ಮೂವರು ಮಹಿಳೆಯರನ್ನು ಗುಂಡಿಕ್ಕಿ ಕೊಲ್ಲಲಾಗಿದೆ' ಎಂದು ಸ್ಥಳೀಯ ಟಿ.ವಿ ಸ್ಟೇಷನ್‌ನ ಸುದ್ದಿ ಸಂಪಾದಕರು ತಿಳಿಸಿದರು. 'ಈ ಸಂಬಂಧ ಖಾರಿ ಬಶೀರ್ ಎಂಬಾತನನ್ನು ಬಂಧಿಸಲಾಗಿದ್ದು, ಆತ ತಾನು ತಾಲಿಬಾನ್ ಸಂಘಟನೆಯ ಸದಸ್ಯ ಎಂದು ಹೇಳಿಕೊಂಡಿದ್ದಾನೆ. ಆದರೆ ತಾಲಿಬಾನ್ ವಕ್ತಾರ ಜಬಿಯುಲ್ಲಾ ಮುಜಾಹಿದ್ ಇದನ್ನು ನಿರಾಕರಿಸಿದ್ದಾರೆ' ಎಂದು ಅಫ್ಗಾನ್ ಅಧಿಕಾರಿಗಳು ಹೇಳಿದರು. ಈತ ಸೈಲೆನ್ಸರ್ ಒಳಗೊಂಡ ಪಿಸ್ತೂಲ್ ಅನ್ನು ಹತ್ಯೆಗೆ ಬಳಸಿದ್ದಾನೆ. ಕೆಲವೇ ಕ್ಷಣಗಳಲ್ಲಿ ಆತನನ್ನು ಪೊಲೀಸರು ಬಂಧಿಸಿದ್ದಾರೆ.

ವಿದ್ಯುತ್ ವ್ಯವಸ್ಥೆ ಹ್ಯಾಕ್‌ಗೆ ಯತ್ನಿಸಿದ್ದ ಚೀನೀ ಹ್ಯಾಕರ್‌ಗಳು

ಹೈದರಾಬಾದ್ (ಪಿಟಿಐ): ಚೀನಾ ಮೂಲದ ಹ್ಯಾಕರ್‌ಗಳ ಗುಂಪು ತೆಲಂಗಾಣ ರಾಜ್ಯದ ವಿದ್ಯುತ್ ವ್ಯವಸ್ಥೆಯನ್ನೂ ಹ್ಯಾಕ್ ಮಾಡಲು ಪ್ರಯತ್ನಿಸಿತ್ತು. ಆದರೆ ಅವರ ಪ್ರಯತ್ನವನ್ನು ವಿಫಲಗೊಳಿಸಿದ್ದೇವೆ ಎಂದು ಅಧಿಕಾರಿಗಳು ಬುಧವಾರ ಹೇಳಿದ್ದಾರೆ.

ದೇಶದ ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್ (ಸಿಇಆರ್‌ಟಿ) ನೀಡಿದ ಎಚ್ಚರಿಕೆ ಮೇರೆಗೆ ಅಗತ್ಯ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

'ನಾವು ಕೆಲ ಕಂಪ್ಯೂಟರ್ ಪ್ರೋಗ್ರಾಂಗಳನ್ನು ಹಾಳುಗೆಡವುವ ವೈರಸ್ ನುಸುಳುವುದನ್ನು ಗಮನಿಸಿದೆವು. ಕೂಡಲೇ ಅದನ್ನು ಅಳಿಸಿ ಹಾಕಿದೆವು. ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಂಡಿರುವುದರಿಂದ ಯಾವುದೇ ತೊಂದರೆ ಎದುರಾಗಿಲ್ಲ' ಎಂದು ಅವರು ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

ರಾಜ್ಯ ಇಂಧನ ಸಂಸ್ಥೆಗಳಿಗೆ ಸಿಇಆರ್‌ಟಿ ಎರಡು ದಿನ ಮುನ್ನವೇ ಈ ಕುರಿತು ಮಾಹಿತಿ ನೀಡಿತ್ತು.

'ನಾವು ರಾಜ್ಯದಲ್ಲಿ ಉತ್ತಮ ತಂಡವನ್ನು ಹೊಂದಿದ್ದೇವೆ. ಇಲ್ಲಿ ನಿತ್ಯ ಪರಿಶೀಲನೆ ನಡೆಯುತ್ತಿರುತ್ತದೆ. ಅಲ್ಲದೆ ಆಂಟಿ ವೈರಸ್ ಕೂಡ ಇದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

ದೆಹಲಿ: 4 ವಾರ್ಡ್ ಎಎಪಿಗೆ, 1ರಲ್ಲಿ ಕಾಂಗ್ರೆಸ್‌ಗೆ ಜಯ

ನವದೆಹಲಿ (ಪಿಟಿಐ): ದೆಹಲಿಯ ಮಹಾನಗರ ಪಾಲಿಕೆಯ ಐದು ವಾರ್ಡ್‌ಗಳಿಗೆ ನಡೆದಿದ್ದ ಉಪ ಚುನಾವಣೆಯ ಫಲಿತಾಂಶ ಬುಧವಾರ ಪ್ರಕಟವಾಗಿದ್ದು, ಎಎಪಿ ಅಭ್ಯರ್ಥಿಗಳು ನಾಲ್ಕು ವಾರ್ಡ್‌ಗಳಲ್ಲಿ ಗೆಲುವು ಸಾಧಿಸಿದ್ದಾರೆ. ಒಂದರಲ್ಲಿ ಕಾಂಗ್ರೆಸ್ ಜಯಿಸಿದೆ. ಉಪ ಚುನಾವಣೆಯಲ್ಲಿ ಬಿಜೆಪಿಗೆ ಪರಾಜಯವಾಗಿದೆ.

ಫೆಬ್ರುವರಿ 28ರಂದು ನಡೆದ ಐದು ವಾರ್ಡ್‌ಗಳ ಉಪ ಚುನಾವಣೆ ನಡೆದಿತ್ತು. ಶೇ 50ಕ್ಕಿಂತ ಹೆಚ್ಚು ಮತದಾರರು ಮತ ಚಲಾಯಿಸಿದ್ದರು.

ಮುಂಬೈ ಮತ್ತು ಪುಣೆಯ 30ಕ್ಕೂ ಹೆಚ್ಚು ಸ್ಥಳಗಳಲ್ಲಿ ಶೋಧ

ನಟಿ ತಾಪ್ಸಿ ಪನ್ನು, ಕಶ್ಯಪ್‌ಗೆ ಐಟಿ ಬಿಸಿ


ತಾಪ್ಸಿ ಪನ್ನು


ಅನುರಾಗ್ ಕಶ್ಯಪ್

ಮುಂಬೈ (ಪಿಟಿಐ): ಬಾಲಿವುಡ್ ನಟಿ ತಾಪ್ಸಿ ಪನ್ನು, ನಿರ್ದೇಶಕ ಮತ್ತು ನಿರ್ಮಾಪಕರಾದ ಅನುರಾಗ್ ಕಶ್ಯಪ್ ಹಾಗೂ ರಿಲಯನ್ಸ್ ಎಂಟರ್‌ಟೈನ್‌ಮೆಂಟ್ ಗ್ರೂಪ್‌ನ ಸಿಇಒ ಶಿಭಾಶಿಶ್ ಸರ್ಕಾರ್ ಅವರಿಗೆ ಸೇರಿದ ವಿವಿಧ ಸ್ಥಳಗಳಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಬುಧವಾರ ಶೋಧ ಕಾರ್ಯಾಚರಣೆ ನಡೆಸಿದ್ದಾರೆ.

ಮುಂಬೈ ಮತ್ತು ಪುಣೆಯ 30ಕ್ಕೂ ಹೆಚ್ಚು ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ. ಕೆಲ ಸೆಲೆಬ್ರಿಟಿಗಳ ಕಾರ್ಯ ನಿರ್ವಹಣೆ ಹಾಗೂ ಟ್ಯಾಲೆಂಟ್ ಮ್ಯಾನೇಜ್‌ಮೆಂಟ್ ಕಂಪನಿಯಾದ 'ಕೆಡಬ್ಲ್ಯುಎಎನ್'ಗೆ ಸೇರಿದ ಸ್ಥಳಗಳ ಮೇಲೂ ದಾಳಿ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಫ್ಯಾಂಟಮ್ ಫಿಲ್ಮ್ಸ್' ವಿರುದ್ಧದ ತೆರಿಗೆ ವಂಚನೆಯ ತನಿಖೆಯ ಭಾಗವಾಗಿ ಈ ದಾಳಿ ನಡೆದಿದೆ. ಕಶ್ಯಪ್, ನಿರ್ದೇಶಕ-ನಿರ್ಮಾಪಕ ವಿಕ್ರಮಾದಿತ್ಯ ಮೋಟ್ವಾನೆ, ನಿರ್ಮಾಪಕ ವಿಕಾಸ್ ಬಹ್ಲ್ ಮತ್ತು ನಿರ್ಮಾಪಕ-ವಿತರಕ ಮಧು ಮಂಟೇನಾ ಇದರ ಪ್ರವರ್ತಕರಾಗಿದ್ದಾರೆ. ಈ ಪ್ರವರ್ತಕರಿಗೆ ಸೇರಿದ ಸ್ಥಳಗಳಲ್ಲಿಯೂ ಶೋಧ ನಡೆದಿದೆ.

2011ರಲ್ಲಿ ಸ್ಥಾಪನೆಯಾದ 'ಫ್ಯಾಂಟಮ್ ಫಿಲ್ಮ್ಸ್' ಲೂಟೆರಾ, ಕ್ವೀನ್, ಅಗ್ಲಿ, ಎನ್‌ಎಚ್ 10, ಮಸಾನ್ ಮತ್ತು ಉಡ್ತಾ ಪಂಜಾಬ್ ನಂತಹ ಸಿನಿಮಾಗಳನ್ನು ನಿರ್ಮಿಸಿತ್ತು. ನಂತರ ಕಶ್ಯಪ್ ಅವರು 'ಗುಡ್ ಬ್ಯಾಡ್ ಫಿಲ್ಮ್ಸ್' ಎಂಬ ಹೊಸ ನಿರ್ಮಾಣ ಕಂಪನಿಯನ್ನು ಪ್ರಾರಂಭಿಸಿದರು. ಮೋಟ್ವಾನೆ ಅವರು ಆಂಡೋಲನ್ ಫಿಲ್ಮ್ಸ್ ಅನ್ನು ಪ್ರಾರಂಭಿಸಿದರು. 33 ವರ್ಷದ ತಾಪ್ಸಿ ಪನ್ನು ಅವರು ಹಿಂದಿ, ತಮಿಳು ಮತ್ತು ತೆಲುಗು ಸಿನಿಮಾಗಳಲ್ಲಿ ನಟಿಸಿದ್ದಾರೆ.

ಕಾಂಗ್ರೆಸ್, ಎನ್‌ಸಿಪಿ ಟೀಕೆ: ಈ ಐಟಿ ದಾಳಿ ಕುರಿತು ಟೀಕಿಸಿರುವ ಮಹಾರಾಷ್ಟ್ರ ಸರ್ಕಾರದ ಮಿತ್ರ ಪಕ್ಷಗಳಾದ ಕಾಂಗ್ರೆಸ್ ಮತ್ತು ಎನ್‌ಸಿಪಿ, 'ಇದು ಕೇಂದ್ರದ ಮೋದಿ ಸರ್ಕಾರದ ವಿರುದ್ಧ ಮಾತನಾಡುವವರ ಧ್ವನಿ ಹತ್ತಿಕ್ಕುವ ಪ್ರಯತ್ನ' ಎಂದು ದೂರಿವೆ.


ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವನ್ನು ವಿರೋಧಿಸುವವರನ್ನು ಕೇಂದ್ರದ ಏಜೆನ್ಸಿಗಳಾದ ಇ.ಡಿ, ಸಿಬಿಐ ಮತ್ತು ಆದಾಯ ತೆರಿಗೆ ಇಲಾಖೆಗಳು ಗುರಿಯಾಗಿಸಿಕೊಂಡಿವೆ ಎಂದು ಎನ್‌ಸಿಪಿ ಮುಖ್ಯ ವಕ್ತಾರರೂ ಆಗಿರುವ ಸಚಿವ ನವಾಬ್ ಮಲಿಕ್ ಹೇಳಿದ್ದಾರೆ.


ಹರಿದ್ವಾರದಲ್ಲಿ ಕಿನ್ನಾರ್ ಅಖಾರ ಸದಸ್ಯರು 'ಕುಂಭಮೇಳ–2021' ಅಂಗವಾಗಿ ಬುಧವಾರ ಗಂಗಾ ಪೂಜೆ ನಡೆಸಿದರು. ಪಿಟಿಐ ಚಿತ್ರ

ನ್ಯಾಯಾಂಗ ನಿಂದನೆ ಅರ್ಜಿಗೆ ಪ್ರತಿಕ್ರಿಯಿಸುವಂತೆ ದೆಹಲಿ ಹೈಕೋರ್ಟ್ ಸೂಚನೆ

ಆರ್‌ಟಿಇ ವಿಳಂಬ: ಕೇಂದ್ರಕ್ಕೆ ನೋಟಿಸ್

ನವದೆಹಲಿ: ಶಿಕ್ಷಣದ ಹಕ್ಕು ಕಾಯ್ದೆಯನ್ನು (ಆರ್‌ಟಿಇ) ಅಧಿಕೃತವಾಗಿ ಹಿಂದುಳಿದ 14 ವರ್ಷದ ಮೇಲ್ಪಟ್ಟವರಿಗೂ ವಿಸ್ತರಿಸುವ ಕುರಿತು ನಿರ್ಧಾರ ಕೈಗೊಳ್ಳದ ಅಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆ ಕ್ರಮಕೈಗೊಳ್ಳುವಂತೆ ಕೋರಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ಸಲ್ಲಿಸಲು ದೆಹಲಿ ಹೈಕೋರ್ಟ್ ಬುಧವಾರ ಶಿಕ್ಷಣ ಸಚಿವಾಲಯಕ್ಕೆ ಸೂಚಿಸಿದೆ.



2019ರಲ್ಲೇ ನ್ಯಾಯಾಲಯ ಆದೇಶ ನೀಡಿದ್ದರೂ ಆರ್‌ಟಿಇ ಕಾಯ್ದೆಯನ್ನು ಈಗಿರುವ 8ನೇ ತರಗತಿಯಿಂದ 12ನೇ ತರಗತಿಯವರೆಗೂ ಏಕೆ ವಿಸ್ತರಿಸಿಲ್ಲ ಎಂದು ನ್ಯಾಯಮೂರ್ತಿ ನಜ್ಮಿ ವಜೀರಿ ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದರು.

ಈ ವಿಷಯದ ಬಗ್ಗೆ ಸರ್ಕಾರೇತರ ಸಂಸ್ಥೆ 'ಸೋಷಿಯಲ್ ಜ್ಯೂರಿಸ್ಟ್' ಅರ್ಜಿ ಸಲ್ಲಿಸಿತ್ತು.

ಕೇಂದ್ರ ಸರ್ಕಾರ ಈ ಬಗ್ಗೆ ಯಾವುದೇ ನಿರ್ಧಾರ ಕೈಗೊಳ್ಳದ ಕಾರಣ ದೇಶದಾದ್ಯಂತ ಖಾಸಗಿ ಶಾಲೆಗಳು 8ನೇ ತರಗತಿ ಉತ್ತೀರ್ಣರಾದ ಸಾವಿರಾರು ವಿದ್ಯಾರ್ಥಿಗಳನ್ನು ಹೊರಗೆ ಹಾಕುತ್ತಿವೆ ಎಂದು ಸರ್ಕಾರೇತರ ಸಂಸ್ಥೆ ಪರ ವಕೀಲರಾದ ಅಶೋಕ್ ಅಗರವಾಲ್ ಮತ್ತು ಕುಮಾರ್ ಉತ್ಕರ್ಷ್ ವಾದ ಮಂಡಿಸಿದರು.

ಈ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಶಿಕ್ಷಣ ಸಚಿವಾಲಯದ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಿದ ನ್ಯಾಯಾಲಯ ವಿಚಾರಣೆಯನ್ನು ಮಾರ್ಚ್ 17ಕ್ಕೆ ಮುಂದೂಡಿತು.

ನೂತನ ಸಂಸತ್ ಭವನ ಜಾಗದ 2 ನಿವೇಶನಗಳಲ್ಲಿ ಪ್ರಧಾನಿ ಕಚೇರಿ

ನವದೆಹಲಿ: ನೂತನ ಸಂಸತ್ ಭವನ ನಿರ್ಮಾಣಕ್ಕಾಗಿ ಮೀಸಲಾಗಿರುವ ಜಾಗದ ಎರಡೂ ನಿವೇಶನಗಳಲ್ಲಿ ಪ್ರಧಾನ ಮಂತ್ರಿ ಕಚೇರಿಯನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ದೆಹಲಿ ಅಭಿವೃದ್ಧಿ ಪ್ರಾಧಿಕಾರ ಈಗಿರುವ ಭೂಮಿಯ ಬಳಕೆಯನ್ನು ಬದಲಾಯಿಸಲು ಯೋಜನೆ ರೂಪಿಸಿದೆ. ಕಳೆದ ವಾರ ಈ ಬಗ್ಗೆ 'ಸಾರ್ವಜನಿಕ ನೋಟಿಸ್' ಅನ್ನು ಪ್ರಕಟಿಸಿದೆ. ಮೋತಿಲಾಲ್ ನೆಹರೂ ಮಾರ್ಗ ಮತ್ತು ಕೆ. ಕಾಮರಾಜ್ ಮಾರ್ಗ (ಪ್ಲಾಟ್ ನಂ.38) ನಡುವೆ ಇರುವ 9.5 ಎಕರೆ ಪ್ರದೇಶದ ನಿವೇಶನ ಹಾಗೂ ಡಾಲ್‌ಹೌಸಿ ರಸ್ತೆ ಮತ್ತು ಟು ಟು ರಸ್ತೆ ನಡುವೆ ಇರುವ ನಿವೇಶನವನ್ನು (ಪ್ಲಾಟ್ ನಂ.36) ಬದಲಾಯಿಸಲು ಉದ್ದೇಶಿಸಲಾಗಿದೆ. ಈ ಜಾಗದಲ್ಲಿ ಪ್ರಧಾನ ಮಂತ್ರಿ ಕಚೇರಿ ನಿರ್ಮಿಸುವ ಸಾಧ್ಯತೆ ಇದೆ.

ಈ ಬಗ್ಗೆ ಸಾರ್ವಜನಿಕರು 30 ದಿನಗಳ ಒಳಗೆ ಸಲಹೆಗಳು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಬೇಕು ಎಂದು ದೆಹಲಿ ಅಭಿವೃದ್ಧಿ ಪ್ರಾಧಿಕಾರ ತಿಳಿಸಿದೆ.

'ಸೆಂಟ್ರಲ್ ವಿಸ್ತಾ' ಯೋಜನೆ ಅನ್ವಯ ಹೊಸ ಸಂಸತ್ ಭವನ, ಕೇಂದ್ರೀಯ ಸಚಿವಾಲಯ, ರಾಷ್ಟ್ರಪತಿ ಭವನದಿಂದ ಇಂಡಿಯಾ ಗೇಟ್‌ವರೆಗಿನ ಮೂರು ಕಿಲೋ ಮೀಟರ್ ರಾಜಪಥ ಮಾರ್ಗ ಅಭಿವೃದ್ಧಿ, ಪ್ರಧಾನಮಂತ್ರಿಯ ಹೊಸ ನಿವಾಸ ಮತ್ತು ಪ್ರಧಾನಿ ಕಚೇರಿಯನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ಪಶ್ಚಿಮಘಟ್ಟದಲ್ಲಿ ಪೊದೆ ಕಪ್ಪೆಗಳ ಹೊಸ ತಳಿ ಪತ್ತೆ!

ಕೊಚ್ಚಿ (ಪಿಟಿಐ): ಜೀವವೈವಿಧ್ಯ ತಾಣವೆಂದೇ ಗುರುತಿಸಲ್ಪಟ್ಟ ಪಶ್ಚಿಮ ಘಟ್ಟದಲ್ಲಿ ಪೊದೆ ಕಪ್ಪೆಗಳ ಐದು ಹೊಸ ತಳಿಗಳನ್ನು ಭಾರತ ಮತ್ತು ಅಮೆರಿಕ ಸಂಶೋಧಕರು ಪತ್ತೆ ಹಚ್ಚಿದ್ದಾರೆ.

ದೆಹಲಿ ವಿಶ್ವವಿದ್ಯಾಲಯ, ಮಿನ್ನಿಸೋಟ ವಿ.ವಿ ಹಾಗೂ ಕೇರಳ ರಾಜ್ಯ ಅರಣ್ಯ ಸಂಶೋಧನಾ ಸಂಸ್ಥೆಗಳು ಜಂಟಿಯಾಗಿ ಪಶ್ಚಿಮ ಘಟ್ಟದಲ್ಲಿ ಸುಮಾರು ಹತ್ತು ವರ್ಷ ಅಧ್ಯಯನ ನಡೆಸಿದ್ದು, ಹೊಸ ತಳಿಗಳನ್ನು ಕಂಡುಹಿಡಿದಿದ್ದಾರೆ.

ಇವುಗಳು ರಾಕೋಪೊರಿಡ (Rhacophoridae) ಎನ್ನುವ ಮರಕಪ್ಪೆಗಳ ಕುಟುಂಬದ ಸದಸ್ಯ. ಈ ಅಪರೂಪದ ಕಪ್ಪೆಗಳ ಮೇಲಿನ ವಿಸ್ತಾರ ರೂಪ ವೈಜ್ಞಾನಿಕ, ಅನುವಂಶಿಕ, ಧ್ವನಿ ಜ್ಞಾನದ ಅಧ್ಯಯನ, ನಡವಳಿಕೆಗಳ ಆಧಾರದಲ್ಲಿ ಇವುಗಳನ್ನು ಹೊಸ ಪ್ರಭೇದವೆಂದು ದೃಢೀಕರಿಸಿವೆ ಎಂದು ಸಂಶೋಧಕರು ತಿಳಿಸಿದ್ದಾರೆ.

'ಪೀರ್‌ಜೆ' ನಿಯತಕಾಲಿಕದಲ್ಲಿ ಈ ಅಧ್ಯಯನ ವರದಿ ಪ್ರಕಟವಾಗಿದೆ. ಸೋನಾಲಿ ಗಾರ್ಗ್, ರಾಬಿನ್ ಸುಯೆಶ್, ಸಂದೀಪ್ ದಾಸ್, ಮಾರ್ಕ್ ಎ ಬೀ ಮತ್ತು ಪ್ರೊ.ಎಸ್. ಡಿ ಬಿಜು ಅವರು ಈ ವರದಿಯ ಲೇಖಕರು.

ಇಡುಕ್ಕಿ, ಕಡಲಾರ್ ಮತ್ತು ಪಾಲ್ಘಾಟ್ ಜಿಲ್ಲೆಯ ಸಿರುವಾಣಿಯಲ್ಲಿ ರೋರ್‌ಚೆಸ್ಟ್ ದ್ರುತಾಳು, ಕಕ್ಕಾಯಂ ಅಕ್ಕಟ್ಟು ಪ್ರದೇಶದಲ್ಲಷ್ಟೇ ಕಕ್ಕಯಮೆನ್ಸಿಸ್, ಅಗಸ್ತ್ಯಮಲೈ ಮತ್ತು ಅಣ್ಣಾಮಲೈಗಳಲ್ಲಿ ಕೈರನಿಸಿ, ವಯನಾಡ್‌ನ ಸಂಜಪ್ಪ, ಸಿರುವಾಣಿ ಬೆಟ್ಟಗಳ ವೆಳ್ಳಿಕಣ್ಣನ್ ಪತ್ತೆಯಾದ ಹೊಸ ತಳಿಯ ಕಪ್ಪೆಗಳು.

ಪ್ರಾಣಿಗಳಿಗೆ ಸುರಕ್ಷಿತ ಆವಾಸಸ್ಥಾನ ಕಲ್ಪಿಸಿ


ಮೋದಿ

ನವದೆಹಲಿ (ಪಿಟಿಐ): ವನ್ಯಜೀವಿ ಮತ್ತು ಅರಣ್ಯ ರಕ್ಷಣೆಗಾಗಿ ಕೆಲಸ ಮಾಡುತ್ತಿರುವ ಜನರನ್ನು ಶ್ಲಾಘಿಸಿದ ಪ್ರಧಾನಿ ನರೇಂದ್ರ ಮೋದಿ, ಅರಣ್ಯ ರಕ್ಷಣೆ ಮತ್ತು ಪ್ರಾಣಿಗಳಿಗೆ ಸುರಕ್ಷಿತ ಆವಾಸಸ್ಥಾನ ಕಲ್ಪಿಸಿಕೊಡುವಂತಹ ಪ್ರಯತ್ನಗಳು ನಿರಂತರವಾಗಿ ನಡೆಯಬೇಕು ಎಂದು ಹೇಳಿದರು.

ಬುಧವಾರ ವಿಶ್ವ ವನ್ಯಜೀವಿ ದಿನದ ಅಂಗವಾಗಿ ಟ್ವೀಟ್ ಮಾಡಿರುವ ಮೋದಿ, 'ವನ್ಯಜೀವಿ ಸಂರಕ್ಷಣೆಗಾಗಿ ಕೆಲಸ ಮಾಡುವ ಎಲ್ಲರಿಗೂ ಧನ್ಯವಾದ ಸಲ್ಲಿಸುತ್ತೇನೆ' ಎಂದು ಉಲ್ಲೇಖಿಸಿದ್ದಾರೆ.

ಸಿಂಹ, ಹುಲಿ ಮತ್ತು ಚಿರತೆಗಳು ಸೇರಿದಂತೆ ಭಾರತದಲ್ಲಿ ಎಲ್ಲ ವನ್ಯಜೀವಿಗಳ ಸಂಖ್ಯೆಯಲ್ಲಿ ಏರಿಕೆ ಕಾಣುತ್ತಿದ್ದೇವೆ. ಸಾಧ್ಯವಿರುವಲ್ಲೆಲ್ಲ ಅರಣ್ಯಗಳ ರಕ್ಷಣೆ ಮತ್ತು ಪ್ರಾಣಿಗಳಿಗೆ ಸುರಕ್ಷಿತ ಆವಾಸಸ್ಥಾನಗಳನ್ನು ಕಲ್ಪಿಸುವ ಕೆಲಸ ಮಾಡಬೇಕು' ಎಂದು ಟ್ವೀಟ್‌ನಲ್ಲಿ ಹೇಳಿದ್ದಾರೆ.

ಉಪ ರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ಅವರು 'ಬದ್ಧತೆಯೊಂದಿಗೆ ವನ್ಯಜೀವಿಗಳನ್ನು ರಕ್ಷಿಸುವ ಮತ್ತು ಸಂರಕ್ಷಿಸುವ ಕೆಲಸವಾಗಬೇಕು. ಪರಿಸರ ಸಮತೋಲನ ಕಾಪಾಡಿಕೊಳ್ಳುವ ಅಗತ್ಯತೆ ಬಗ್ಗೆ ಜನರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಬೇಕೆಂದು ಕರೆ ನೀಡಿದರು.

ಭಾರತ್ ಬಯೋಟೆಕ್‌ನ ಕೊವ್ಯಾಕ್ಸಿನ್ ಲಸಿಕೆ ಶೇ 80.6ರಷ್ಟು ಪರಿಣಾಮಕಾರಿ

ನವದೆಹಲಿ (ರಾಯಿಟರ್ಸ್): ದೇಶೀಯವಾಗಿ ಅಭಿವೃದ್ಧಿಪಡಿಸಲಾಗಿರುವ 'ಕೊವ್ಯಾಕ್ಸಿನ್' ಲಸಿಕೆಯು ಕೊನೆಯ ಹಂತದ ಕ್ಲಿನಿಕಲ್ ಟ್ರಯಲ್‌ನ ಮಧ್ಯಂತರ ವಿಶ್ಲೇಷಣೆ ವೇಳೆ ಶೇ 80.6ರಷ್ಟು ಪರಿಣಾಮಕಾರಿಯಾಗಿರುವುನ್ನು ತೋರಿದೆ ಎಂದು ಭಾರತ್ ಬಯೋಟೆಕ್ ಕಂಪನಿ ತಿಳಿಸಿದೆ.

ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ ಸಹಯೋಗದಲ್ಲಿ ನಡೆಸಲಾದ ಕ್ಲಿನಿಕಲ್ ಟ್ರಯಲ್‌ನಲ್ಲಿ 25,800 ಮಂದಿ ಭಾಗವಹಿಸಿದ್ದರು. ಈ ಪೈಕಿ 43 ಮಂದಿಯಲ್ಲಿ ಕೋವಿಡ್–19 ಸೋಂಕು ದೃಢಪಟ್ಟಿತ್ತು. ಇದರ ಆಧಾರದಲ್ಲಿ ಮಧ್ಯಂತರ ವಿಶ್ಲೇಷಣೆ ಸಿದ್ಧಪಡಿಸಲಾಗಿದೆ. ಆದರೆ, ಕೋವಿಡ್ ದೃಢಪಟ್ಟ 43 ಮಂದಿಯ ಪೈಕಿ 36 ಜನರನ್ನು ಪ್ರಯೋಗಗಳಿಗಷ್ಟೇ ಬಳಸಿಕೊಳ್ಳಲಾಗಿತ್ತು. 7 ಮಂದಿ ಮಾತ್ರ ಲಸಿಕೆ ಪಡೆದಿದ್ದರು. ಇದರ ಆಧಾರದಲ್ಲಿ ಲಸಿಕೆ ಶೇ 80.6ರಷ್ಟು ಪರಿಣಾಮಕಾರಿ ಎಂಬ ನಿರ್ಧಾರಕ್ಕೆ ಬರಲಾಗಿದೆ ಎಂದು ಕಂಪನಿ ತಿಳಿಸಿದೆ.

ಕೊನೆಯ ಹಂತದ ಕ್ಲಿನಿಕಲ್ ಟ್ರಯಲ್ ನಡೆಯುವುದಕ್ಕೂ ಮುನ್ನವೇ ಜನವರಿಯಲ್ಲಿ ಸರ್ಕಾರವು 'ಕೊವ್ಯಾಕ್ಸಿನ್' ತುರ್ತು ಬಳಕೆಗೆ ಅನುಮತಿ ನೀಡಿತ್ತು.

ದೇಶದಾದ್ಯಂತ ಕೋವಿಡ್ ವಿರುದ್ಧ ಲಸಿಕೆ ನೀಡಿಕೆ ಅಭಿಯಾನ ಪ್ರಗತಿಯಲ್ಲಿದೆ. ಸೋಮವಾರವಷ್ಟೇ ಪ್ರಧಾನಿ ನರೇಂದ್ರ ಮೋದಿ ಸಹ 'ಕೊವ್ಯಾಕ್ಸಿನ್' ಲಸಿಕೆ ಹಾಕಿಸಿಕೊಂಡಿದ್ದರು.

ಭಾರತದಿಂದ ಬ್ರಿಟನ್‌ಗೆ 1 ಕೋಟಿ ಲಸಿಕೆ

ನವದೆಹಲಿ (ರಾಯಿಟರ್ಸ್): ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ತಯಾರಿಸಿದ 1 ಕೋಟಿ ಆಸ್ಟ್ರಾಜೆನೆಕಾ ಕೋವಿಡ್-19 ಲಸಿಕೆ ಡೋಸ್‌ಗಳನ್ನು ಪಡೆಯಲಿದ್ದೇವೆ ಎಂದು ಬ್ರಿಟನ್ ಸರ್ಕಾರ ಪ್ರಕಟಣೆಯಲ್ಲಿ ತಿಳಿಸಿದೆ.

ವಿಶ್ವದ ಅತಿದೊಡ್ಡ ಲಸಿಕೆ ತಯಾರಕ ಸಂಸ್ಥೆಯಾದ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ, ಬಡ ಹಾಗೂ ಮಧ್ಯಮ ವರ್ಗದ ದೇಶಗಳಿಗಾಗಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಆಸ್ಟ್ರಾಜೆನೆಕಾ ಕೋವಿಡ್-19 ಲಸಿಕೆಗಳನ್ನು ಉತ್ಪಾದಿಸುತ್ತಿದೆ.

10 ಕೋಟಿ ಆಸ್ಟ್ರಾಜೆನೆಕಾ ಕೋವಿಡ್-19 ಲಸಿಕೆ ಡೋಸ್‌ಗಳಿಗಾಗಿ ಬ್ರಿಟನ್ ಆದೇಶ ಮಾಡಿದೆ. ಈ ಪೈಕಿ 1 ಕೋಟಿ ಎಸ್‌ಐಐನಿಂದ ಪೂರೈಕೆಯಾಗಲಿದೆ ಎಂದು ಬ್ರಿಟನ್ ಸರ್ಕಾರದ ವಕ್ತಾರರು ತಿಳಿಸಿದ್ದಾರೆ.

ಈ ನಡುವೆ ಪಾಶ್ಚಿಮಾತ್ಯ ಶ್ರೀಮಂತ ದೇಶಗಳು ಬಡ ದೇಶಗಳ ವೆಚ್ಚದಲ್ಲಿ ಕೋವಿಡ್-19 ಲಸಿಕೆಗಳನ್ನು ಸಂಗ್ರಹಿಸುತ್ತಿರುವುದು ಕಳವಳಕ್ಕೆ ಕಾರಣವಾಗಿದೆ. ಬಾಂಗ್ಲಾದೇಶದಿಂದ ಬ್ರೆಜಿಲ್‌ವರೆಗಿನ ಕಡಿಮೆ ಹಾಗೂ ಮಧ್ಯಮ ಆದಾಯದ ದೇಶಗಳು ಎಸ್‌ಐಐನ ಆಸ್ಟ್ರಾಜೆನೆಕಾ 'ಕೋವಿಶೀಲ್ಡ್' ಲಸಿಕೆಗಳನ್ನು ಅವಲಂಬಿಸಿದೆ. ಆದರೆ ಈಗ ಪಾಶ್ಚಿಮಾತ್ಯ ದೇಶಗಳಿಂದ ಬೇಡಿಕೆ ಹೆಚ್ಚುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ನೇತೃತ್ವದಲ್ಲಿ ಕೋವಾಕ್ಸ್ ಅಭಿಯಾನಕ್ಕೂ ಎಸ್‌ಐಐ ಕೋವಿಡ್ ಲಸಿಕೆಯನ್ನು ಪೂರೈಸುತ್ತಿದೆ.


ಹಾಗಿದ್ದರೂ ಬಡ ದೇಶಗಳಿಗೆ ಲಸಿಕೆಗಳನ್ನು ನೀಡುವ ಬದ್ಧತೆಯ ಮೇಲೆ ಯಾವುದೇ ರೀತಿ ಪರಿಣಾಮ ಬೀರುವುದಿಲ್ಲ ಎಂಬ ಎಸ್‌ಐಐ ವಾಗ್ದಾನದ ಮೇರೆಗೆ ಕೋವಿಡ್-19 ಲಸಿಕೆ ಡೋಸ್‌ಗಳನ್ನು ಸ್ವೀಕರಿಸಲು ಮುಂದಾಗಿದ್ದೇವೆ ಎಂದು ಬ್ರಿಟನ್ ಸರ್ಕಾರ ಸ್ಪಷ್ಟಪಡಿಸಿದೆ.

ಗುಜರಾತ್ ಗಲಭೆಗೆ ಬಿಜೆಪಿ ಕ್ಷಮೆ ಕೋರಲಿ: ಎನ್‌ಸಿಪಿ ಆಗ್ರಹ


ನವಾಬ್ ಮಲ್ಲಿಕ್

ಮುಂಬೈ (ಪಿಟಿಐ): 'ನಾಲ್ಕು ದಶಕಗಳ ಹಿಂದೆ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದ್ದು ಪ್ರಮಾದ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ ರೀತಿಯಲ್ಲೇ, ಎರಡು ದಶಕಗಳ ಹಿಂದೆ ಗುಜರಾತಿನಲ್ಲಿ ನಡೆದ ಗಲಭೆಯ ಕುರಿತಾಗಿ ಬಿಜೆಪಿ ಕ್ಷಮೆ ಯಾಚಿಸಬೇಕು' ಎಂದು ಬುಧವಾರ ಎನ್‌ಸಿಪಿ ಹೇಳಿದೆ.

'45 ವರ್ಷಗಳ ಬಳಿಕ ತುರ್ತು ಪರಿಸ್ಥಿತಿ ಹೇರಿದ್ದು ತಪ್ಪು ಎಂದು ರಾಹುಲ್ ಗಾಂಧಿ ಒಪ್ಪಿಕೊಂಡಿದ್ದಾರೆ. 1984ರ ಸಿಖ್ ವಿರೋಧಿ ದಂಗೆಯ ಬಗ್ಗೆಯೂ ಕಾಂಗ್ರೆಸ್ ಕ್ಷಮೆಯಾಚಿಸಿದೆ. ಈಗ ಬಿಜೆಪಿಯ ಸರದಿ. ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತ್ ದಂಗೆಯ ಕುರಿತು ತಪ್ಪೊಪ್ಪಿಕೊಳ್ಳಬೇಕು' ಎಂದು ಮಹಾರಾಷ್ಟ್ರ ಸಚಿವ ಮತ್ತು ಎನ್‌ಸಿಪಿಯ ವಕ್ತಾರ ನವಾಬ್ ಮಲ್ಲಿಕ್ ಹೇಳಿದರು.



ಉತ್ತರ ಪ್ರದೇಶ ಸರ್ಕಾರದ ವಿರುದ್ಧ ರಾಹುಲ್, ಪ್ರಿಯಾಂಕಾ ವಾಗ್ದಾಳಿ


ಪ್ರಿಯಾಂಕಾ ಗಾಂಧಿ ವಾದ್ರಾ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದಲ್ಲಿ ದಿನೇ ದಿನೇ ಕಾನೂನು ಸುವ್ಯವಸ್ಥೆ ಹದಗೆಡುತ್ತಿದೆ ಎಂದು ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾಗ್ದಾಳಿ ನಡೆಸಿದ್ದಾರೆ.

'ಉತ್ತರ ಪ್ರದೇಶದಲ್ಲಿ ಬಿಜೆಪಿ ಆಡಳಿತದ ಅವಧಿಯಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿದ್ದು, ಪ್ರತಿ ಸಮುದಾಯಕ್ಕೂ ಕಂಟಕವಾಗಿ ಪರಿಣಮಿಸಿದೆ' ಎಂದು ರಾಹುಲ್ ಗಾಂಧಿ ಅವರು # ಹಾಥರಸ್ ಮತ್ತು # ಬುಲಂದ್‌ಶಹರ್ ಹ್ಯಾಷ್‌ಟ್ಯಾಗ್‌ನೊಂದಿಗೆ ಟ್ವೀಟ್ ಮಾಡಿದ್ದಾರೆ.


'ಉತ್ತರ ಪ್ರದೇಶದಲ್ಲಿ ನಡೆಯುತ್ತಿರುವ ಅಪರಾಧ ಪ್ರಕರಣಗಳ ಬಗ್ಗೆ ಯೋಗಿ ಆದಿತ್ಯನಾಥ ಸರ್ಕಾರ ಸುಳ್ಳು ಮಾಹಿತಿ ಪ್ರಚಾರ ಮಾಡುತ್ತಿದೆ' ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಆರೋಪಿಸಿದ್ದಾರೆ.

'ಉತ್ತರ ಪ್ರದೇಶದಲ್ಲಿ ಅಪರಾಧ ಪ್ರಕರಣಗಳು ನಿರಂತರವಾಗಿ ಹೆಚ್ಚಾಗುತ್ತಿದ್ದು, ನಿತ್ಯ ಜನರು ನ್ಯಾಯಕ್ಕಾಗಿ ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ' ಎಂದು ಟೀಕಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಪ್ರಿಯಾಂಕಾ, '2018ರಲ್ಲಿ ಹಾಥರಸ್‌ನಲ್ಲಿ ಮಗಳ ಮೇಲೆ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣದ ವಿರುದ್ಧ ತಂದೆ ದೂರು ದಾಖಲಿಸಿದ್ದರು. ಪ್ರಕರಣದಲ್ಲಿ ಜೈಲು ಸೇರಿದ್ದ ಆರೋಪಿ ಮಂಗಳವಾರ ಜಾಮೀನಿನ ಮೇಲೆ ಹೊರಬಂದು, ದೂರು ಕೊಟ್ಟಿದ್ದ ತಂದೆಯನ್ನು ಹತ್ಯೆ ಮಾಡಿದ್ದಾನೆ' ಎಂದು ತಿಳಿಸಿದ್ದಾರೆ.

'ಅಪರಾಧ ವಿಚಾರದಲ್ಲಿ ಉತ್ತರ ಪ್ರದೇಶ ಸರ್ಕಾರ ಸುಳ್ಳು ಮಾಹಿತಿ ಪ್ರಚಾರ ಮಾಡುತ್ತಿದೆ. ಪ್ರತಿದಿನ ಒಂದು ಕುಟುಂಬ ಅಥವಾ ಒಬ್ಬ ವ್ಯಕ್ತಿ ನ್ಯಾಯಕ್ಕಾಗಿ ಸರ್ಕಾರವನ್ನು ಆಗ್ರಹಿಸುತ್ತಲೇ ಇದ್ದಾರೆ' ಎಂದು ಅವರು ಟ್ವೀಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ಷೇರುಪೇಟೆ ವಹಿವಾಟು ▲ 1,148



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,919
ಇಂದಿನ ಅಂತ್ಯ	15,246
▲	327
ದಿನದ ಗರಿಷ್ಠ	15,273

ವಿನಿಮಯ ದರ

$ ಡಾಲರ್	72.72
£ ಪೌಂಡ್	101.94
€ ಯುರೊ	88.04
¥ ಯೆನ್ (100ಕ್ಕೆ)	69

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹415
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹418

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1530 (1512)
ಸೋಯಾ (ರಿಫೈನ್ಡ್)	₹1182 (1190)
ಸೂರ್ಯಕಾಂತಿ (ರಿಫೈನ್ಡ್)	₹1610 (1600)
ಪಾಮೋಲಿನ್	₹1175 (1175)

1,148 ಅಂಶ ಏರಿಕೆ ಕಂಡ ಸೆನ್ಸೆಕ್ಸ್

ನವದೆಹಲಿ (ಪಿಟಿಐ): ಷೇರು ಪೇಟೆಗಳಲ್ಲಿ ಮೂರು ದಿನಗಳಿಂದ ನಡೆಯುತ್ತಿರುವ ಉತ್ಸಾಹದ ವಹಿವಾಟಿನ ಪರಿಣಾಮವಾಗಿ ಹೂಡಿಕೆದಾರರ ಸಂಪತ್ತು ₹ 9.41 ಲಕ್ಷ ಕೋಟಿಗಳಷ್ಟು ಹೆಚ್ಚಳ ಆಗಿದೆ. ಬುಧವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 1,148 ಅಂಶ ಏರಿಕೆ ಕಂಡಿದೆ. ನಿಫ್ಟಿ 327 ಅಂಶ ಏರಿಕೆ ದಾಖಲಿಸಿದೆ.

'ಬಾಂಡ್ ಗಳಿಕೆಯಲ್ಲಿನ ತೀವ್ರ ಹೆಚ್ಚಳಕ್ಕೆ ಸಂಬಂಧಿಸಿದ ಆತಂಕಗಳು ಕರಗುತ್ತಿವೆ. ಹಾಗೆಯೇ, ಆರ್ಥಿಕತೆಯ ಆರೋಗ್ಯವನ್ನು ಹೇಳುವ ಪ್ರಮುಖ ಸೂಚಕಗಳು ಒಳ್ಳೆಯ ಸುದ್ದಿ ಹೊತ್ತು ತಂದಿದ್ದು ಹೂಡಿಕೆದಾರರಲ್ಲಿ ವಿಶ್ವಾಸ ಹೆಚ್ಚಿಸಿದವು. ಜಾಗತಿಕ ಮಾರುಕಟ್ಟೆಗಳು ಕೂಡ ಒಳ್ಳೆಯ ವಹಿವಾಟು ನಡೆಸಿದವು' ಎಂದು ರಿಲಯನ್ಸ್ ಸೆಕ್ಯುರಿಟೀಸ್‌ನ ಕಾರ್ಯತಂತ್ರ ವಿಭಾಗದ ಮುಖ್ಯಸ್ಥ ಬಿನೋದ್ ಮೋದಿ ಹೇಳಿದರು.

ಜಿಗಿದ ರೂಪಾಯಿ: ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಬುಧವಾರ 65 ಪೈಸೆಗಳಷ್ಟು ಹೆಚ್ಚಳ ಆಯಿತು. 2020ರ ಸೆಪ್ಟೆಂಬರ್ ನಂತರ ಒಂದೇ ದಿನದಲ್ಲಿ ಆದ ಅತಿದೊಡ್ಡ ಚೇತರಿಕೆ ಇದು. ದಿನದ ವಹಿವಾಟಿನ ಅಂತ್ಯಕ್ಕೆ ರೂಪಾಯಿ ಮೌಲ್ಯವು 72.72 ಆಗಿತ್ತು.

ಸಕ್ಕರೆ ಉತ್ಪಾದನೆ ಶೇ 20ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): 2020–21ನೇ ಮಾರುಕಟ್ಟೆ ವರ್ಷದ ಮೊದಲ ಐದು ತಿಂಗಳಿನಲ್ಲಿ ಸಕ್ಕರೆ ಉತ್ಪಾದನೆ ಶೇ20ರಷ್ಟು ಹೆಚ್ಚಾಗಿ 233.77 ಲಕ್ಷ ಟನ್‌ಗಳಿಗೆ ಏರಿಕೆಯಾಗಿದೆ.

ಕಬ್ಬು ಉತ್ಪಾದನೆ ಹೆಚ್ಚಾಗಿರುವುದರಿಂದ ಸಕ್ಕರೆ ಉತ್ಪಾದನೆಯಲ್ಲಿ ಏರಿಕೆಯಾಗಿದೆ ಎಂದು ಐಎಸ್‌ಎಂಎ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

3-3-2020

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	9950-10000
ದಪ್ಪ ಮಧ್ಯಪ್ರದೇಶ(ಹೊಸ)	8800-8900
ದಪ್ಪ ಗುಜರಾತ್(ಹೊಸ)	9700-9800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1522)
ಒಂದು ವಾರದ ಡೆಲಿವರಿ	1535 (1517)
ಸೋಯಾ ಕಚ್ಚಾ	1155 (1155)
ಪಾಮ್ ವಾರದ ಡೆಲಿವರಿ	1173 (1173)
ಸೂರ್ಯಕಾಂತಿ ಎಣ್ಣೆ ಕಚ್ಚಾ	1570 (1560)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
44,600 (45,325)
ಬೆಳ್ಳಿ ಕೆ.ಜಿ 67,300 (67,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಲೀಟರ್‌ಗೆ ₹ 5ರವರೆಗೆ ತಗ್ಗಿಸುವ ಸಾಧ್ಯತೆ

ಚುನಾವಣೆಗೂ ಮುನ್ನ ಎಕ್ಸೈಸ್ ಸುಂಕ ಇಳಿಕೆ?

● ಅನ್ನಪೂರ್ಣಾ ಸಿಂಗ್

ನವದೆಹಲಿ: ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಕೇಂದ್ರ ಸರ್ಕಾರವು ಲೀಟರ್‌ಗೆ ₹ 5ರವರೆಗೆ ತಗ್ಗಿಸುವ ಸಾಧ್ಯತೆ ಇದೆ. ಅಲ್ಲದೆ, ಬಿಜೆಪಿ ಆಡಳಿತ ಇರುವ ರಾಜ್ಯ ಸರ್ಕಾರಗಳು ಕೂಡ ಸ್ಥಳೀಯ ತೆರಿಗೆಯನ್ನು ಇದೇ ಪ್ರಮಾಣದಲ್ಲಿ ಇಳಿಸಬೇಕು ಎಂದು ಒತ್ತಾಯಿಸುವ ಸಾಧ್ಯತೆ ಕೂಡ ಇದೆ.

ಅಸ್ಸಾಂ, ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ಮತ್ತು ಪುದುಚೇರಿ ವಿಧಾನಸಭೆಗೆ ನಡೆಯುವ ಚುನಾವಣೆಗೂ ಮೊದಲೇ ಸುಂಕ ಇಳಿಸುವ ನಿರೀಕ್ಷೆ ಇದೆ. ಈ ಚುನಾವಣೆಗಳು ಮಾರ್ಚ್ 27ರಿಂದ ಶುರುವಾಗಲಿವೆ.



ರಾಜಸ್ಥಾನ, ಮಧ್ಯಪ್ರದೇಶ ರಾಜ್ಯಗಳ ಕೆಲವು ಪ್ರದೇಶಗಳಲ್ಲಿ ಮುಕ್ತ ಮಾರುಕಟ್ಟೆಯಲ್ಲಿನ ಪೆಟ್ರೋಲ್ ಬೆಲೆ ಲೀಟರ್‌ಗೆ ₹ 100 ಗಡಿ ದಾಟಿದೆ. ಇಂಧನ ಬೆಲೆ ಹೆಚ್ಚಳವು ಸರಕು ಸಾಗಣೆ ವೆಚ್ಚವನ್ನು ಹೆಚ್ಚಿಸಿರುವುದು ಮಾತ್ರವಲ್ಲದೆ, ವಿವಿಧ ಉತ್ಪನ್ನಗಳ ಹಣದುಬ್ಬರ ಹೆಚ್ಚಾಗುವ ಸಾಧ್ಯತೆಯನ್ನೂ ತೆರೆದಿರಿಸಿದೆ.

'ವಿವಿಧ ಸಚಿವಾಲಯಗಳ (ಹಣಕಾಸು, ವಾಣಿಜ್ಯ, ಸಾರಿಗೆ ಮತ್ತು ಇಂಧನ) ನಡುವೆ, ರಾಜ್ಯ ಸರ್ಕಾರಗಳು ಹಾಗೂ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳ ಜೊತೆ ಬಿರುಸಿನ ಮಾತುಕತೆಗಳು ನಡೆಯುತ್ತಿವೆ. ಕೇಂದ್ರ ಹಾಗೂ ರಾಜ್ಯಗಳ ಬೊಕ್ಕಸದ ಮೇಲೆ ಹೊರೆ ಆಗದ ರೀತಿಯಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ತಗ್ಗಿಸುವುದು ಹೇಗೆ ಎಂಬ ಬಗ್ಗೆ ಚರ್ಚೆಗಳು ನಡೆದಿವೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಎಕ್ಸೈಸ್ ಸುಂಕ ಲೀಟರ್‌ಗೆ ₹ 5ರವರೆಗೆ ಕಡಿತ ಮಾಡಲು ಅವಕಾಶ ಇದೆ. ಆದರೆ, ರಾಜ್ಯಗಳು ಕೂಡ ತಮ್ಮ ಪಾಲಿನ ತೆರಿಗೆಯನ್ನು ಒಂದಿಷ್ಟು ಕಡಿಮೆ ಮಾಡಬೇಕು ಎಂದು ಇನ್ನೊಬ್ಬರು ಅಧಿಕಾರಿ ಹೇಳಿದರು.

ಪೆಟ್ರೋಲ್, ಡೀಸೆಲ್: ಸುಂಕ ತಗ್ಗಿಸಿದರೂ ಆದಾಯಕ್ಕಿಲ್ಲ ಕೊರತೆ

ನವದೆಹಲಿ (ಪಿಟಿಐ): ಆದಾಯ ಸಂಗ್ರಹದ ಗುರಿಗೆ ತೊಂದರೆ ಆಗದಂತೆ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಲೀಟರ್‌ಗೆ ₹ 8.5ರವರೆಗೆ ತಗ್ಗಿಸಲು ಸರ್ಕಾರಕ್ಕೆ ಅವಕಾಶವಿದೆ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

9 ತಿಂಗಳುಗಳಿಂದ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಹೆಚ್ಚಳ ಆಗುತ್ತಿದೆ. ಈಗ ಇವೆರಡರ ಮಾರುಕಟ್ಟೆ ಬೆಲೆಯು ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿ ಇದೆ. ಕೇಂದ್ರವು ಎಕ್ಸೈಸ್ ಸುಂಕವನ್ನು ತಗ್ಗಿಸಿ, ಗ್ರಾಹಕರ ಮೇಲಿನ ಹೊರೆಯನ್ನು ಕಡಿಮೆ ಮಾಡಬೇಕು ಎಂದು ವಿರೋಧ ಪಕ್ಷಗಳು ಒತ್ತಾಯಿಸುತ್ತಿವೆ.

'ಆಟೊಮೊಬೈಲ್ ಇಂಧನಗಳ ಮೇಲಿನ ಎಕ್ಸೈಸ್ ಸುಂಕವನ್ನು ತಗ್ಗಿಸದೆ ಇದ್ದರೆ 2021–22ನೇ ಸಾಲಿನಲ್ಲಿ (2021ರ ಏಪ್ರಿಲ್‌ನಿಂದ 2022ರ ಮಾರ್ಚ್ 31ರವರೆಗೆ) ₹ 4.35 ಲಕ್ಷ ಕೋಟಿ ಸಂಗ್ರಹಿಸಬಹುದು ಎಂಬುದು ನಮ್ಮ ಅಂದಾಜು. ಆದರೆ, ಈ ಬಾರಿಯ ಬಜೆಟ್ ₹ 3.2 ಲಕ್ಷ ಕೋಟಿ ಸಂಗ್ರಹಿಸುವ ಗುರಿ ಹೊಂದಿದೆ. ಹಾಗಾಗಿ, ಈ ವರ್ಷದ ಏಪ್ರಿಲ್ 1ರಂದು ಅಥವಾ ಅದಕ್ಕೂ ಮೊದಲು ಎಕ್ಸೈಸ್ ಸುಂಕವನ್ನು ಲೀಟರ್‌ಗೆ ₹ 8.5ರಂತೆ ಇಳಿಸಿದರೆ, ಬಜೆಟ್‌ನಲ್ಲಿ ಮಾಡಿರುವ ಅಂದಾಜಿನ ಪ್ರಕಾರವೇ ಆದಾಯ ಸಂಗ್ರಹ ಆಗಲಿದೆ' ಎಂದು ಐಸಿಐಸಿಐ ಸೆಕ್ಯುರಿಟೀಸ್ ಹೇಳಿದೆ.

ಬೇಡಿಕೆ ಹೆಚ್ಚಳ ಆಗುತ್ತಿರುವುದು ಹಾಗೂ ಹಣದುಬ್ಬರ ಹೆಚ್ಚಳ ಆಗಬಹುದು ಎಂಬ ಆತಂಕದ ಕಾರಣದಿಂದಾಗಿ ಸರ್ಕಾರವು ಎಕ್ಸೈಸ್ ಸುಂಕ ತಗ್ಗಿಸಬಹುದು ಎಂಬ ಆಶಾಭಾವನೆಯನ್ನು ಐಸಿಐಸಿಐ ಸೆಕ್ಯುರಿಟೀಸ್ ವ್ಯಕ್ತಪಡಿಸಿದೆ. ಆದರೆ, ಸುಂಕ ತಗ್ಗಿಸುವಿಕೆಯು ₹ 8.5ರಷ್ಟು ಇರಲಿಕ್ಕಿಲ್ಲ ಎಂದೂ ಹೇಳಿದೆ.

2020ರ ಮಾರ್ಚ್ ಹಾಗೂ ಮೇ ತಿಂಗಳ ನಡುವಿನ ಅವಧಿಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಕ್ರಮವಾಗಿ ₹ 13 ಹಾಗೂ ₹ 16ರಷ್ಟು ಹೆಚ್ಚಿಸಲಾಯಿತು. ಈಗ ಲೀಟರ್ ಪೆಟ್ರೋಲ್‌ಗೆ ₹ 32.9ರಷ್ಟು, ಡೀಸೆಲ್‌ಗೆ ₹ 31.8ರಷ್ಟು ಎಕ್ಸೈಸ್ ಸುಂಕ ವಿಧಿಸಲಾಗುತ್ತಿದೆ.

ಓಂಬುಡ್ಸ್‌ಮನ್ ವ್ಯಾಪ್ತಿಗೆ ವಿಮಾ ದಲ್ಲಾಳಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ವಿಮಾ ಓಂಬುಡ್ಸ್‌ಮನ್ ನಿಯಮದಲ್ಲಿ ತಿದ್ದುಪಡಿ ತಂದು ವಿಮಾ ದಲ್ಲಾಳಿಗಳನ್ನು ಓಂಬುಡ್ಸ್‌ಮನ್ ವ್ಯಾಪ್ತಿಗೆ ಸೇರಿಸಿದೆ. ಅಲ್ಲದೆ, ಪಾಲಿಸಿದಾರರಿಗೆ ಆನ್‌ಲೈನ್ ಮೂಲಕ ದೂರು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಬುಧವಾರ ತಿಳಿಸಿದೆ.

ಈ ಮೊದಲು ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಮಾತ್ರವೇ ಓಂಬುಡ್ಸ್‌ಮನ್‌ಗೆ ದೂರು ನೀಡಲು ಅವಕಾಶ ಇತ್ತು. ಆದರೆ, ತಿದ್ದುಪಡಿ ನಿಯಮದಲ್ಲಿ ವಿಮೆಗಾರ, ಏಜೆಂಟ್, ದಲ್ಲಾಳಿ ಮತ್ತು ಇತರೆ ಮಧ್ಯವರ್ತಿಗಳ ಕಡೆಯಿಂದ ಸೇವೆಯಲ್ಲಿ ಕೊರತೆ ಉಂಟಾದರೂ ದೂರು ನೀಡಲು ಅವಕಾಶ ನೀಡಲಾಗಿದೆ.

2017ರ ವಿಮಾ ಓಂಬುಡ್ಸ್‌ಮನ್ ನಿಯಮಗಳಿಗೆ ಸಮಗ್ರ ತಿದ್ದುಪಡಿಗಳನ್ನು ಕೇಂದ್ರ ಸರ್ಕಾರವು ಮಾರ್ಚ್ 2ರಂದು ಪ್ರಕಟಿಸಿದೆ. ವಿಮಾ ಸೇವೆಗಳಲ್ಲಿನ ನ್ಯೂನತೆಗಳ ಕುರಿತಾದ ದೂರುಗಳನ್ನು ಸಮಯಕ್ಕೆ ಸರಿಯಾಗಿ, ನಿಷ್ಪಕ್ಷಪಾತ ರೀತಿಯಲ್ಲಿ ಪರಿಹರಿಸಲು ಅನುಕೂಲ ಆಗುವಂತೆ ವಿಮಾ ಓಂಬುಡ್ಸ್‌ಮನ್ ವ್ಯವಸ್ಥೆಯ ಕಾರ್ಯವಿಧಾನದಲ್ಲಿ ಸುಧಾರಣೆ ತರುವ ಉದ್ದೇಶದಿಂದ ತಿದ್ದುಪಡಿ ಮಾಡಲಾಗಿದೆ.

ಓಂಬುಡ್ಸ್‌ಮನ್‌ಗೆ ಆನ್‌ಲೈನ್ ಮೂಲಕ ದೂರು ನೀಡಲು ಪಾಲಿಸಿದಾರರಿಗೆ ಅವಕಾಶ ಇರಲಿದೆ. ಪಾಲಿಸಿದಾರರು ತಮ್ಮ ದೂರುಗಳ ಸ್ಥಿತಿ ಏನಿದೆ ಎಂಬುದನ್ನು ಆನ್‌ಲೈನ್ ಮೂಲಕ ಗಮನಿಸಲು ಅನುಕೂಲ ಆಗುವಂತೆ ದೂರು ನಿರ್ವಹಣಾ ವ್ಯವಸ್ಥೆಯನ್ನು ರೂಪಿಸಲಾಗುತ್ತದೆ.

ಅಲ್ಲದೆ, ವಿಚಾರಣೆಗೆ ವಿಡಿಯೊ ಕಾನ್ಫರೆನ್ಸ್ ವ್ಯವಸ್ಥೆಯನ್ನು ಸಹ ಓಂಬುಡ್ಸ್‌ಮನ್ ಬಳಸಬಹುದಾಗಿದೆ.

ಸಂಕ್ಷಿಪ್ತ ಸುದ್ದಿ

ವುಷು ಟೂರ್ನಿ: ಬೆಂಗಳೂರಿಗೆ ನಾಲ್ಕು ಪದಕ

ಬೆಂಗಳೂರು: ಮೊಹಾಲಿಯ ಚಂಡೀಗಢ ವಿಶ್ವವಿದ್ಯಾಲಯ ಆವರಣದಲ್ಲಿ ನಡೆದ ರಾಷ್ಟ್ರೀಯ ಸೀನಿಯರ್ ವುಷು ಚಾಂಪಿಯನ್‌ಷಿಪ್‌ನಲ್ಲಿ ಬೆಂಗಳೂರು ಜಿಲ್ಲಾ ದಕ್ಷಿಣ ವಲಯ ವುಷು ಸಂಸ್ಥೆಯ ಮೂವರು ಪದಕ ಗಳಿಸಿದ್ದಾರೆ. ಮಹಿಳಾ ವಿಭಾಗದಲ್ಲಿ ಒಂದು ಚಿನ್ನ ಮತ್ತು ಮೂರು ಬೆಳ್ಳಿ ಪದಕಗಳು ಬೆಂಗಳೂರಿನ ವುಷು ಪಟುಗಳ ಪಾಲಾಗಿವೆ.

ಸಾಂಪ್ರದಾಯಿಕ ತಾವ್ಲು ಮತ್ತು ಡಬಲ್ ವೆಪನ್ ವಿಭಾಗದಲ್ಲಿ ಕುಸುಮಾ ಒಂದು ಚಿನ್ನ ಮತ್ತು ಒಂದು ಬೆಳ್ಳಿ ಪದಕ ಗೆದ್ದಿದ್ದಾರೆ. ಲಾಂಗ್ ವೆಪನ್ ವಿಭಾಗದಲ್ಲಿ ಪ್ರಗತಿ ಡಿ. ಕುಮಾರ್ ಮತ್ತು ಸಾಂಪ್ರದಾಯಿಕ ತಾವ್ಲು ವಿಭಾಗದಲ್ಲಿ ವಿ.ಮೋನಿಶಾ ಭಾರದ್ವಾಜ್ ಬೆಳ್ಳಿ ಗಳಿಸಿದ್ದಾರೆ.

ವೀಲ್‌ಚೇರ್ ಟೆನಿಸ್: 8ರ ಘಟ್ಟಕ್ಕೆ ಮಧುಸೂದನ್

ಬೆಂಗಳೂರು: ಉತ್ತಮ ಸಾಮರ್ಥ್ಯ ತೋರಿದ ಕರ್ನಾಟಕದ ಎಚ್. ಮಧುಸೂದನ್ ಹಾಗೂ ಶಿವ ಪ್ರಸಾದ್ ಅವರು ಇಲ್ಲಿ ನಡೆಯುತ್ತಿರುವ ಕೆಎಸ್‌ಎಲ್‌ಟಿಎ-ಎಐಟಿಎ ವೀಲ್‌ಚೇರ್ ಟೆನಿಸ್ ಟೂರ್ನಿಯ ಎಂಟರ ಘಟ್ಟಕ್ಕೆ ಲಗ್ಗೆಯಿಟ್ಟರು.

ಪುರುಷರ ಸಿಂಗಲ್ಸ್ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಬುಧವಾರ ಮಧುಸೂದನ್ 9–2ರಿಂದ ಐದನೇ ಶ್ರೇಯಾಂಕದ ಕಣ್ಣುಪಾಯನ್ ಸತ್ಯಶಿವಂ ಎದುರು ಗೆದ್ದರೆ, ಇಷ್ಟೇ ಅಂತರದಿಂದ ಶಿವಪ್ರಸಾದ್ ಅವರು ತಮಿಳುನಾಡಿನವರೇ ಆದ ಅಲೆಕ್ಸಾಂಡರ್ ಜೇಮ್ಸ್ ಅವರನ್ನು ಸೋಲಿಸಿದರು.

ಮಧುಸೂದನ್ ಅವರು ಮುಂದಿನ ಪಂದ್ಯದಲ್ಲಿ ನಾಲ್ಕನೇ ಶ್ರೇಯಾಂಕದ ಆಟಗಾರ ತಮಿಳುನಾಡಿನ ಸುಬ್ರಮಣಿಯನ್ ಬಾಲಚಂದ್ರ ಎದುರು ಆಡಲಿದ್ದಾರೆ. ಶಿವ ಪ್ರಸಾದ್ ಅವರೂ ತಮಿಳುನಾಡಿದ ಕರುಣಾಕರನ್ ಕಾರ್ತಿಕ್ ಅವರನ್ನು ಎದುರಿಸಲಿದ್ದಾರೆ.

ಅಗ್ರಶ್ರೇಯಾಂಕದ ಆಟಗಾರ ತಮಿಳುನಾಡಿನ ದುರೈ ಮರಿಯಪ್ಪನ್ ಹಾಗೂ ಎರಡನೇ ಶ್ರೇಯಾಂಕದ, ಕರ್ನಾಟಕದ ವೀರಸ್ವಾಮಿ ಶೇಖರ್ ಕೂಡ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

ಇವರಿಬ್ಬರೂ ಕ್ರಮವಾಗಿ ಕರ್ನಾಟಕದ ಎಂ.ಗೇಬ್ರಿಯಲ್ ಹಾಗೂ ಪಾಂಡುರಂಗಸ್ವಾಮಿ ಅವರನ್ನು 9–1 ಅಂತರದಿಂದ ಸೋಲಿಸಿದರು.

ಡ್ರಾ ಪಂದ್ಯದಲ್ಲಿ ಭಾರತ ಹಾಕಿ ತಂಡ


ಕ್ರೆಫೆಲ್ಡ್, ಜರ್ಮನಿ (ಪಿಟಿಐ): ಯೂರೋಪ್ ಪ್ರವಾಸದಲ್ಲಿರುವ ಭಾರತ ಹಾಕಿ ತಂಡವು ಬುಧವಾರ ಎರಡನೇ ಪಂದ್ಯದಲ್ಲಿ ಜರ್ಮನಿ ತಂಡದೊಂದಿಗೆ 1–1 ಗೋಲುಗಳ ಸಮಬಲ ಸಾಧಿಸಿತು.

ಪಂದ್ಯದ ನಾಲ್ಕನೇ ನಿಮಿಷದಲ್ಲೇ ಗೋಲು ಗಳಿಸಿದ ಜರ್ಮನ್‌ಪ್ರೀತ್ ಸಿಂಗ್ ಭಾರತ ತಂಡಕ್ಕೆ ಮುನ್ನಡೆ ತಂದುಕೊಟ್ಟಿದ್ದರು. ಆದರೆ ಸಮಬಲದ ಗೋಲು ದಾಖಲಿಸಿದ ಜರ್ಮನಿಯ ಮಾರ್ಟಿನ್ ಹನೆರ್ ಪಂದ್ಯ ಡ್ರಾ ಮಾಡಿಕೊಳ್ಳುವಲ್ಲಿ ಯಶಸ್ವಿಯಾದರು.

ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಭಾರತ ತಂಡವು, ಮೊದಲ ಪಂದ್ಯದಲ್ಲಿ 6–1ರಿಂದ ಜಯ ಗಳಿಸಿ ಸಂಪೂರ್ಣ ಪಾರಮ್ಯ ಮೆರೆದಿತ್ತು.

ಪಂದ್ಯದ ನಾಲ್ಕನೇ ನಿಮಿಷದಲ್ಲಿ ಭಾರತಕ್ಕೆ ಪೆನಾಲ್ಟಿ ಅವಕಾಶ ಸಿಕ್ಕಿತು. ಇದನ್ನು ಸೊಗಸಾದ ಹೊಡೆತದ ಮೂಲಕ ಗೋಲಾಗಿಸುವಲ್ಲಿ ಜರ್ಮನ್‌ಪ್ರೀತ್ ಯಶಸ್ವಿಯಾದರು.

ಎರಡನೇ ಕ್ವಾರ್ಟರ್‌ನಲ್ಲಿ ಪ್ರವಾಸಿ ಬಳಗ ಒತ್ತಡವನ್ನು ಹೆಚ್ಚಿಸಿತು.



ಜರ್ಮನ್‌ಪ್ರೀತ್ ಸಿಂಗ್

ಎರಡನೇ ಕ್ವಾರ್ಟರ್‌ನಲ್ಲಿ ತಾಂತ್ರಿಕ ಕೌಶಲಗಳನ್ನು ಪ್ರದರ್ಶಿಸಿದ ಜರ್ಮನಿ ತಂಡವು ಎರಡು ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಗಳಿಸಿತು. ಮೊದಲಾರ್ಧದ ಅಂತ್ಯಕ್ಕೆ ಕೆಲವೇ ನಿಮಿಷಗಳಿರುವಾಗ ಪೆನಾಲ್ಟಿ ಅವಕಾಶದಲ್ಲೇ ಮಾರ್ಟಿನ್ ಮೋಡಿ ಮಾಡಿದರು. ಪಂದ್ಯ 1–1 ಸಮಬಲವಾಯಿತು.

ಭಾರತ ತಂಡವು ಶನಿವಾರ ನಡೆಯುವ ಪಂದ್ಯದಲ್ಲಿ ಗ್ರೇಟ್ ಬ್ರಿಟನ್ ತಂಡವನ್ನು ಎದುರಿಸಲಿದೆ.

ಕ್ರಿಕೆಟ್: ಕರ್ನಾಟಕ–ಕೇರಳ ಸೆಣಸು

ಬೆಂಗಳೂರು: ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಕೇರಳ ತಂಡವನ್ನು ಎದುರಿಸಲಿದೆ. ಮಾರ್ಚ್ 8ರಂದು ನವದೆಹಲಿಯಲ್ಲಿ ಪಂದ್ಯ ನಡೆಯಲಿದೆ.

ಫೆಬ್ರುವರಿ 26ರಂದು ಎಲೀಟ್ ಸಿ ಗುಂಪಿನ ಪಂದ್ಯದಲ್ಲಿ ಉಭಯ ತಂಡಗಳು ಮುಖಾಮುಖಿಯಾಗಿದ್ದವು. ಆ ಸೆಣಸಾಟದಲ್ಲಿ ಕರ್ನಾಟಕ ತಂಡವು ಒಂಬತ್ತು ವಿಕೆಟ್‌ಗಳಿಂದ ಜಯ ಸಾಧಿಸಿತ್ತು.

ರವಿ ಕೈರವ್ ರೆಡ್ಡಿ ದ್ವಿಶತಕದ ಸೊಬಗು



ರವಿ ಕೈರವ್

ಬೆಂಗಳೂರು: ರವಿ ಕೈರವ್ ರೆಡ್ಡಿ (ಔಟಾಗದೆ 207; 153 ಎಸೆತ, 30 ಬೌಂಡರಿ, 2 ಸಿಕ್ಸರ್) ಅವರ ಸ್ಫೋಟಕ ದ್ವಿಶತಕ ಮತ್ತು ಶ್ರೇಯಸ್ ಮೊಹಾಂತಿ (ಔಟಾಗದೆ 127; 107 ಎ, 13 ಬೌಂ) ಅವರ ಶತಕದ ನೆರವಿನಿಂದ ಫ್ರೆಂಡ್ಸ್ ಯೂನಿಯರ್ ಕ್ರಿಕೆಟ್ ಕ್ಲಬ್ (2) ತಂಡ ಕೆಎಸ್‌ಸಿಎ ಗುಂಪು 1,2,3ರ ಮೂರನೇ ಡಿವಿಷನ್ 16 ವರ್ಷದೊಳಗಿನವರ ಅಂತರ ಕ್ಲಬ್ ಕ್ರಿಕೆಟ್ ಟೂರ್ನಿಯಲ್ಲಿ ಬುಧವಾರ 315 ರನ್‌ಗಳಿಂದ ಗೆದ್ದಿತು.

ಮೊದಲು ಬ್ಯಾಟಿಂಗ್ ಮಾಡಿ 401 ರನ್ ಗಳಿಸಿದ ಫ್ರೆಂಡ್ಸ್ ಯೂನಿಯನ್ ,ಬೆಂಗಳೂರು ಸ್ಪೋರ್ಟ್ಸ್ ಕ್ಲಬ್ ತಂಡವನ್ನು 86 ರನ್‌ಗಳಿಗೆ ಕೆಡವಿತು.

ಸಂಕ್ಷಿಪ್ತ ಸ್ಕೋರುಗಳು: ಫ್ರೆಂಡ್ಸ್ ಯೂನಿಯನ್ ಕ್ರಿಕೆಟ್ ಕ್ಲಬ್ (2): 50 ಓವರ್‌ಗಳಲ್ಲಿ 1 ವಿಕೆಟ್‌ಗೆ 401 (ರವಿ ಕೈರವ್ ರೆಡ್ಡಿ ಔಟಾಗದೆ 207, ವಿಷ್ಣು ಕಿರಣ್ 45, ಶ್ರೇಯಸ್ ಮೊಹಾಂತಿ ಔಟಾಗದೆ 127); ಬೆಂಗಳೂರು ಸ್ಪೋರ್ಟ್ಸ್ ಕ್ಲಬ್: 35.4 ಓವರ್‌ಗಳಲ್ಲಿ 86 (ಧನುಷ್ ಮನು 6ಕ್ಕೆ2, ಅಂಬ್ರೇಷ್ 15ಕ್ಕೆ2, ವಿಕಾಸ್ 21ಕ್ಕೆ2, ಲಕ್ಷ್ಮಿಕಾಂತ್ 8ಕ್ಕೆ2). ಫಲಿತಾಂಶ: ಫ್ರೆಂಡ್ಸ್ ಯೂನಿಯನ್‌ಗೆ 315 ರನ್‌ಗಳ ಜಯ.

ಸ್ವಸ್ತಿಕ್ ಯೂನಿಯನ್ ಕ್ರಿಕೆಟ್ ಕ್ಲಬ್ (2): 35.4 ಓವರ್‌ಗಳಲ್ಲಿ 194 (ಶಿವಂ ಎಂ.ಬಿ 61; ಆದಿತ್ಯ ನಾಯರ್ 40ಕ್ಕೆ3, ಕಾರ್ತಿಕೇಯ 39ಕ್ಕೆ4, ಅಂಶ್ ಐಮಾ 28ಕ್ಕೆ2); ವಲ್ಚರ್ಸ್ ಕ್ರಿಕೆಟ್ ಕ್ಲಬ್: 30.4 ಓವರ್‌ಗಳಲ್ಲಿ 71 (ಹಾರ್ದಿಕ್ ರಾಜ್ 15ಕ್ಕೆ4, ಅನೀಶ್ 12ಕ್ಕೆ3). ಫಲಿತಾಂಶ: ಸ್ವಸ್ತಿಕ್ ಯೂನಿಯನ್‌ಗೆ 124 ರನ್‌ಗಳ ಜಯ.

'ಸ್ವಿಸ್ ಓಪನ್ ಸೂಪರ್ 300' ಬ್ಯಾಡ್ಮಿಂಟನ್ ಟೂರ್ನಿ

ಶ್ರೀಕಾಂತ್, ಅಶ್ವಿನಿ–ಸಾತ್ವಿಕ್ ಜೋಡಿ ಜಯಭೇರಿ

ಬಾಸೆಲ್ (ಪಿಟಿಐ): ಭಾರತದ ಕಿದಂಬಿ ಶ್ರೀಕಾಂತ್ ಇಲ್ಲಿ ನಡೆಯುತ್ತಿರುವ 'ಸ್ವಿಸ್ ಓಪನ್ ಸೂಪರ್ 300' ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಜಯಭೇರಿ ಮೊಳಗಿಸಿದರು. ಬುಧವಾರ ರಾತ್ರಿ ನಡೆದ ಪಂದ್ಯದಲ್ಲಿ ಭಾರತದ ಸಮೀರ್ ವರ್ಮಾ ಅವರನ್ನು ಶ್ರೀಕಾಂತ್ 18-21 21-18, 21-11ರಲ್ಲಿ ಮಣಿಸಿದರು.

ಮೊದಲ ಸುತ್ತಿನಲ್ಲಿ ಸೌರಭ್ ವರ್ಮಾ ಕೂಡ ಜಯ ಗಳಿಸಿದರು. ಸ್ವಿಟ್ಜರ್ಲೆಂಡ್‌ನ ಕ್ರಿಸ್ಟಿಯನ್ ಕಿರ್ಚ್‌ಮಯರ್ ಅವರನ್ನು ಸೌರಭ್ 21-19, 21-18ರಲ್ಲಿ ಸೋಲಿಸಿದರು. ಆದರೆ ಎಚ್.ಎಸ್. ಪ್ರಣಯ್, ಫ್ರಾನ್ಸ್‌ನ ಮಾರ್ಕ್ ಕಲಿಜೊವ್‌ಗೆ 21–19, 9–21, 21–17ರಲ್ಲಿ ಮಣಿಸಿದರು.

ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಸ್ಕಾಟ್ಲೆಂಡ್‌ನ ಕ್ರಿಸ್ಟೋಫರ್ ಕ್ರಿಮ್ಲಿ ಮತ್ತು ಮ್ಯಾಥ್ಯೂ ಕ್ರಿಮ್ಲಿ ಅವರನ್ನು 21–18, 19–21, 21–16ರಲ್ಲಿ ಸೋಲಿಸಿದರು.

ಪ್ರೀಕ್ವಾರ್ಟರ್‌ಫೈನಲ್‌ಗೆ ಸಿಂಧು: ಮಹಿಳಾ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಟರ್ಕಿಯ ಯಿಗಿಟ್ ನೆಸ್ಲಿಹಾನ್ ಅವರನ್ನು 21–16, 21–19ರಿಂದ ಮಣಿಸಿದ ಭಾರತದ ಪಿ.ವಿ.ಸಿಂಧು ಪ್ರೀಕ್ವಾರ್ಟರ್‌ಫೈನಲ್ ತಲುಪಿದರು.



ಅಶ್ವಿನಿ ಪೊನ್ನಪ್ಪ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ —ಎಎಫ್‌ಪಿ ಚಿತ್ರ

ಮಂಗಳವಾರ ರಾತ್ರಿ ನಡೆದ ಮಿಶ್ರ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಭಾರತದ ಅಶ್ವಿನಿ ಪೊನ್ನಪ್ಪ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಭರ್ಜರಿ ಜಯ ಗಳಿಸಿದರು. ಎರಡನೇ ಶ್ರೇಯಾಂಕದ ಇಂಡೊನೇಷ್ಯಾ ಜೋಡಿ ಹಫೀಜ್ ಫೈಜಲ್ ಮತ್ತು ಗ್ಲೋರಿಯಾ ಇಮ್ಯಾನ್ಯುವೆಲಿ ಅವರನ್ನು ಅಶ್ವಿನಿ ಮತ್ತು ಸಾತ್ವಿಕ್ 21–18, 21–10ರಲ್ಲಿ ಮಣಿಸಿದರು.

ಕೋವಿಡ್–19 ಕಾಲಿಟ್ಟ ನಂತರ ಮೊದಲ ಬಾರಿ ಸ್ಪರ್ಧಾ ಕಣಕ್ಕೆ ಇಳಿದ ಪ್ರಣವ್ ಜೆರಿ ಚೋಪ್ರಾ ಮೊದಲ ಸುತ್ತಿನಲ್ಲೇ ಆಘಾತ ಅನುಭವಿಸಿದರು. ಚೋಪ್ರಾ ಮತ್ತು ಎನ್.ಸಿಕ್ಕಿ ರೆಡ್ಡಿ ಮಿಶ್ರ ಡಬಲ್ಸ್‌ನಲ್ಲಿ 18–21, 15–21ರಲ್ಲಿ ಇಂಗ್ಲೆಂಡ್‌ನ ಮಾರ್ಕಸ್ ಎಲಿಸ್ ಮತ್ತು ಲಾರೆನ್ ಸ್ಮಿತ್‌ಗೆ ಮಣಿದರು.

ಸೇವಾ ವಲಯದ ಚಟುವಟಿಕೆ ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆಯು ಫೆಬ್ರುವರಿ ತಿಂಗಳಲ್ಲಿ ಒಂದು ವರ್ಷದ ಅವಧಿಯ ಅತ್ಯಂತ ವೇಗದ ಬೆಳವಣಿಗೆ ದಾಖಲಿಸಿದೆ. ಇದೇ ವೇಳೆ, ಉದ್ಯೋಗ ಲಭ್ಯತೆ ಇನ್ನಷ್ಟು ಕಡಿಮೆಯಾಗಿದೆ. ಕಂಪನಿಗಳ ಒಟ್ಟಾರೆ ವೆಚ್ಚವು ಭಾರಿ ಏರಿಕೆ ಕಂಡಿದೆ ಎಂದು ಐಎಚ್‌ಎಸ್ ಮರ್ಕಿಟ್ ಸಂಸ್ಥೆ ಹೇಳಿದೆ.

ಸೇವಾ ವಲಯದ ಚಟುವಟಿಕೆಯನ್ನು ತಿಳಿಸುವ ಸೂಚ್ಯಂಕವು ಜನವರಿಯಲ್ಲಿ 52.8ರಷ್ಟು ಇದ್ದಿದ್ದು ಫೆಬ್ರುವರಿಯಲ್ಲಿ 55.3ಕ್ಕೆ ಏರಿಕೆಯಾಗಿದೆ. ಬೇಡಿಕೆಯಲ್ಲಿ ಸುಧಾರಣೆ ಮತ್ತು ಅನುಕೂಲಕರ ಮಾರುಕಟ್ಟೆ ಸ್ಥಿತಿಗಳಿಂದಾಗಿ ಸೇವಾ ಚಟುವಟಿಕೆಗಳು ಒಂದು ವರ್ಷದಲ್ಲಿಯೇ ಅತ್ಯಂತ ವೇಗವಾದ ಬೆಳವಣಿಗೆ ಕಂಡಿವೆ ಎಂದು ತಿಳಿಸಿದೆ.

ತಯಾರಿಕೆ ಮತ್ತು ಸೇವಾ ವಲಯದ ಒಟ್ಟಾರೆ ಬೆಳವಣಿಗೆಯನ್ನು ಸೂಚಿಸುವ ಕಾಂಪೊಸಿಟ್ ಪಿಎಂಐ ಔಟ್‌ಪುಟ್ ಇಂಡೆಕ್ಸ್ ಜನವರಿಯಲ್ಲಿ 55.8ರಷ್ಟು



ಇದ್ದಿದ್ದು ಫೆಬ್ರುವರಿಯಲ್ಲಿ 57.3ಕ್ಕೆ ಏರಿಕೆಯಾಗಿದೆ.

'2020–21ನೇ ಹಣಕಾಸು ವರ್ಷದ ಕೊನೆಯ ತ್ರೈಮಾಸಿಕದಲ್ಲಿ ಆರ್ಥಿಕ ಚಟುವಟಿಕೆಗಳು ಚೇತರಿಸಿಕೊಳ್ಳುವ ನಿರೀಕ್ಷೆ ಮಾಡಲಾಗಿದೆ. ನಾಲ್ಕನೇ ತ್ರೈಮಾಸಿಕದಲ್ಲಿ ತಯಾರಿಕಾ ವಲಯ ಉತ್ತಮ ಬೆಳವಣಿಗೆ ಕಾಣಲಿದೆ ಎನ್ನುವ ಸೂಚನೆ ದೊರೆತಿದೆ' ಎಂದು ಐಎಚ್‌ಎಸ್ ಮರ್ಕಿಟ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ. ಲಿಮಾ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	1000-1050
ನಡುಗೋಲು	1150-1250
ರಾಶಿ	1400-1450
ರಾಶಿ ಉತ್ತಮ	1500-1600
ಜರಡಿ	1700-1750
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	2000-2050
ಕಾಳು ಮೆಣಸು	325
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-40500
ಹಳತು	42500-50500
ಕುಮಟ	
ಚಿಪ್ಪು	25099-28509
ಕೋಕ	16099-27999
ಫ್ಯಾಕ್ಟರಿ	13569-17800
ಹಳೆಚಾಲಿ	39099-41899
ಹೊಸಚಾಲಿ	35569-38209
ಸಿದ್ದಾಪುರ	
ಬಿಳಿಗೋಟು	22799-31099
ಕೋಕ	18699-28800
ಚಾಲಿ	33689-37299
ಕೆಂಪುಗೋಟು	23099-29499
ರಾಶಿ	39899-41609
ತಟ್ಟಿಬೆಟ್ಟೆ	28009-41349
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	39658-43869
ಗೊರಬಲು	17200-31199
ರಾಶಿ	35669-42199
ಸರಕು	47739-73600
ಶಿವಮೊಗ್ಗ ಮ್ಯಾಮ್ಕೋಸ್	
ಬೆಟ್ಟೆ	43599-43599
ಹಸ	51109-73510
ರಾಶಿ ಇಡಿ	38800-42499
ಗೊರಬಲು	22599-32019
ಚನ್ನಗಿರಿ ತುಮ್ಕೋಸ್	
ಬೆಟ್ಟೆ	30229-34505
ರಾಶಿ	39099-42099
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	283-385
ದ್ವಿತಳಿ (ಬಿ.ವಿ)	255-458

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10050	10000	9975	135.85 ಸೆಂಟ್ಸ್
ಎಸಿ	4060	3950	3950	
ಆರ್‌ಪಿ	5300	5200	5250	
ಆರ್‌ಸಿ	3000	3150	2980	1450 ಡಾಲರ್ಸ್

ಬಾಕ್ಸಿಂಗ್: ಸೆಮಿಗೆ ಮೇರಿ, ಸಿಮ್ರನ್

ನವದೆಹಲಿ (ಪಿಟಿಐ): ಆರು ಬಾರಿಯ ವಿಶ್ವ ಚಾಂಪಿಯನ್, ಭಾರತದ ಮೇರಿ ಕೋಮ್, ಸಿಮ್ರನ್‌ಜೀತ್ ಕೌರ್ ಹಾಗೂ ಜಾಸ್ಮಿನ್ ಅವರು ಸ್ಪೇನ್‌ನಲ್ಲಿ ನಡೆಯುತ್ತಿರುವ ಬೋಕ್ಸಮ್ ಅಂತರರಾಷ್ಟ್ರೀಯ ಬಾಕ್ಸಿಂಗ್ ಟೂರ್ನಿಯ ನಾಲ್ಕರ ಘಟ್ಟ ತಲುಪಿದರು.

51 ಕೆಜಿ ವಿಭಾಗದ ಕ್ವಾರ್ಟರ್‌ಫೈನಲ್ ಬೌಟ್‌ನಲ್ಲಿ ಮೇರಿ ಅವರು ಇಟಲಿಯ ಜಿಯೋರ್ಡಾನ ಸೊರೆಂಟಿನೊ ಅವರನ್ನು ಸೋಲಿಸಿದರು.

ಎಂಟರಘಟ್ಟದ ಬೌಟ್‌ಗಳಲ್ಲಿ ಸಿಮ್ರನ್‌ಜೀತ್ ಕೌರ್ (60 ಕೆಜಿ), ಸ್ಪೇನ್‌ನ ಯೂಜಿನಾ ಅಲ್ಫೊನ್ಸ್ ಎದುರು ಗೆದ್ದರೆ, ಜಾಸ್ಮಿನ್ (57 ಕೆಜಿ) ಅವರು ಅಮೆರಿಕದ ಸೆಲ್ಮಾ ಮೇಡಿನಾ ಅವರನ್ನು ಸೋಲಿಸಿದರು.

ಮನೀಷ್ ಕೌಶಿಕ್ ಮಂಗಳವಾರ ನಡೆದ ಪುರುಷರ 63 ಕೆಜಿ ವಿಭಾಗದ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಸ್ಪೇನ್‌ನ ಅಮಾರಿ ರಡೌನೆ ವಿರುದ್ಧ ಜಯ ಗಳಿಸಿ ಎಂಟರಘಟ್ಟ ತಲುಪಿದ್ದರು.

ನಾಲ್ಕರ ಘಟ್ಟಕ್ಕೆ ಸಾನಿಯಾ–ಆ್ಯಂಡ್ರೆಜಾ

ದೋಹಾ (ಪಿಟಿಐ): ಭಾರತದ ಟೆನಿಸ್ ತಾರೆ ಸಾನಿಯಾ ಮಿರ್ಜಾ–ಸ್ಲೊವೆನಿಯಾದ ಆ್ಯಂಡ್ರೆಜಾ ಕ್ಲೆಪಾಚ್ ಜೋಡಿಯು ಕತಾರ್ ಓಪನ್ ಟೂರ್ನಿಯ ಮಹಿಳಾ ಡಬಲ್ಸ್ ವಿಭಾಗದಲ್ಲಿ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದೆ.

ಬುಧವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಈ ಜೋಡಿಯು 6-2, 6-0ರಿಂದ ಅನ್ನಾ ಬ್ಲಿಂಕೊವಾ–ಗೇಬ್ರಿಯೇಲಾ ದಾಬ್ರೊವಸ್ಕಿ ಅವರನ್ನು ಸೋಲಿಸಿತು.

ಇಂಗ್ಲೆಂಡ್ ಎದುರಿನ ನಾಲ್ಕನೇ ಟೆಸ್ಟ್: ಬೂಮ್ರಾ ಅಲಭ್ಯ; ಉಮೇಶ್ ಯಾದವ್‌ಗೆ ಅವಕಾಶ ಸಾಧ್ಯತೆ

ಡಬ್ಲ್ಯುಟಿಸಿ ಫೈನಲ್‌ನತ್ತ ಭಾರತದ ಚಿತ್ತ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಸತತ ಎರಡು ಪಂದ್ಯಗಳಲ್ಲಿ ಭರ್ಜರಿ ಜಯ ಗಳಿಸಿರುವ ಭಾರತ ಕ್ರಿಕೆಟ್ ತಂಡ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಸ್ಥಾನ ಭದ್ರಪಡಿಸುವ ಹಾದಿಯಲ್ಲಿದೆ. ಗುರುವಾರ ಇಲ್ಲಿ ಆರಂಭವಾಗಲಿರುವ ಇಂಗ್ಲೆಂಡ್ ಎದುರಿನ ನಾಲ್ಕನೇ ಹಾಗೂ ಕೊನೆಯ ಟೆಸ್ಟ್‌ನಲ್ಲಿ ಡ್ರಾ ಮಾಡಿಕೊಂಡರೂ ಭಾರತದ ಕನಸು ನನಸಾಗಲಿದೆ.

ನಾಲ್ಕು ಪಂದ್ಯಗಳ ಸರಣಿಯ ಮೊದಲ ಎರಡು ಪಂದ್ಯಗಳು ಚೆನ್ನೈನಲ್ಲಿ ನಡೆದಿದ್ದವು. ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ 227 ರನ್‌ಗಳಿಂದ ಗೆಲುವು ಸಾಧಿಸಿತ್ತು. ಮುಂದಿನ ಪಂದ್ಯದಲ್ಲಿ ತಿರುಗೇಟು ನೀಡಿದ್ದ ಭಾರತ 317 ರನ್‌ಗಳ ಭರ್ಜರಿ ಜಯ ಗಳಿಸಿತ್ತು. ಅಹಮದಾಬಾದ್‌ನ ಮೊಟೇರಾದಲ್ಲಿ ನಡೆದ ಮೊದಲ ಪಂದ್ಯದಲ್ಲಿ 10 ವಿಕೆಟ್‌ಗಳಿಂದ ಗೆದ್ದಿರುವ ತಂಡ ಈಗ ಆತ್ಮವಿಶ್ವಾಸದಲ್ಲಿದೆ.

ಎರಡೇ ದಿನಗಳಲ್ಲಿ ಮುಗಿದ ಮೊಟೇರಾ ಪಂದ್ಯ ತೀವ್ರ ಚರ್ಚೆಗೆ ಒಳಗಾಗಿದ್ದು ಅಲ್ಲಿನ ಸ್ಪಿನ್ ಪಿಚ್ ಅಚ್ಚರಿಗೆ ಕಾರಣವಾಗಿತ್ತು. ಕೊನೆಯ ಪಂದ್ಯದಲ್ಲೂ ಪಿಚ್ ಸ್ಪಿನ್ನರ್‌ಗಳಿಗೆ ನೆರವಾಗಲಿದ್ದು ಇದರ ಲಾಭ ಪಡೆದು ಸರಣಿ ಗೆಲುವಿನೊಂದಿಗೆ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪ್ರವೇಶಕ್ಕೂ ವಿರಾಟ್ ಕೊಹ್ಲಿ ಬಳಗ ಪ್ರಯತ್ನಿಸಲಿದೆ. ಈ ಪಂದ್ಯದಲ್ಲಿ ಇಂಗ್ಲೆಂಡ್ ಗೆದ್ದರೆ ಟೆಸ್ಟ್ ಸರಣಿಯನ್ನು ಡ್ರಾ ಮಾಡಿಕೊಳ್ಳುವುದರೊಂದಿಗೆ ಭಾರತವನ್ನು ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಿಂದ ಹೊರದಬ್ಬುವಲ್ಲಿ ಯಶಸ್ವಿಯಾಗಲಿದೆ. ಹಾಗಾದರೆ ಆಸ್ಟ್ರೇಲಿಯಾ ಫೈನಲ್ ಪ್ರವೇಶಿಸಲಿದೆ. ನ್ಯೂಜಿಲೆಂಡ್ ಈಗಾಗಲೇ ಪ್ರಶಸ್ತಿ ಸುತ್ತು ತಲುಪಿದೆ.


ಭಾರತ ತಂಡದ ಶುಭಮನ್ ಗಿಲ್ ಫೀಲ್ಡಿಂಗ್ ಅಭ್ಯಾಸ ಮಾಡಿದರು – ರಾಯಿಟರ್ಸ್ ಚಿತ್ರ

ಮೊಟೇರಾದ ನರೇಂದ್ರ ಮೋದಿ ಅಂಗಣದಲ್ಲಿ ನಡೆದ ಹಗಲು–ರಾತ್ರಿ ಪಂದ್ಯದಲ್ಲಿ ಸ್ಥಳೀಯ ಹೀರೊ ಅಕ್ಷರ್ ಪಟೇಲ್ ಅವರ ಸ್ಪಿನ್ ಅಸ್ತ್ರಕ್ಕೆ ಎದುರಾಳಿಗಳು ಕಂಗೆಟ್ಟಿದ್ದರು. ಯಾವ ಹಂತದಲ್ಲೂ ಭಾರತಕ್ಕೆ ಸಾಟಿಯಾಗಲು ಇಂಗ್ಲೆಂಡ್‌ಗೆ ಸಾಧ್ಯವಾಗಲಿಲ್ಲ. ನಾಲ್ಕನೇ ಪಂದ್ಯದಲ್ಲೂ ಪಿಚ್ ಸ್ಪಿನ್ನರ್‌ಗಳಿಗೆ ನೆರವಾಗುವ ಎಲ್ಲ ಲಕ್ಷಣಗಳೂ ಇವೆ ಎಂದು ಭಾರತದ ಅಜಿಂಕ್ಯ ರಹಾನೆ ಮತ್ತು ಇಂಗ್ಲೆಂಡ್‌ನ ಜ್ಯಾಕ್ ಕ್ರಾವ್ಲಿ ಅಭಿಪ್ರಾಯಪಟ್ಟಿದ್ದಾರೆ.

ನಾಯಕನಾಗಿ ವಿರಾಟ್ ಕೊಹ್ಲಿ ಅವರಿಗೂ ನಾಲ್ಕನೇ ಟೆಸ್ಟ್ ಮಹತ್ವದ್ದಾಗಿದ್ದು ಜಯ ಗಳಿಸಿದರೆ ಭಾರತ ಕಂಡ ಯಶಸ್ವಿ ನಾಯಕ ಎಂಬ ಗರಿಮೆಯನ್ನು ತಮ್ಮದಾಗಿಸಿಕೊಳ್ಳಲು ನೆರವಾಗಲಿದೆ. ಅವರು ಸ್ಪಿನ್ನರ್‌ಗಳಾದ ಅಕ್ಷರ್ ಪಟೇಲ್ ಮತ್ತು ರವಿಚಂದ್ರನ್ ಅಶ್ವಿನ್ ಮೇಲೆ ಭರವಸೆ ಇರಿಸಿದ್ದಾರೆ. ಮೊದಲ ಮೂರು ಟೆಸ್ಟ್‌ಗಳಲ್ಲಿ ಉರುಳಿದ ಇಂಗ್ಲೆಂಡ್‌ನ 60 ವಿಕೆಟ್‌ಗಳ ಪೈಕಿ 49 ವಿಕೆಟ್‌ಗಳು ಸ್ಪಿನ್ನರ್‌ಗಳ ಪಾಲಾಗಿದ್ದವು.

ಬೌಲರ್‌ಗಳ ಬಗ್ಗೆ ವಿರಾಟ್ ಕೊಹ್ಲಿಗೆ ಯಾವ ಆತಂಕವೂ ಇಲ್ಲ. ಆದರೆ ಸರಣಿಯಲ್ಲಿ ಬ್ಯಾಟ್ಸ್‌ಮನ್‌ಗಳ ಪೈಕಿ ಹೆಚ್ಚಿನವರು ಈವರೆಗೆ ನಿರೀಕ್ಷಿತ ಸಾಮರ್ಥ್ಯ ಪ್ರದರ್ಶಿಸಲಿಲ್ಲ. ಹಿಂದಿನ ನಾಲ್ಕು ಇನಿಂಗ್ಸ್‌ಗಳಲ್ಲಿ ಇಂಗ್ಲೆಂಡ್‌ನ ಬ್ಯಾಟಿಂಗ್ ಕಳಪೆಯಾಗಿದ್ದ ಕಾರಣ ಭಾರತದ ಗೆಲುವಿನ ಹಾದಿ ಸುಗಮವಾಗಿತ್ತು. ರೋಹಿತ್ ಶರ್ಮಾ ಮೂರು ಪಂದ್ಯಗಳಲ್ಲಿ ಒಟ್ಟು 296 ರನ್ ಕಲೆ ಹಾಕಿದ್ದಾರೆ. ಭಾರತದ ಪರ ಹೆಚ್ಚು ರನ್ ಗಳಿಸಿದವರ ಪಟ್ಟಿಯ ಎರಡನೇ ಸ್ಥಾನದಲ್ಲಿ ಬೌಲರ್ ಅಶ್ವಿನ್ (176) ಇದ್ದಾರೆ! ಎರಡು ಅರ್ಧಶತಕಗಳನ್ನು ಗಳಿಸಿದ್ದು ಬಿಟ್ಟರೆ ವಿರಾಟ್ ಕೊಹ್ಲಿ ಕೂಡ ಸರಣಿಯಲ್ಲಿ ಹೆಚ್ಚು ಮಿಂಚಲಿಲ್ಲ. ಅಜಿಂಕ್ಯ ರಹಾನೆ, ಚೇತೇಶ್ವರ್ ಪೂಜಾರ ಮತ್ತು ಶುಭಮನ್ ಗಿಲ್ ಲಯ ಕಂಡುಕೊಳ್ಳಬೇಕಾಗಿದೆ. ಕೊನೆಯ ಪಂದ್ಯಕ್ಕೆ ವೇಗಿ ಜಸ್‌ಪ್ರೀತ್ ಬೂಮ್ರಾ ಲಭ್ಯ ಇಲ್ಲ. ಅವರ ಸ್ಥಾನವನ್ನು ಉಮೇಶ್ ಯಾದವ್ ತುಂಬಲಿದ್ದಾರೆ. ಇಶಾಂತ್ ಶರ್ಮಾ ಮತ್ತು ಮೊಹಮ್ಮದ್ ಸಿರಾಜ್ ಅವರ ಪೈಕಿ ಒಬ್ಬರಿಗೆ ಅವಕಾಶ ಸಿಗುವ ಸಾಧ್ಯತೆ ಇದೆ.

ತಂಡದ ಆಯ್ಕೆ ಗೊಂದಲ

ಇಂಗ್ಲೆಂಡ್ ಅಂತಿಮ 11ರ ಆಯ್ಕೆಯಲ್ಲೇ ಗೊಂದಲ ಎದುರಿಸುತ್ತಿದೆ. ಹೀಗಾಗಿ ಪಂದ್ಯಗಳಲ್ಲಿ ನೈಜ ಸಾಮರ್ಥ್ಯ ತೋರಲು ತಂಡಕ್ಕೆ ಸಾಧ್ಯವಾಗುತ್ತಿಲ್ಲ. ಜೋ ರೂಟ್ ಅಮೋಘ ಬ್ಯಾಟಿಂಗ್ ಪ್ರದರ್ಶಿಸಿದ್ದು ಮೊದಲ ಟೆಸ್ಟ್‌ನ ದ್ವಿಶತಕ ಸೇರಿದಂತೆ ಮೂರು ಪಂದ್ಯಗಳಲ್ಲಿ 333 ರನ್ ಗಳಿಸಿದ್ದಾರೆ.


ಎರಡನೇ ಸ್ಥಾನದಲ್ಲಿರುವ ಬೆನ್ ಸ್ಟೋಕ್ಸ್ ಖಾತೆಯಲ್ಲಿರುವುದು 146 ರನ್ ಮಾತ್ರ. ಹೆಚ್ಚುವರಿ ಸ್ಪಿನ್ನರ್ ಇಲ್ಲದೇ ಇರುವುದು ಕೂಡ ತಂಡದ ಹಿನ್ನಡೆಗೆ ಕಾರಣವಾಗಿದೆ. ಆದರೆ ಅಗತ್ಯ ಸಂದರ್ಭದಲ್ಲಿ ಜೋ ರೂಟ್ ತಮ್ಮ ಕೈಚಳಕ ತೋರಬಲ್ಲರು ಎಂಬುದು ಸಮಾಧಾನಕರ ವಿಷಯ.

ಹಿಂದಿನ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಜೀವನಶ್ರೇಷ್ಠ 8ಕ್ಕೆ5 ವಿಕೆಟ್ ಕಬಳಿಸಿ ಅವರು ಮಿಂಚಿದ್ದರು. ಒಟ್ಟು 16 ವಿಕೆಟ್ ಉರುಳಿಸಿರುವ ಜ್ಯಾಕ್ ಲೀಚ್ ಮೇಲೆಯೂ ತಂಡ ಭರವಸೆ ಇರಿಸಿದೆ.

ತಂಡಗಳು: ಭಾರತ: ವಿರಾಟ್ ಕೊಹ್ಲಿ (ನಾಯಕ), ರೋಹಿತ್ ಶರ್ಮಾ, ಶುಭಮನ್ ಗಿಲ್, ಚೇತೇಶ್ವರ್ ಪೂಜಾರ, ಅಜಿಂಕ್ಯ ರಹಾನೆ, ರಿಷಭ್ ಪಂತ್ (ವಿಕೆಟ್ ಕೀಪರ್), ವಾಷಿಂಗ್ಟನ್ ಸುಂದರ್, ರವಿಚಂದ್ರನ್ ಅಶ್ವಿನ್, ಅಕ್ಷರ್ ಪಟೇಲ್, ಇಶಾಂತ್ ಶರ್ಮಾ, ಉಮೇಶ್ ಯಾದವ್, ಮೊಹಮ್ಮದ್ ಸಿರಾಜ್, ವೃದ್ಧಿಮಾನ್ ಸಹಾ (ವಿಕೆಟ್ ಕೀಪರ್), ಮಯಂಕ್ ಅಗರವಾಲ್, ಹಾರ್ದಿಕ್ ಪಾಂಡ್ಯ, ಕುಲದೀಪ್ ಯಾದವ್, ಕೆ.ಎಲ್.ರಾಹುಲ್.
ಇಂಗ್ಲೆಂಡ್: ಜೋ ರೂಟ್ (ನಾಯಕ), ಜೇಮ್ಸ್ ಆ್ಯಂಡರ್ಸನ್, ಜೊಫ್ರಾ ಆರ್ಚರ್, ಜಾನಿ ಬೆಸ್ಟೊ, ಡೊಮಿನಿಕ್ ಬೆಸ್, ಸ್ಟುವರ್ಟ್ ಬ್ರಾಡ್, ರೋರಿ ಬರ್ನ್ಸ್, ಜ್ಯಾಕ್ ಕ್ರಾವ್ಲಿ, ಬೆನ್ ಫೋಕ್ಸ್ (ವಿಕೆಟ್ ಕೀಪರ್), ಡ್ಯಾನ್ ಲಾರೆನ್ಸ್, ಜ್ಯಾಕ್ ಲೀಚ್, ಒಲಿ ಪೋಪ್, ಡಾಮ್ ಸಿಬ್ಲಿ, ಬೆನ್ ಸ್ಟೋಕ್ಸ್, ಒಲಿ ಸ್ಟೋನ್, ಕ್ರಿಸ್ ವೋಕ್ಸ್, ಮಾರ್ಕ್ ವುಡ್.
ಪಂದ್ಯ ಆರಂಭ: ಬೆಳಿಗ್ಗೆ 9.30.
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್.

ರ‍್ಯಾಂಕಿಂಗ್: ಕೊಹ್ಲಿಗೆ ಬಡ್ತಿ

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಅವರು ಐಸಿಸಿ ಟಿ20 ಬ್ಯಾಟ್ಸ್‌ಮನ್‌ಗಳ ರ‍್ಯಾಂಕಿಂಗ್‌ನಲ್ಲಿ ಆರನೇ ಸ್ಥಾನಕ್ಕೇರಿದ್ದಾರೆ. ಅವರು ಒಂದು ಸ್ಥಾನ ಬಡ್ತಿ ಪಡೆದಿದ್ದು, ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಕೆ.ಎಲ್. ರಾಹುಲ್ ಎರಡನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.


ವಿರಾಟ್ ಕೊಹ್ಲಿ–ಪಿಟಿಐ ಚಿತ್ರ

ರಾಹುಲ್ ಬಳಿ ಸದ್ಯ 816 ರೇಟಿಂಗ್ ಪಾಯಿಂಟ್ಸ್ ಇವೆ. ಮೊದಲ ಸ್ಥಾನದಲ್ಲಿ ಇಂಗ್ಲೆಂಡ್‌ನ ಡೇವಿಡ್ ಮಲಾನ್ (915) ಇದ್ದಾರೆ. ಕೊಹ್ಲಿ 697 ಪಾಯಿಂಟ್ಸ್ ಕಲೆ ಹಾಕಿದ್ದಾರೆ.

ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ (801) ಒಂದು ಸ್ಥಾನ ಏರಿಕೆ ಕಂಡು ಮೂರನೇ ಸ್ಥಾನದಲ್ಲಿದ್ದರೆ, ಆಸ್ಟ್ರೇಲಿಯಾದ ಆ್ಯರನ್ ಫಿಂಚ್ ಒಂದು ಸ್ಥಾನ ಕುಸಿತ ಕಂಡಿದ್ದು ನಾಲ್ಕನೇ ಸ್ಥಾನಕ್ಕೆ ಇಳಿದಿದ್ದಾರೆ. ಐದನೇ ಸ್ಥಾನದಲ್ಲಿ ದಕ್ಷಿಣ ಆಫ್ರಿಕಾದ ವ್ಯಾನ್ ಡರ್ ಡಸೆನ್ (700) ಇದ್ದಾರೆ.

ಬೌಲರ್‌ಗಳ ವಿಭಾಗದ ಅಗ್ರ ಐವರ ಪಟ್ಟಿಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಅಫ್ಗಾನಿಸ್ತಾನದ ರಶೀದ್ ಖಾನ್ (736) ಮೊದಲ ಸ್ಥಾನದಲ್ಲಿ ಮುಂದುವರಿದಿದ್ದಾರೆ. ದಕ್ಷಿಣ ಆಫ್ರಿಕಾದ ತಬ್ರೇಜ್ ಶಂಸಿ (733), ಅಫ್ಗಾನಿಸ್ತಾನದ ಮುಜೀಬುರ್ ರೆಹಮಾನ್ (730), ಇಂಗ್ಲೆಂಡ್‌ನ ಆದಿಲ್ ರಶೀದ್ (700) ಹಾಗೂ ಆಸ್ಟ್ರೇಲಿಯಾದ ಆ್ಯಡಂ ಜಂಪಾ (676) ಕ್ರಮವಾಗಿ ಎರಡರಿಂದ ಐದನೇ ಸ್ಥಾನದಲ್ಲಿರುವ ಬೌಲರ್‌ಗಳು.

ಬೌಲರ್‌ಗಳ ಅಗ್ರ 10ರ ಪಟ್ಟಿಯಲ್ಲೂ ಭಾರತದ ಯಾವುದೇ ಆಟಗಾರರು ಇಲ್ಲ.

ಕ್ಷಮೆ ಕೋರಿದ ಡೇಲ್ ಸ್ಟೇನ್

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಕ್ರಿಕೆಟ್‌ಗಿಂತ ಹಣಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಲಾಗುತ್ತದೆ ಎಂದಿದ್ದ ದಕ್ಷಿಣ ಆಫ್ರಿಕಾ ವೇಗದ ಬೌಲರ್ ಡೇಲ್ ಸ್ಟೇನ್ ಅವರು ಬುಧವಾರ ತಮ್ಮ ಹೇಳಿಕೆಗೆ ಬುಧವಾರ ಕ್ಷಮೆ ಕೋರಿದ್ದಾರೆ.


ಡೇಲ್ ಸ್ಟೇನ್

ವಿಶ್ವದ ಅತಿದೊಡ್ಡ ಟಿ–20 ಟೂರ್ನಿಯನ್ನು ಕೆಳದರ್ಜೆಗೆ ತಳ್ಳುವ ಅಥವಾ ಅವಮಾನಿಸುವ ಉದ್ದೇಶ ತನ್ನದಾಗಿರಲಿಲ್ಲ ಎಂದು ಹೇಳಿದ್ದಾರೆ.

ತನ್ನ ಹೇಳಿಕೆಯನ್ನು ಸಾಮಾಜಿಕ ಜಾಲತಾಣಗಳು ತಿರುಚಿವೆ ಎಂದು ಅವರು ಆಪಾದಿಸಿದರು.

‘ಐಪಿಎಲ್ ನನ್ನ ಮತ್ತು ಇತರ ಆಟಗಾರರ ವೃತ್ತಿಜೀವನದಲ್ಲಿ ಒಂದು ಅದ್ಭುತವಾದ ಲೀಗ್. ಅದನ್ನು ಅವಮಾನಿಸುವ ಉದ್ದೇಶ ನನ್ನ ಹೇಳಿಕೆಯಲ್ಲಿ ಇರಲಿಲ್ಲ. ಇದರಿಂದ ಯಾರಿಗಾದರೂ ನೋವಾಗಿದ್ದರೆ ಕ್ಷಮೆ ಕೋರುತ್ತೇನೆ’ ಎಂದು ಸ್ಟೇನ್ ಟ್ವೀಟ್ ಮಾಡಿದ್ದಾರೆ.

‘ಐಪಿಎಲ್‌ನಲ್ಲಿ ದೊಡ್ಡ ತಂಡಗಳಿವೆ. ಅದರಲ್ಲಿ ಖ್ಯಾತನಾಮ ಆಟಗಾರರು ಇರುತ್ತಾರೆ. ಗಳಿಸಿದ ಹಣದ ಸುತ್ತವೇ ಎಲ್ಲರ ಚಿತ್ತ ನೆಟ್ಟಿರುತ್ತದೆ. ಇದೆಲ್ಲದರ ನಡುವೆ ಎಲ್ಲೋ ಒಂದು ಕಡೆ ಕ್ರಿಕೆಟ್ ಮರೆತೇ ಹೋಗುತ್ತದೆ’ ಎಂದು ಸ್ಟೇನ್ ಹೇಳಿದ್ದರು.

ಸಂಕ್ಷಿಪ್ತ ಸುದ್ದಿ

ಈ ವರ್ಷ ಕೆಪಿಎಲ್ ಟೂರ್ನಿ: ಮೆನನ್

ಹುಬ್ಬಳ್ಳಿ: ಕರ್ನಾಟಕ ಪ್ರೀಮಿಯರ್ ಲೀಗ್ (ಕೆಪಿಎಲ್) ಕ್ರಿಕೆಟ್ ಟೂರ್ನಿಯನ್ನು ಈ ವರ್ಷ ಆಯೋಜಿಸಲಾಗುವುದು ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಕಾರ್ಯದರ್ಶಿ ಸಂತೋಷ ಮೆನನ್ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ‘ಕೋವಿಡ್–19ರಿಂದಾಗಿ ವಾರ್ಷಿಕ ವೇಳಾಪಟ್ಟಿಯಲ್ಲಿ ವ್ಯತ್ಯಾಸವಾಗಿದೆ. ಬಿಸಿಸಿಐ ಈ ವರ್ಷದ ವೇಳಾಪಟ್ಟಿಯನ್ನು ಇನ್ನೂ ಪ್ರಕಟಿಸಿಲ್ಲ. ದೇಶಿ ಟೂರ್ನಿಗಳು ಇಲ್ಲದ ದಿನಗಳಲ್ಲಿ ಕೆಪಿಎಲ್ ಆಯೋಜಿಸಲಾಗುವುದು’ ಎಂದರು.

2019-20ರ ಕೆಪಿಎಲ್ ಟೂರ್ನಿಯಲ್ಲಿ ಫಿಕ್ಸಿಂಗ್ ಪ್ರಕರಣ ಬೆಳಕಿಗೆ ಬಂದಿತ್ತು. ಆ ಬಳಿಕ ಕೆಪಿಎಲ್ ಟೂರ್ನಿ ನಡೆದಿರಲಿಲ್ಲ.

‘ಧಾರವಾಡ ವಲಯ ವ್ಯಾಪ್ತಿಯ ಮಹಿಳಾ ಕ್ರಿಕೆಟಿಗರಿಗೆ ಸ್ಥಳೀಯವಾಗಿಯೇ ಗುಣಮಟ್ಟದ ತರಬೇತಿ ಒದಗಿಸಲು ಮುಂದಿನ ವರ್ಷ ಅಕಾಡೆಮಿ ಆರಂಭಿಸಲಾಗುವುದು. ಹುಬ್ಬಳ್ಳಿ ಕ್ರೀಡಾಂಗಣದಲ್ಲಿ ನಿರ್ಮಿಸುತ್ತಿರುವ ಕಟ್ಟಡ ಹಾಗೂ ಕ್ಲಬ್ ಹೌಸ್ ಕಾಮಗಾರಿ ಆರು ತಿಂಗಳಲ್ಲಿ ಪೂರ್ಣಗೊಳ್ಳಲಿದೆ. ಇದಕ್ಕಾಗಿ ₹25 ಕೋಟಿ ಮೀಸಲಿರಿಸಲಾಗಿದೆ’ ಎಂದರು.

ಇದಕ್ಕೂ ಮೊದಲು ಕೆಎಸ್‌ಸಿಎ ಅಧ್ಯಕ್ಷ ರೋಜರ್ ಬಿನ್ನಿ, ಉಪಾಧ್ಯಕ್ಷ ಜೆ. ಅಭಿರಾಮ್, ಆಡಳಿತ ಮಂಡಳಿ ಸದಸ್ಯ ತಿಲಕ್ ನಾಯ್ಡು ಅವರು ನಿರ್ಮಾಣ ಹಂತದಲ್ಲಿರುವ ಕ್ಲಬ್ ಹೌಸ್ ಕಾಮಗಾರಿ ಪರಿಶೀಲಿಸಿದರು. ಧಾರವಾಡ ವಲಯ ನಿಮಂತ್ರಕ ಅವಿನಾಶ ಪೋತದಾರ, ಅಧ್ಯಕ್ಷ ವೀರಣ್ಣ ಸವಡಿ ಇದ್ದರು.

ಕೋವಿಡ್ ಲಸಿಕೆ ಪಡೆದ ಕಪಿಲ್

ನವದೆಹಲಿ (ಪಿಟಿಐ): ಭಾರತದ ಮಾಜಿ ಕ್ರಿಕೆಟಿಗ ಕಪಿಲ್ ದೇವ್ ಅವರು ಕೋವಿಡ್–19 ಲಸಿಕೆಯ ಮೊದಲ ಡೋಸ್‌ಅನ್ನು ಬುಧವಾರ ಇಲ್ಲಿಯ ಆಸ್ಪತ್ರೆಯೊಂದರಲ್ಲಿ ಪಡೆದರು.


ಕಪಿಲ್ ದೇವ್

ವಿಶ್ವಕಪ್ ವಿಜೇತ ತಂಡದ ನಾಯಕ, 62 ವರ್ಷದ ಕಪಿಲ್ ಅವರು ರವಿಶಾಸ್ತ್ರಿ ಬಳಿಕ ಲಸಿಕೆ ಪಡೆದ ಭಾರತದ ಎರಡನೇ ಮಾಜಿ ಕ್ರಿಕೆಟಿಗ ಆಗಿದ್ದಾರೆ. ಭಾರತ ತಂಡದ ಮುಖ್ಯ ಕೋಚ್ ರವಿಶಾಸ್ತ್ರಿ ಅವರು ಮಂಗಳವಾರ ಅಹಮದಾಬಾದ್‌ನಲ್ಲಿ ಲಸಿಕೆ ಹಾಕಿಸಿಕೊಂಡಿದ್ದರು.

ಭಾರತದಲ್ಲಿ ಕೋವಿಡ್ ಲಸಿಕಾ ಅಭಿಯಾನವು ಸೋಮವಾರ ಎರಡನೇ ಹಂತ ಪ್ರವೇಶಿಸಿತ್ತು.

13ರಿಂದ ಸೆಪಕ್ ಟಕ್ರಾ

ಹುಬ್ಬಳ್ಳಿ: ರಾಜ್ಯ ಅಮೆಚೂರ್ ಸೆಪಕ್ ಟಕ್ರಾ ಸಂಸ್ಥೆ ಇದೇ 13 ಹಾಗೂ 14ರಂದು ದಾವಣಗೆರೆಯ ಬಾಪೂಜಿ ಕಾಲೇಜು ಮೈದಾನದಲ್ಲಿ ರಾಜ್ಯಮಟ್ಟದ ಸೆಪಕ್ ಟಕ್ರಾ ಚಾಂಪಿಯನ್‌ಷಿಪ್ ಆಯೋಜಿಸಿದೆ.

ಬಾಲಕ, ಬಾಲಕಿಯರ, ಪುರುಷ ಮತ್ತು ಮಹಿಳೆಯರ ವಿಭಾಗದಲ್ಲಿ ಟೂರ್ನಿ ನಡೆಯಲಿದೆ. ಪಾಲ್ಗೊಳ್ಳುವವರು ಕ್ರೀಡಾಪಟುಗಳು ಆಧಾರ್ ಕಾರ್ಡ್ ಹಾಗೂ ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳನ್ನು ತರಬೇಕು. ರಾಷ್ಟ್ರೀಯ ಕ್ರೀಡಾಕೂಟಕ್ಕೆ ರಾಜ್ಯ ತಂಡದ ಆಯ್ಕೆಯೂ ಇದೇ ಸಂದರ್ಭದಲ್ಲಿ ನಡೆಯಲಿದೆ ಎಂದು ಸಂಸ್ಥೆಯ ಗೌರವ ಕಾರ್ಯದರ್ಶಿ ಕೇಶವ್ ಸೂರ್ಯವಂಶಿ ತಿಳಿಸಿದ್ದಾರೆ. ಮಾಹಿತಿಗೆ ಸಹಕಾರ್ಯದರ್ಶಿ ಪಿ.ಮಂಜುನಾಥ ಅವರನ್ನು (9845259121) ಸಂಪರ್ಕಿಸುವಂತೆ ತಿಳಿಸಲಾಗಿದೆ.

ಚೆಸ್: ಪ್ರಣವ್ ಆನಂದ್ ಇಂಟರ್‌ನ್ಯಾಷನಲ್ ಮಾಸ್ಟರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚೆಸ್ ಪಟು ಪ್ರಣವ್ ಆನಂದ್ ಇಂಟರ್‌ನ್ಯಾಷನಲ್ ಮಾಸ್ಟರ್ (ಐಎಂ) ಆಗಿದ್ದಾರೆ. 14 ವರ್ಷ 3 ತಿಂಗಳು ಮತ್ತು 15 ದಿನಗಳಲ್ಲಿ ಈ ಪಟ್ಟ ಅಲಂಕರಿಸಿದ ಅವರು ಕರ್ನಾಟಕದ ಅತಿ ಕಿರಿಯ ಐಎಂ ಎಂದೆನಿಸಿಕೊಂಡಿದ್ದಾರೆ ಎಂದು ಯನೈಟೆಡ್ ಕರ್ನಾಟಕ ಚೆಸ್ ಸಂಸ್ಥೆ (ಯುಕೆಸಿಎ) ಪ್ರಕಟಣೆಯಲ್ಲಿ ಬುಧವಾರ ತಿಳಿಸಿದೆ.


ಪ್ರಣವ್ ಆನಂದ್

2019ರಲ್ಲಿ ರಿಲ್ಟನ್ ಕಪ್‌ನಲ್ಲಿ ಮೊದಲ ನಾರ್ಮ್ ಗಳಿಸಿದ ಪ್ರಣವ್ ಅದೇ ವರ್ಷ ಬೀಲ್ ಮಾಸ್ಟರ್ಸ್ ಟೂರ್ನಿಯಲ್ಲಿ ಎರಡನೇ ನಾರ್ಮ್ ಗಳಿಸಿದರು. ಕಳೆದ ವರ್ಷ ಏರೋಫ್ಲಾಟ್ ಟೂರ್ನಿಯಲ್ಲಿ ಅವರಿಗೆ ಮೂರನೇ ನಾರ್ಮ್ ಲಭಿಸಿತ್ತು. ಈ ಸಂದರ್ಭದಲ್ಲಿ ಐಎಂ ಆಗಲು ಕೇವಲ 19 ಪಾಯಿಂಟ್‌ಗಳು ಬೇಕಾಗಿದ್ದವು. ಆದರೆ ಕೋವಿಡ್–19ರಿಂದಾಗಿ ಒಂದು ವರ್ಷ ಯಾವ ಟೂರ್ನಿಯಲ್ಲೂ ಆಡಿರಲಿಲ್ಲ. ಈ ವರ್ಷದ ಫೆಬ್ರುವರಿಯಲ್ಲಿ ಸರ್ಬಿಯಾದ ಬೆಲ್‌ಗ್ರೇಡ್‌ನಲ್ಲಿ ನಡೆದ ರಡ್ನಿಕಿಚೆಸ್‌ನಲ್ಲಿ ಗ್ರ್ಯಾಂಡ್‌ಮಾಸ್ಟರ್ ಸ್ಟೀಫನ್ ಜೂರಿಕ್ ವಿರುದ್ಧ ಗೆದ್ದು ಅಗತ್ಯ ಪಾಯಿಂಟ್ ಕಲೆ ಹಾಕಿದ್ದರು.

ಪ್ರಣವ್, ಕೋರಮಂಗಲದ ಆನಂದ್ ಅನಂತನಾರಾಯಣ ಮತ್ತು ಅಪರ್ಣಾ ಅವರ ಪುತ್ರ. ಫ್ರ್ಯಾಂಕ್ ಆ್ಯಂಟನಿ ಪಬ್ಲಿಕ್ ಶಾಲೆಯ ವಿದ್ಯಾರ್ಥಿಯಾಗಿದ್ದು ಮೈಸೂರಿನ ಎಲ್. ಶೇಷಾದ್ರಿ, ಬೆಂಗಳೂರಿನ ಚೆಸ್ ಶೂಟ್ಸ್ ಅಕಾಡೆಮಿಯ ಜಯರಾಂ ರಾಮಣ್ಣ ಮತ್ತು ದೆಹಲಿಯ ವಿಶಾಲ್ ಸರೀನ್ ಬಳಿ ತರಬೇತಿ ಪಡೆದಿದ್ದಾರೆ. ಸದ್ಯ ವಿ.ಸರವಣನ್ ಅವರ ಶಿಷ್ಯ ಎಂದು ಯುಕೆಸಿಎ ಪ್ರಧಾನ ಕಾರ್ಯದರ್ಶಿ ಆರ್. ಹನುಮಂತ ತಿಳಿಸಿದ್ದಾರೆ.

ಟೆನಿಸ್: ಫೈನಲ್‌ಗೆ ನಿಕ್ಷೇಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಆಟವಾಡಿದ ಕರ್ನಾಟಕದ ಬಿ.ಆರ್.ನಿಕ್ಷೇಪ್–ಅಸ್ಸಾಂನ ಶೇಕ್ ಇಫ್ತಿಕಾರ್ ಅವರು ಹೈದರಾಬಾದ್‌ನಲ್ಲಿ ನಡೆಯುತ್ತಿರುವ ಎಐಟಿಎ ರಾಷ್ಟ್ರೀಯ ರ‍್ಯಾಂಕಿಂಗ್ ಟೆನಿಸ್ ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟರು. ಬುಧವಾರ ನಡೆದ ಪುರುಷರ ಡಬಲ್ಸ್ ವಿಭಾಗದ ನಾಲ್ಕರ ಘಟ್ಟದ ಪಂದ್ಯದಲ್ಲಿ ಈ ಜೋಡಿಯು 6-4,5-7,10-6ರಿಂದ ತೆಲಂಗಾಣದ ಶಿವದೀಪ ಕೋಸರಾಜು– ಎ.ಕೆ.ರೋಹಿತ್ ಅವರನ್ನು ಪರಾಭವಗೊಳಿಸಿದರು.


ಬಿ. ಆರ್. ನಿಕ್ಷೇಪ್

ಬೆಂಗಳೂರಿನ ಸುರಾನ ಕಾಲೇಜಿನ ವಿದ್ಯಾರ್ಥಿ ನಿಕ್ಷೇಪ್–ಇಫ್ತಿಕಾರ್ ಅವರು ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಅಗ್ರಶ್ರೇಯಾಂಕದ ತಮಿಳುನಾಡಿನ ಇರ್ಫಾನ್ ಹುಸೇನ್–ಇಹಸಾನ್ ಹುಸೇನ್ ಅವರಿಗೆ ಮುಖಾಮುಖಿಯಾಗಲಿದ್ದಾರೆ.